# ಕರ್ಮವೀರ

ಹುಬ್ಬಳ್ಳಿ ತಾ. ೧೫-೧೧-೪೮

ಸಂಪುಟ ೨೮ ]　　[ ಸಂಚಿಕೆ ೨೯

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ ]

[ ಸಂಸ್ಥಾಪಕರು— ನಿರ್ದೇಶಕರು:
ರಂ. ರಾ. ದಿವಾಕರ


ರೂಢಿಯೆಂಬುದು ಮೂಢರ ಕಟ್ಟಳೆ

— ವಾನ್ ಬರ್ಗ್

★

...ಡುಗೈ ಬಂಟತನ ಬೇಡ: ...ಮಾನತ್ವದ ಕಟ್ಟಳೆಗಳನ್ನು ಮಾಡಿರಿ: ಪ್ರಾಣಕ್ಕೂ ವಿತ್ತಕ್ಕೂ ಸುರಕ್ಷಿತತೆ ಇರಲಿ; ಆಗ ನೀವು ಭಿಕ್ಷೆ ಕೊಡುವ ಅವಶ್ಯಕತೆಯೆ ಉಳಿಯುವದಿಲ್ಲ.

— ಎಮರ್ಸನ್

★


ಒಬ್ಬಾತನು ಯುದ್ಧದಲ್ಲಿ ಕೋಟಿ ವೀರರನ್ನು ಗೆಲ್ಲುತ್ತಾನೆ; ಇನ್ನೊಬ್ಬನು ತನ್ನನ್ನೇ ತಾನು ಗೆಲ್ಲುತ್ತಾನೆ. ಇವರಿಬ್ಬರಲ್ಲಿ ತನ್ನನ್ನು ತಾನು ಗೆದ್ದವನೇ ದೊಡ್ಡ ವಿಜೇತನೆನ್ನಬೇಕು.

— ಧಮ್ಮಪದ

★

ಜಗತ್ತನ್ನು ತಿದ್ದುವ ಹಂಬಲವಾಗಿದ್ದರೆ, ಮೊದಲು ನಮ್ಮನ್ನೇ ನಾವು ತಿದ್ದಿಕೊಳ್ಳಬೇಕು; ಮತ್ತು ನಮ್ಮ ಮಕ್ಕಳು ನಮ್ಮಂತೆ ಆಗದೆ ಅವರು ಹೇಗಾಗುವದು ಶ್ರೇಯಸ್ಕರವೋ ಹಾಗಾಗುವಂತೆ ನೋಡಿಕೊಳ್ಳಬೇಕು.

— ವಿಲಿಯಂ ಪೆನ್




## ಅಧ್ಯಕ್ಷ ಹ್ಯಾರಿ ಟ್ರೂಮನ್

★

ಹ್ಯಾರಿ ಟ್ರೂಮನ್ನರು ಎಲ್ಲ ನಿರೀಕ್ಷೆಗಳನ್ನು ಸುಳ್ಳುಗಳೆದು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಾಗಿ ಆರಿಸಿ ಬಂದಿದ್ದಾರೆ. ಅವರು ಪುನಃ ಆರಿಸಿ ಬಂದದ್ದರಿಂದ ಜಾಗತಿಕ ರಾಜಕಾರಣದ ಮೇಲೆ ಮಹತ್ವದ ಪರಿಣಾಮವಾಗದಿರದು.






KARMAVEER　KANNADA ILLUSTRATED ...

ಚಿಕ್ಕಕತೆ

# ರಸನಿಮಿಷಗಳು

ಲೇ:—
ವೀ. ಪುಟ್ಟಮಾದಪ್ಪ

ಒಟ್ಟು ೩೬ ತಾಸುಗಳ ಪ್ರಯಾಣ. ಮಧ್ಯೆ ಸುಸುಪ್ತಿ ಇಲ್ಲದುದು ಸುಸುಪ್ತಿ ವಿರಾಮವಿಲ್ಲ. ಮುಂದೆ ಮುಂದೆ ಧಾವಿಸುತ್ತಿದ್ದ ಬಂಡಿಯೊಳಕ್ಕೆ ಸುಯ್ಯೆಂದು ಶೀತಳ ಗಾಳಿ ತೂರಿ ಬಂದು ಮುಖವನ್ನೆಲ್ಲಾ ಮಂಜಿನಾತಾಗಿಸಿತ್ತು. ತಲೆಗೂದಲು ಅಸ್ತವ್ಯಸ್ತಗೊಂಡು ಮುಖವನ್ನು ಮುಚ್ಚಿತ್ತು. ಗಾಳಿಗೆದುರಾಗಿ ಮುಖವನ್ನು ಕಿಟಕಿಯಲ್ಲಿಟ್ಟು ಹೊರಗಣ ನೀರವ ಪ್ರಪಂಚವನ್ನು ದಿಟ್ಟಿಸಿದೆ. ಇಳೆಯು ನೀರವತೆಯಲ್ಲಿ ಮೌನ ವ್ರತವನ್ನಾಚರಿಸಿ ಕೇಳದೊಗವಾಗಿ ನಿಂತಿದ್ದ ಸುತ್ತಣ ಮರಗಳೆಲ್ಲಾ ಹಿಂದೆ ಹಿಂದೆ ಓಡುತ್ತಿದ್ದವು. ನನ್ನೊಡನೆ ಚಂದ್ರನೂ ಎರಲ್ಪಟ್ಟಿಯಲ್ಲಿ ಮುಂದು ಮುಂದಕ್ಕೆ ಧಾವಿಸುತ್ತಿದ್ದ. ಗಾಳಿಯಲ್ಲಿ ತೂರಿಬರುತ್ತಿದ್ದ ಮಣ್ಣಿನ ಕಣಗಳು ಕಣ್ಣಲ್ಲಿ ಬೀಳದಂತೆ ಎವೆ ಮುಚ್ಚಿದೆ. ಬಂಡಿಯೊಳಗಣ ನನ್ನ ಜೊತೆ ಪಯಣಿಗರೆಲ್ಲಾ ನಿದ್ರಿಸುತ್ತಿದ್ದರು. ನಾನೂ ಹಲವಾರು ಸಲ ನಿದ್ರಿಸಲು ಪ್ರಯತ್ನಪಟ್ಟೆ. ನನ್ನ ಪ್ರಯತ್ನ ವಿಫಲವಾಯಿತು. ಎವೆ ಮುಚ್ಚಿದರೆ ಸಾಕು ಆಕೆಯ ರೂಪು ಮುಂದೆ ಬಂದು ನಿಲ್ಲುತ್ತಿತ್ತು. ಹಿಂದಿನ ದಿನ ತಾನೇ ವೈದ್ಯರು "ನಿನ್ನ ಆರೋಗ್ಯ ಸರಿಯಿಲ್ಲ. ಒಂದೆರಡು ವಾರ ವಿರಾಮದಿಂದಿರು. ಮನಸ್ಸಿಗೆ ಬಹಳ ಹಚ್ಚಿಕೊಳ್ಳಬೇಡ" ಎಂದಿದ್ದರು. ಆ ವೈದ್ಯರೇ ಬಾಗಿಲ ಬಳಿನಿಂತು ನಗುತ್ತ "ಮನೆಯಲ್ಲಿರುವವ ನೀನೊಬ್ಬ, ಹೆಂಡತಿಯಿಲ್ಲ—ಮಕ್ಕಳಿಲ್ಲ. ಅದೆಂತಹ ಯೋಚನೆ? ಸುಖವಾಗಿ ಹಾಯಾಗಿರಬಾರದೇ" ಎಂದಿದ್ದರು. ಹೌದು, ಹಾಯಾಗಿರು ಎನ್ನಲು ವೈದ್ಯರಿಗೇನೋ ಬಹುಸುಲಭ. ಆದರೆ ಅವರಿಗೆ ಹೇಗೆ ತಿಳಿಯಬೇಕು ನನ್ನ ಮಾನಸಿಕಸ್ಥಿತಿ? ವೈದ್ಯರ ಹೇಳಿಕೆಯ ಮೇರೆಗೆ ವಿರಾಮ ಪಡೆಯಲು ಕಚೇರಿಯಿಂದ ಎರಡು ವಾರಗಳ ರಜವೇನೋ ಪಡೆದುದಾಯಿತು. ಆದರೆ ರಜೆ ಪಡೆದ ಮೇಲೆ ಮನೆಯಲ್ಲಿ ತೆಪ್ಪಗೆ ಕುಳಿತಿರಲು ಒಂದೆರಡು ದಿನಗಳಿಗೇ ಬೇಸರವಾಯಿತು. ಅಷ್ಟರಲ್ಲಿ ಯೋಚನೆಯೊಂದು ತಲೆಹಾಕಿತು. ಒಮ್ಮೆ ಹೋಗಿ ಆಕೆಯನ್ನು ಏಕೆ, ನೋಡಿ ಬರಬಾರದು? ಆಕೆಯನ್ನು ನೋಡಿಯೇ ೬—೭ ವರುಷಗಳು ಸಂದಿದ್ದುವು. ಮಧ್ಯೆ ನಾನೇನೋ ಕಾಗದಗಳನ್ನು ಬರೆಯುತ್ತಿದ್ದೆ. ಹಲವಾರು ಕಾಗದಗಳಲ್ಲಿ ಹುಚ್ಚು ಹುಚ್ಚಾಗಿ ಏನೇನೋ ಬರೆದಿದ್ದೆ. ನನಗೆ ಜವಾಬು ಬರೆಯಲು ಆಕೆಯನ್ನು ಎಷ್ಟೋ ಬಾರಿ ಪ್ರಾರ್ಥಿಸಿ ಬರೆದಿದ್ದೆ. ಆದರೆ ಆಕೆಯಿಂದ ನನಗೆ ಕಾಗದ ಒಂದಾದರೂ ಬಂದಿರಲಿಲ್ಲ. ಆಕೆಯನ್ನು ಕಾಣದೆ, ಆಕೆಯ ಸ್ಥಿತಿಗತಿಗಳನ್ನೂ ಅರಿಯದೆ ಒಟ್ಟು ೭ ವರುಷಗಳನ್ನು ಕಳೆದೆನಲ್ಲಾ ಎಂದು ನನಗೆ ಇಂದು ಆಶ್ಚರ್ಯವಾಯಿತು. ಹಿಂದೆ ಸುಮಾರು ೮—೧೦ ವರುಷಗಳ ಹಿಂದೆ- ಆಕೆಯನ್ನು ದಿನಕ್ಕೆ ಒಮ್ಮೆಯಾದರೂ ನೋಡದೆ ಇರುತ್ತಿರಲಿಲ್ಲ. ಯಾವುದಾದರೂ ನೆವದಿಂದ ಆಕೆಯ ಮನೆಗೆ ಹೋಗಿ ಆಕೆಯನ್ನು ನೋಡಿ ಬರುತ್ತಿದ್ದೆ. ಊರುಬಿಟ್ಟು ಹೋಗುವ ಪ್ರಸಂಗ ಯಾವುದಾದರೂ ಬಿದ್ದರೆ, ಪ್ರತಿದಿನವೂ ತಪ್ಪದೆ ಆಕೆಗೆ ಕಾಗದ ಬರೆಯುತ್ತಿದ್ದೆ. ನನ್ನ ಸ್ನೇಹಿತ ನನಗೆ ಆಗಾಗ ಹೇಳುತ್ತಿದ್ದ, "ನಿನಗೊಂದು ಹುಚ್ಚು ಮಾಧು, ಪ್ರಪಂಚ ಏನೆಂದು ನಿನಗೆ ತಿಳಿಯದು." ಹೌದು, ನನ್ನ ಸ್ನೇಹಿತನ ಮಾತುಗಳಲ್ಲಿನ ಸತ್ಯಾಂಶ ನನಗೀಗ ತಿಳಿದಿದೆ. ಪೂರ್ತಿ ತಿಳಿಯದಿದ್ದರೂ ಸ್ವಲ್ಪ ಭಾಗವಾದರೂ ತಿಳಿದಿದೆ.

ಇದ್ದಕ್ಕಿದ್ದಂತೆಯೇ ಹಾಡೊಂದು ನನ್ನ ಕಿವಿಯ ಮೇಲೆ ಬಿದ್ದಿತು. ಚಕಿತನಾಗಿ ಎದ್ದು ಕುಳಿತೆ. ಅದೇ ಹಾಡನ್ನು ನಾನು ಹಿಂದೆ ಬಹಳ ಬಾರಿ ಕೇಳಿದ್ದೆ. ಆಕೆಯಿಂದ ಪೀಡಿಸಿ ಮತ್ತೆ ಮತ್ತೆ ಹಾಡಿಸಿದ್ದೆ ಯಾವುದೋ ಚಲನ ಚಿತ್ರದ ಗಾನವದು—ಓ, ಹೌದು, ಸೈಗಲನ ಗಾನ . . . ಕರೂಂಕ್ಯಾ ಆಶ ನಿರಾಶ ಬಯೀ . .— ಸೈಗಲನಿಗಿಂತಲೂ ಆಕೆಯೇ ಆ ಹಾಡನ್ನು ಚೆನ್ನಾಗಿ ಹಾಡುತ್ತಿದ್ದಳೆಂದು ನನ್ನ ಭಾವನೆ. ಆ ಹಾಡಿಗಿಂತಲೂ ಮತ್ತೊಂದು ಹಾಡನ್ನು ಆಕೆ ಇನ್ನೂ ಸುಶ್ರಾವ್ಯವಾಗಿ ಹಾಡುತ್ತಿದ್ದಳು "ಮನ ಮೋಹನ ಮುಖುಡ ಮೂಡ್ ಗಯೇ" ಎಂಬ ಹಾಡದು. ಸುಮಾರು ಜ್ಯೋತ್ಸ್ನೆ ಚೆಲ್ಲಿರುವ ರಾತ್ರಿ. ತಂಗಾಳಿಯ ಮಧುರ ಸ್ಪರ್ಶ . . . ಸ್ತಬ್ಧತೆಯಿಂದ ನಿಂತಿರುವ ಗಿಡಗಳ ಸಾಲು . . . . ಹಸುರಿನ ಮೇಲೆ ಹರಡಿರುವ ಅವುಗಳ ನೆಳಲು—ಇವುಗಳೆಲ್ಲರ ಹಿಂದೆ ಅನತಿದೂರದಲ್ಲಿ ಮಿನುಗುತ್ತಿರುವ ತಾರೆಗಳಿಂದ ಸ್ವಾಗತಿಸಲ್ಪಟ್ಟು, ಮೆಲ್ಲನೆ ಮೇಲೇಳುತ್ತಿರುವ ಚಂದ್ರ. ಆ ನೀರವ ಪ್ರಕೃತಿಯ ಸೊಬಗಿಗೆ ಮೈಮರೆತು ಮರವೊಂದಕ್ಕೆ ಆತು ಆಕೆ ನಿಂತಿರುತ್ತಿದ್ದಳು. ಕೆಂಪನೆಯ ಮಂಜು ಕೆನ್ನೆಗಳ ಮೇಲೆ ಬೆಳ್ನೆಯ ಬೆಳಕು ಬಿದ್ದು ನರ್ತಿಸುತ್ತಿತ್ತು. ಎವೆ ಕೂದಲುಗಳ ವಿರಳತದ ನೆಳಲು ಸುಳಿದು ಮಾಯವಾಗುತ್ತಿತ್ತು. ಹುಲ್ಲಿನ ಮೇಲೆ ಕುಳಿತಿರುತ್ತಿದ್ದ ನಾನು ಆಕೆಯನ್ನು ಹಾಡಲು ಪ್ರಾರ್ಥಿಸುತ್ತಿದ್ದೆ. ಆಗ ನೆನಪುಗಳ ಛಾಯೆ ಆಕೆಯ ಕಣ್ಣುಗಳಲ್ಲಿ ಸುಳಿದು ಮಾಯವಾಗುತ್ತಿತ್ತು. ಎರಡು ಕೈಗಳನ್ನೂ ಹಿಂದಕ್ಕೆ ಬಿಟ್ಟು ಗಿಡದ ಬುಡವನ್ನು ಹಿಡಿದು ಶಿಂಶುವ ದೃಷ್ಟಿಯನ್ನು ಸುತ್ತಲೂ ಹರಿಯಬಿಟ್ಟು ಹಾಡಲು ಪ್ರಾರಂಭಿಸುತ್ತಿದ್ದಳು. ವನದ ಪ್ರಶಾಂತತೆಯಲ್ಲಿ ಸುಶ್ರಾವ್ಯ ಗಾನಲಹರಿ ನೆನಪುಗಳ ಸರಣಿಯೊಡನೆ ಹರಿದು ಬರುತ್ತಿತ್ತು. ಒಮ್ಮೊಮ್ಮೆ "ಮನ ಮೋಹನ ಮುಖುಡಾ" ಹಾಡನ್ನು ಹಾಡಿ ಮುಗಿಸಿದ ಬಳಿಕ ಆಕೆಯ ಕೆನ್ನೆಗಳ ಮೇಲೆ ಹನಿಗಳು ಜಾರುತ್ತಿದ್ದವು. ಎಚ್ಚರಗೊಂಡ ನಾನು ಆಕೆಯ ಬಳಿ ಸಾರ್ದು, ಹೇಳುತ್ತಿದ್ದೆ, "ಮಾನವ ಜೀವನದಲ್ಲಿ ಆಶೆ, ನಿರಾಶೆಗಳ ಸಂಖ್ಯೆಗೆ ಕಡಿಮೆ ಇಲ್ಲ. ನಿರಾಶೆಯ ಅಂಧಕಾರದಲ್ಲಿ ನೀನು ಈ ಪ್ರಪಂಚವೇ ತುಚ್ಛವಾದದ್ದು ಎಂದು ಹೇಳುವುದು ಸಹಜವೇ. ಆದರೆ ಪ್ರತಿಯೊಬ್ಬ ಮಾನವನು ನೀನೆಣಿಸಿದಷ್ಟು ನಿಷ್ಕರುಣನಾಗಿರುವುದಿಲ್ಲ. ನಿನ್ನ ಹಿಂದಿನ ಭಗ್ನ ಪ್ರೇಮ ನಿನ್ನ ಹೃದಯದ ಮೇಲೆ ಮಾಡಿಸಿರುವ ಆಘಾತವನ್ನು ನಾನು ಚೆನ್ನಾಗಿ ಅರಿತಿದ್ದೇನೆ. ಅದಕ್ಕಾಗಿ ನಾನೂ ವ್ಯಥೆ ಪಟ್ಟಿದ್ದೇನೆ. ಆ ನಿನ್ನ ವ್ಯಥೆಯನ್ನು ಹೋಗಲಾಡಿಸಲು ನಾನೂ ಸಾಕಷ್ಟು ಪ್ರಯತ್ನಿಸುತ್ತೇನೆ. ನನ್ನ ಮಾತುಗಳಲ್ಲಿ ವಿಶ್ವಾಸವಿಡು. ಪ್ರತಿಯೊಬ್ಬನೂ ನಿನಗೆ ಮೋಸಗೊಳಿಸಲಾರ. ನಿನ್ನ ಆನಂದಕ್ಕೆ ನನ್ನ ಪ್ರಾಣವನ್ನೇ ಮುಡುಪಿಡುತ್ತೇನೆ. ನಿನ್ನಲ್ಲಿರುವ ನನ್ನ ಪ್ರೇಮವು ಚಿರಾಯುವಾದದ್ದು, ಶಾಶ್ವತವಾದದ್ದು." ಆ ಸಮಯಗಳಲ್ಲಿ ಆಕೆ ನಗಲು ಹವಣಿಸುತ್ತಿದ್ದಳು. ಅಂತಹ ಸಮಯಗಳಲ್ಲಿ ನನಗೆ ಆಕೆಯನ್ನು ಮೋಸಗೊಳಿಸಿದ ವ್ಯಕ್ತಿಯ ಮೇಲೆ ಸೇಡು ತೀರಿಸಿಕೊಳ್ಳೋಣವೇ ಎಂದು ಅನಿಸುತ್ತಿತ್ತು. ಆದರೆ ನನ್ನ ಸೇಡು ಆಕೆಯ ದಿರುಸ ವೇದನೆಯನ್ನು-ದ್ವಿಗುಣಿತಗೊಳಿಸುತ್ತಿತ್ತೆಂಬುದರಲ್ಲಿ ಸಂದೇಹವಿರಲಿಲ್ಲ. ಆಕೆಯನ್ನು ಸಂತಸದಲ್ಲಿಡಲು ನನ್ನ ಕೈಲಾದಷ್ಟು ಹವಣಿಸಿದೆ. ಕೊನೆಗೊಂದು ದಿವ, ನಾನು ಆಕೆಯನ್ನು ವಿವಾಹವಾಗುವೆನೆಂದು ಉಸುರಿದೆ. ಅಚ್ಚರಿಗೊಂಡು ಆಕೆ ತಲೆ ಎತ್ತಿದಳು. ಆಕೆಯ ಕಣ್ಣುಗಳಲ್ಲಿ ಆಸೆಯ ಬೆಳಕು ಮೂಡಿತು. ಆಕೆಯಿಂದ ಮಾರುತ್ತರವೇನೋ ಬರಲಿಲ್ಲ. ಆದರೆ ನನಗೆ ಮಾತ್ರ ತಿಳಿದಿತ್ತು, ಆಕೆ ನನ್ನನ್ನು ಅಗಲಿ ಜೀವಿಸಿರಲಾರಳೆಂದು.

ಆದರೆ ವಿಧಿ ಬೇರೊಂದು ಬಗೆದಿತ್ತು. ಆಕೆಯೇನೋ ಪ್ರೀತಿಸಿದವನನ್ನೇ ಮದುವೆಯಾಗಿ ಬೇರೆಯೂರಿಗೆ ಹೊರಟು ಹೋದಳು. ಹಿಂದುಳಿದವನು ಮಾತ್ರ ನಾನು. ಆಕೆಯ ಪ್ರಥಮ ಪ್ರೇಮಿಯ ಪ್ರಥಮ ಪತ್ನಿ ಮಡಿದು ಆತ ಮತ್ತೆ ಈಕೆಯನ್ನೇ ದ್ವಿತೀಯ ವಿವಾಹವಾಗಿ ತಾನಿದ್ದೂರಿಗೆ ಕರೆಳಿದ್ದ. ಒಂದು ದಿನ ತನ್ನ ವಿವಾಹದ ಸಂತಸ ವಾರ್ತೆಯನ್ನು ಆಕೆ ನಗುತ್ತ ನನಗೆ ತಿಳಿಸಿದಳು. ನಾನು "ಬಹಳ ಸಂತೋಷ" ಎಂದು ಮಾತ್ರ ಹೇಳಿದ್ದೆ. ಆದರೆ ನನಗೆ ತಿಳಿದಿತ್ತು, ಆಕೆಯಲ್ಲಿ ನೆಲೆಸಿದ್ದ ನನ್ನ ಹೃದಯ ಮತ್ತೊಂದು ವ್ಯಕ್ತಿಯೆಡೆಗೆ ಸರಿಯಿತೆಂದು. ಆಕೆಯೇನೋ ತನ್ನ ಪತಿಯೊಡನೆ ಹೊರಟು ಹೋದಳು. ಹೋಗುವಾಗ ಆಕೆಗೆ ನನ್ನ ನೆನಪೂ ಸಹ ಆಗಿರಲಿಕ್ಕಿಲ್ಲ. ಆಗ ಆಕೆಯ ಸಂತಸದ ದಿನಗಳು ಆದೇ ಪ್ರಾರಂಭವಾಗಿದ್ದವು. ನನ್ನ ನಿರಾಶೆಯ ದಿನಗಳೂ ಸಹ ಅಂದೇ ಪ್ರಾರಂಭವಾದುವು. ನನ್ನನ್ನು ಆಕೆ ಒಮ್ಮೆಯಾದರೂ ನೆನೆಯುತ್ತಿದ್ದಳೋ ಇಲ್ಲವೋ. ಆದರೆ ನಾನು ಮಾತ್ರ ಪ್ರತಿದಿನವೂ ಆಕೆಯನ್ನು ನೆನೆಯುತ್ತಿದ್ದೆ. ಆಕೆಯನ್ನು ನನ್ನ ಹೃದಯದಿಂದ ಬೇರ್ಪಡಿಸುವುದು ಅಸಾಧ್ಯದ ಕೆಲಸವಾಗಿತ್ತು.

ರೈಲು ತನ್ನ ನಿರ್ದಿಷ್ಟ ಸ್ಥಾನವನ್ನು ಮುಟ್ಟಿತು. ನನ್ನ ಜೊತೆ ಪಯಣಿಗರೆಲ್ಲ ಕೆಳಗಿಳಿದು ಹೋದರು. ದೇಹವನ್ನೊಮ್ಮೆ ಕೊಡವಿ ಹಣೆಯನ್ನು ಮುಚ್ಚಿದ್ದ ಕೂದಲನ್ನು ಹಿಂದಕ್ಕೆ ದೂಡುತ್ತ ನಾನೂ ಸಹ ಡಬ್ಬಿಯಿಂದಿಳಿದೆ. ಆಕೆಯನ್ನು ನೋಡಲು ಇರುವ ಸಂಭ್ರಮದಲ್ಲಿ ನನ್ನೊಡನೆ ಯಾವ ವಿಧವಾದ ವಸ್ತುಗಳನ್ನೂ ತಂದಿರಲಿಲ್ಲ. ದೇಹದ ಮೇಲಿದ್ದ ಅರಿವೆಗಳು ಬಹಳ ಕೊಳಕಾಗಿದ್ದವು. ಆಕೆಯ ವಿಳಾಸ ನನ್ನ ಬಳಿಯಿತ್ತು. ಗಾಡಿಯನು ಗೊತ್ತು ಮಾಡಿ ಆಕೆಯ ಮನೆಗೆ ನಡೆದೆ. ಚಳಿಯಿಂದ ದೇಹವೆಲ್ಲಾ ನಡುಗಿ ಹೋಗುತ್ತಿತ್ತು. ಮುಖದ ಮೇಲೆ ಕೈ ಆಡಿಸಿದಾಗ ಬೆಳೆದು ನಿಂತಿದ್ದ ಗಡ್ಡದ ಕೂದಲು ಮುಳ್ಳಿನಂತೆ ಚುಚ್ಚಿತು. ಗಾಡಿಯವನು ಯಾವುದೋ ಒಂದು ಮನೆಯ ಮುಂದೆ ಬಂಡಿನಿಲ್ಲಿಸಿ "ಯಹೀ ಹೈ ಸಾಹಿಬ್.. ತುಮಾರಾ ಘರ್" ಎಂದ. ಅವನಿಗೆ ಹಣತೆತ್ತು ಕೆಳಗಿಳಿದೆ. ಎದುರಿಗೆ ವಿಶಾಲ ಬಯಲು. ಬಯಲಿನ ಮಧ್ಯೆ ಭವ್ಯ ದಿಕೆಯ ಕಟ್ಟಡ. ಕಟ್ಟಡದ ಮುಂದೆ ನಾನಾಬಣ್ಣದ ಹೂ ಗಿಡಗಳು. ಅವುಗಳನ್ನಾವರಿಸಿ ಹಸಿರು. ಗೇಟಿನ ಬಳಿ ನಾನು ಹೋಗಿ ನಿಂತತ್ತಲೇ ನಾಯೊಂದು ನನ್ನೆಡೆಗೆ ಧಾವಿಸಿ ಬಂದಿತು. ಬೆಚ್ಚಿ ಹಿಂಜರಿದೆ. ಅದರ ಹಿಂಬದಿಗೆ ಜವಾನನೊಬ್ಬ ಎರಡುಹಸುಳೆಯ ಕೈಹಿಡಿದು ಬಂದ. ಆ ಮಗು.. ಹೌದು... ಸಂಶಯವೇ ಇಲ್ಲ.. ಆಕೆಯನ್ನೇ ಹೋಲುತ್ತಿತ್ತು. ಓ, ಆಗಲೇ ಆಕೆಗೊಂದು ಮಗು! ಓಹೊ, ನಗುವಿನ ಮಿಂಚೊಂದು ನನ್ನ ತುಟಿಗಳ ಮೇಲೆ ಸುಳಿದು ಮಾಯವಾಯಿತು. ಜವಾನನಿಗೆ ಆಕೆಯ ಹೆಸರು ಹೇಳಿ "ಆಕೆ ಮನೆಯಲ್ಲಿದ್ದಾರೆಯೋ" ಎಂದು ಪ್ರಶ್ನಿಸಿದೆ. "ಈಗ ತಾನೇ ಹೊರಗೆ ಹೋದರು" ಎಂದ ಜವಾನ "ಆಯಿತು" ಎಂದು ದಾರಿಯ ಬದಿಗೇ ಕುಳಿತೆ. ಗೇಟಿನ ಒಳಗಡೆ ಆ ಮಗು ಚೆಂಡೊಂದರೊಡನೆ ಆಟವಾಡುತ್ತಿತ್ತು. ಆಕೆ ಒಮ್ಮೆ ತನ್ನ ಬಾಳು ನೀರಸವಾಯಿತೆಂದು ಬಗೆದಿದ್ದಳು, ವಿಧಿ ನಿಷ್ಕರುಣನೆಂದು ಹಳಿದಿದ್ದಳು. ಆದರೆ ಆದೇ ಆಕೆಯ ಬಾಳು ಈಗ ಎಷ್ಟು ಆಹ್ಲಾದಮಯವಾಗಿದೆ. ನನ್ನ ಬಾಳು ಯಾವ ರಂಗಕ್ಕಿಳಿಯಿತು? ಪತಿಯೊಡನೆ ಆಕೆ ಪರಊರಿಗೆ ತೆರಳಿದರೂ ೭-೮ ವರುಷಗಳು ಸಂದಿದ್ದರೂ—ಆಕೆ ನನ್ನ ಮನದರಸಿಯಾಗಿಯೇ ಉಳಿದಿದ್ದಳೆಂದು ಹೇಳಿದರೆ ಅದು ಅಪರಾಧವಾದೀತು, ನಿಜ. ಆದರೆ ನಾನಿಲ್ಲಿ ನನ್ನ ಮನಸ್ಸನ್ನು ಬಿಚ್ಚಿ ತೋರಿಸ ಹೊರಟಿದ್ದೇನೆ. ಆದ್ದರಿಂದ ಮುಚ್ಚು ಮರೆಯೇಕೆ?

ಕಾರೊಂದು ಶಬ್ದ ಮಾಡುತ್ತ ಬಂಗಲೆಯ ಬಳಿ ಬಂದು ನಿಂತಿತು. ಚೆಂಡಾಟವಾಡುತ್ತಿದ್ದ ಮಗು ತಾಯಿಯನ್ನು ಕೂಗುತ್ತ ಗೇಟಿನ ಬಳಿಗೆ ಬಂದಿತು. ಕಾರಿನಿಂದ ಇಬ್ಬರು ಕೆಳಗಿಳಿದರು. ಹೌದು, ಆಕೆಯೇ.... ಹಿಂದಿನ ಆಕೆಯೇ. ಆದರೆ ಆಕೆಯ ರೂಪು ಇಂದು ದ್ವಿಗುಣಿತಗೊಂಡಿತ್ತು. ದೇಹವು ಸಹ ತುಸು ಬಲಿತಿತ್ತು. ಮುಖದ ಮೇಲೆ ಸಂತಸದ—ತೃಪ್ತಿಯ ನಗೆ ಮೂಡಿತ್ತು. ಆಕೆ ನನ್ನನ್ನು ನೋಡಿಯೂ ನೋಡದಂತೆ ಮುಂದೆ ಹೋದಳು. ಆಕೆಯ ಪತಿ ಆಕೆಯನ್ನು ಹಿಂಬಾಲಿಸಿದ. ನನ್ನನ್ನು ಆತನೊಡನೆ ಹೋಲಿಸಿಕೊಂಡೆ. ಅಯ್ಯೋ.. ಎಲ್ಲಿಂದೆಲ್ಲಿಗೆ? ಜವಾನ ನನ್ನೆಡೆಗೆ ಬೊಟ್ಟು ಮಾಡಿ ತೋರಿಸಿದ. ಆಕೆ ಹಿಂತಿರುಗಿದಳು. ಹತ್ತಿರಕ್ಕೆ ನಡೆದು ಬಂದಳು, ನಿಂತು ದಿಟ್ಟಿಸಿದಳು. ನಾನು ತಲೆ ಬಾಗಿಸಿದೆ.

ಜೀವರ ಹನಿಯು ಮುಖದಿಂದ ಜಾರಿ ಷರಟಿನ ಮೇಲುರುಳಿತು. ಕಡೆಗೊಮ್ಮೆ ಆಕೆ "ಓ.. ಮಾಧು!..... ಎಂದು ಬಂದಿರಿ?. ಬನ್ನಿ ಒಳ ಬನ್ನಿ.. ಏಕೆ, ದೇಹಕ್ಕೆ ಸ್ವಸ್ಥವಿಲ್ಲವೇನು? ಬಾಯಿಲೆಯೆ? ಎಷ್ಟು ದಿನದಿಂದ? ಈ ಬಾಯಿಲೆಯಲ್ಲಿ ಇಷ್ಟುದೂರ ಏಕೆ ಬಂದಿರಿ?... ಇಲ್ಲಿ ಕುಳಿತಿರಿ. ನಾನು ಒಳಗಿನಿಂದ ಏನಾದರೂ ತರುತ್ತೇನೆ" ಎಂದು ಆಕೆ ಒಳಕ್ಕೆ ಹೋದಳು. ನನ್ನೆದುರಿಗೆ ಆಕೆಯ ಪತಿ ಕುಳಿತ. ನನ್ನಂತಹ ಕೊಳಕು ಮನುಷ್ಯ ಆತನ ಪತ್ನಿಯಿಂದ ಆಹ್ವಾನಿಸಲ್ಪಟ್ಟುದನ್ನು, ಆತನಿಗೆ ಸಮಾನನಂತೆ ಆತನೆದುರು ಕುಳಿತಿರುವುದನ್ನು ಕಂಡು ಆತನಿಗೆ ಕೋಪ ಬಂದಿರಬೇಕು.

ಸ್ನಾನ, ಆಹಾರಾದಿಗಳಾದ ಮೇಲೆ ಆಯಾಸವನ್ನು ನೀಗಿಸಲು ಹಾಸಿಗೆಯ ಮೇಲೆ ಮಲಗಿಕೊಂಡೆ, ಆಕೆಯೂ ಬಂದು ಕುಳಿತಳು. [illegible] ಎಷ್ಟೋ ದಿನಗಳಾಗಿದ್ದವು. ಆಕೆಯ ಮಗು ಬಂದು ತಾಯಿಯ ಹತ್ತಿರ ಕುಳಿತಿತು. ಮಗುವನ್ನು ತೊಡೆಯ ಮೇಲೆ ಕೂಡ್ರಿಸಿಕೊಂಡು ಆಕೆ "ಮಗುವಿನ ಹೆಸರೇನು ಗೊತ್ತೇ" ಎಂದು ಕೇಳಿದಳು. ಆಕೆಯ ಕಣ್ಣುಗಳನ್ನೇ ದಿಟ್ಟಿಸುತ್ತ ನಾನು ಇಲ್ಲವೆಂದು ತಲೆಯಾಡಿಸಿದೆ. ಆಕೆ ಮೆಲ್ಲನೆ "ಮಾಧು" ಎಂದಳು, "ಅಜ್ಞೆ" ಎಂದೆ. "ಅಲ್ಲ ಮಗುವಿನ ಹೆಸರು 'ಮಾಧು'" ಎಂದಳು, "ಓ, ಹೌದೇನು, ಏಕೆ ಆ ಹೆಸರಿಟ್ಟಿರಿ? ನಾನೇನೋ ನೀವು ನನ್ನನ್ನು ಮರೆತಿದ್ದಿರೆಂದುಕೊಂಡಿದ್ದೆ" ಎಂದೆ. ಆಕೆ ಮಗುವಿನ ಎಳೆಗುರುಳನ್ನು ನೇವರಿಸುತ್ತ ನೀರವವಾಗಿ ನಕ್ಕಳು. "ಲೀಲ" ನಾನೆಂದೆ. ಆಕೆ ಒಮ್ಮೆ ತಲೆಯೆತ್ತಿದಳು. ನನ್ನ ಮುಖದಲ್ಲಿ ಆಕೆ ಏನರಿತಳೋ ನನಗೆ ತಿಳಿಯದು. ಆದರೆ ಮರುಕ್ಷಣದಲ್ಲಿ ಇನ್ನಷ್ಟು ನಗುಸೂಸಿ, "ಇವನ ತಮ್ಮ ತೊಟ್ಟಿಲಲ್ಲಿದ್ದಾನೆ. ನೋಡಿದಿರೇನು?" ಎಂದು ಪ್ರಶ್ನಿಸಿದಳು. ನಗುತ್ತ ನಾನು "ಓ, ಆಗಲೇ ಎರಡು ಮಕ್ಕಳ ತಾಯಾದಿರೇನು?" ಎಂದು ಪ್ರಶ್ನಿಸಿದೆ. ಮಾಧುವನ್ನು ಹಿಂದೆ ಬಿಟ್ಟು ಆಕೆ ಅಲ್ಲಿಂದೆದ್ದು ಹೋದಳು. ಒಂದೆರಡು ನಿಮಿಷಗಳಲ್ಲಿ ಕೈಲೊಂದು ಮಗುವನ್ನು ಆಡಿಸುತ್ತ ಲೀಲ ನಡೆದು ಬಂದಳು. ಮಗು ಮುದ್ದಿನ ಮುದ್ದೆಯಂತಿತ್ತು. ಅದರ ಮುಖದಲ್ಲಿ ರಕ್ತವು ಗುಲಾಬಿಯ ಹೂವಾಗಿ ನಳನಳಿಸುತ್ತಿತ್ತು.

"ಇವನ ಹೆಸರು ಶಶಿ" ಎಂದಳು ಲೀಲ. "ಮಾಧು...ಶಶಿ" ಮುಂದಿನದು, ಎಂದೆ ನಾನು ನಗುತ್ತ. ಮಗುವಿನ ಕೆನ್ನೆಗೆ ತನ್ನ ಕೆನ್ನೆಯನ್ನು ತಾಗಿಸಿ ಲೀಲ "ನೀವೇ ಸಲಹೆ ಕೊಟ್ಟು ಬಿಡಿ" ಎಂದು ನಗಲಾರಂಭಿಸಿದಳು. ನನಗೂ ನಗು ತಡೆಯಲಾಗಲಿಲ್ಲ. ಆಕೆಯೊಡನೆ ಹಾಗೆ ನಕ್ಕು ಎಷ್ಟೋ ದಿನಗಳಾಗಿದ್ದವು.

ಮಲಗುವ ಮೊದಲು ಆಕೆ ಬಂದು ನನ್ನ ದೇಹಸ್ಥಿತಿಯನ್ನು ವಿಚಾರಿಸಿದಳು. ನಾನು "ಇನ್ನು ರೋಗವೆಲ್ಲಿಯದು ಲೀಲ" ಎಂದೆ. ನಿಡುಸುಯ್ದು ಆಕೆ ನಕ್ಕು "ನೀವಿನ್ನೂ ನಿಮ್ಮ ಹುಚ್ಚನ್ನು ಬಿಟ್ಟಿಲ್ಲ" ಎಂದು ಸಹಾನುಭೂತಿಯ ಸ್ವರದಲ್ಲಿ ನುಡಿದು ನಕ್ಕು ಹಿಂದಿರುಗಿದಳು. ಆ ನಡಿಗೆಯಲ್ಲಿ ಎಷ್ಟು ಠೀವಿಯಿತ್ತು, ಗಾಂಭೀರ್ಯವಿತ್ತು! ನಿಟ್ಟುಸಿರು ಬಿಟ್ಟು ಪಕ್ಕಕ್ಕೆ ಹೊರಳಿ ಎವೆ ಮುಚ್ಚಿದೆ. ಸೊಂಪಾದ ನಿದ್ದೆ ಹತ್ತಿತು.

ಮರುದಿನ ಮೇಲೆದ್ದಾಗ ಬಿಸಿಲು ನೆಲದ ಮೇಲೆ ಹರಡಿತ್ತು. ಮೇಲೆದ್ದು ಕಿಟಕಿಯ ಬಳಿ ಹೋಗಿ ನಿಂತೆ. ಏಕೋ ನನ್ನರಿವಿಲ್ಲದೆಯೇ "ಕರೂಂ ಕ್ಯಾ ಆಶ ನಿರಾಶ ಬಯಿ" ಹಾಡು ನನ್ನಿಂದ ಹೊರಬಿದ್ದಿತು. ಮೆಲ್ಲನೆ ಹಾಡುತ್ತ ಹಿಂದಿರುಗಿದಾಗ ಎದುರಿಗೆ ಆಕೆ ನಿಂತಿದ್ದಳು ಆಕೆಗೂ- ಹಾಡು ಕೇಳಿಸಿರಬೇಕು, ಹಳೆಯ ನೆನಪು ಕೆರಳಿರಬೇಕು. ಏನಾದರೇನು, ಆಕೆಗೂ ಹೃದಯವೆಂಬುದಿದೆಯಲ್ಲ? "ಸ್ನಾನ ಮಾಡಲು ವೇಳೆಯಾಗಲಿಲ್ಲವೆ" ಎಂದಳು ಆಕೆ. "ಹೌದು ಮೇಲೇಳಲು ಹೊತ್ತಾಯಿತು" ಎಂದು ಸ್ನಾನಗೃಹದ ದಿಕ್ಕಿಗೆ ನಡೆದೆ. ನಾನು ಹೊರಕ್ಕೆ ಬರುವ ವೇಳೆಗೆ ಆಕೆ ಕಾಫಿಯೊಡನೆ ನನಗೆಂದು ಕಾದಿದ್ದಳು. ಕಾಫಿಯ ಲೋಟದಿಂದ ಆಕೆಯೆಡೆಗೆ ದೃಷ್ಟಿ ಹೊರಳಿಸಿದೆ. ಆಕೆಯೂ ನನ್ನನ್ನೇ ನೋಡುತ್ತಿದ್ದಳು. ಅಷ್ಟರಲ್ಲಿ ಮಾಧು ಓಡಿ ಬಂದ; ಅವರಪ್ಪ ಕಚೇರಿಗೆ ಹೊರಟು ನಿಂತಿದ್ದಾನೆಂಬ ಸುದ್ದಿಯನ್ನು ತಾಯಿಗೆ ತಿಳಿಸಿದ. "ಸ್ವಲ್ಪ ಬಂದೆ" ಎಂದು ಲೀಲ ಮೇಲೆದ್ದು ಹೊರಗೆ ನಡೆದಳು.

ಎರಡು ವಾರಗಳು ಕಳೆದು ಹೋದ ಪರಿವೆಯೇ ನನಗಿರಲಿಲ್ಲ. ಲೀಲಳೇ ಒಂದು ದಿನ ಅಜ್ಞಾಪಿಸಿದಳು. "ಹೌದು, ಮರುದಿನ ಹೊರಡುವೆ"ನೆಂದೆ. ಭಾರದ ಹೃದಯದಿಂದ ಆಕೆ ತಲೆ ತಗ್ಗಿಸಿದಳು. ಇದ್ದಕ್ಕಿದ್ದಂತೆಯೇ ಆಕೆ ನನ್ನನ್ನು ಪ್ರಶ್ನಿಸಿದಳು, "ನೀವು ನನ್ನನ್ನು ಪ್ರೇಮಿಸುತ್ತಿರುವಿರಲ್ಲವೆ?" "ಅದರಲ್ಲಿ ಸಂದೇಹವೆಂತಹದು" ನಾನೆಂದೆ. "ಅಂದರೆ ನನ್ನ ಮಾತಿನಲ್ಲಿ ನಿಮಗೆ ವಿಶ್ವಾಸ, ಗೌರವವಿದೆಯಲ್ಲವೇ?" ಆಕೆ ಮುಂದುವರಿಸಿದಳು. "ನಿಸ್ಸಂಶಯವಾಗಿ" ನಾನೆಂದೆ. "ಹಾಗಾದರೆ ನನ್ನದೊಂದು ಪ್ರಾರ್ಥನೆಯುಂಟು, ನಡಸಿಕೊಡುವಿರೇನು?" ಎಂದು ಕೇಳಿದಳು ಲೀಲ. ನಾನು ಚಕಿತನಾದೆ. ಬಳಿಕ "ಅದೆಂತಹ ಮಾತು ಲೀಲ, ಅದೇನು ಹೇಳಬಾರದೆ? ಎಂದೆ. "ನಿಮ್ಮ ಸ್ಥಿತಿಯನ್ನು ಕಂಡು ನನಗೆ ಶೋಕವಾಗುತ್ತಿದೆ. ಎಷ್ಟು ದಿನ ತಾನೇ ನೀವು ಹೀಗೆ ಒಬ್ಬರೇ ಇರುತ್ತೀರಿ? ಸಾಯುವವರೆಗೂ ನನ್ನನ್ನೇ ಕುರಿತು ನೀವು ಚಿಂತಿಸುತ್ತಿದ್ದರೆ ಯಾವ ಭಾಗ್ಯ ಬಂತು? ಅಲ್ಲದೆ ಅದರಲ್ಲಿ

-೧೬ನೆಯ ಪುಟಕ್ಕೆ

## ಬೇರೂರಲ್ಲಿ ಮೈಸೂರು ಕಾಂಗ್ರೆಸ ಅಧಿವೇಶನ

### ಮೈಸೂರಿಗೆ ಸ್ವತಂತ್ರ ಪ್ರಾಂ. ಕಾಂ. ಸಮಿತಿ

ಬೇರೂರಲ್ಲಿ ತಾ. ೬ ರಂದು ಮಧ್ಯಾಹ್ನ ೩ ಕ್ಕೆ ಅಖಿಲ ಮೈಸೂರು ಕಾಂಗ್ರೆಸ ಸಮಿತಿಯ ಸಭೆಯು ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಮುನ್ನ ದಿನ ಅಧ್ಯಕ್ಷರನ್ನು ಮೆರವಣಿಗೆಯಿಂದ ಬರಮಾಡಿಕೊಳ್ಳಲಾಯಿತು. ಮೈಸೂರ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರೂ ಕರ್ನಾಟಕ ಪ್ರಾಂತಾಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರೂ ಮೈಸೂರಿನ ಉಳಿದ ಮಂತ್ರಿಗಳೂ ಮೈ. ಕಾಂಗ್ರೆಸ ಕಾರ್ಯಕಾರೀ ಸಮಿತಿಯ ಸದಸ್ಯರೂ ಉಪಸ್ಥಿತರಿದ್ದರು. ಸಂಸ್ಥಾನದ ನಾನಾ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಸ್ವಾಗತಾಧ್ಯಕ್ಷರಾದ ಶ್ರೀ ದಿ ವಿ ಹಾಲಪ್ಪನವರ ಪರವಾಗಿ ಶ್ರೀ ಕೆ. ಟಿ. ಸತ್ಯನಾರಾಯಣ ಶೆಟ್ಟರು ಭಾಷಣ ಮಾಡಿದರು. ಆ ಮೇಲೆ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಭಾಷಣ ಮಾಡುತ್ತ, ನಾವು ಸಂಪಾದಿಸಿಕೊಂಡ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಎಲ್ಲರೂ ಪ್ರಯತ್ನಿಸಬೇಕೆಂದು ಕೇಳಿಕೊಂಡರು.

ನಂತರ ಜನಾಬ ಜಿನ್ನಾ, ಶ್ರೀ ಕೆ. ಎಫ್. ನರೀಮನ ಇವರ ನಿಧನಕ್ಕಾಗಿ ದುಃಖ ಸೂಚಕ ನಿರ್ಣಯವನ್ನು ಎಲ್ಲರೂ ಎದ್ದು ನಿಂತು ಅನುಮೋದಿಸಿದರು.

ಮೈಸೂರ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಎ. ಜಿ. ರಾಮಚಂದ್ರರಾಯರು ಮಾತನಾಡಿ, ಅ. ಭಾ. ಸಂಸ್ಥಾನಗಳ ಪ್ರಜಾ ಪರಿಷತ್ತು ಅ. ಭಾ. ಕಾಂಗ್ರೆಸಿನಲ್ಲಿ ಲೀನವಾದ ಮೇಲೆ ಸಂಸ್ಥಾನಗಳ ಪಾರ್ಲಿಮೆಂಟರಿ ಕಾರ್ಯಗಳಲ್ಲಿ ಅ. ಭಾ. ಕಾಂ. ಪಾರ್ಲಿಮೆಂಟರಿ ಸಬ್ ಕಮಿಟಿಯು ಪ್ರವೇಶ ಮಾಡಲು ಅಧಿಕಾರ ವಿದೆಯೆಂಬ ಅಂಶವನ್ನು ಸಭಿಕರ ಗಮನಕ್ಕೆ ತಂದರು. ಮುಖ್ಯ ಮಂತ್ರಿಗಳು, ಪ್ರತ್ಯೇಕತಾ ಮನೋಭಾವವು ಇರಕೂಡದೆಂದೂ ತಿರುವಾಂಕೂರು ಹೈದರಾಬಾದಗಳಲ್ಲಿ ನಡೆದ ಸಂಗತಿಗಳಿಂದ ಈ ಬಗ್ಗೆ ಮೈಸೂರಾದರೂ ಪಾಠ ಕಲಿಯಬೇಕೆಂದೂ ನಿವೇದಿಸಿದರು. ಇಷ್ಟರಲ್ಲಿ ಮಳೆಯ ಮೂಲಕ ಸಭೆಯು ಮರುದಿನಕ್ಕೆ ಮುಂಬರಿದಿತು.


ತಾ. ೭ ಕ್ಕೆ ಕೆಳಗೆ ಕಾಣಿಸಿದ ಅಭಿಪ್ರಾಯವುಳ್ಳ ಒಂದು ಗೊತ್ತುವಳಿಯು ಸ್ವೀಕೃತವಾಯಿತು.

"ಮೈಸೂರು ಕಾಂಗ್ರೆಸನ್ನು ಪ್ರತ್ಯೇಕ ಪ್ರಾಂತಿಕ ಕಾಂಗ್ರೆಸ ಸಮಿತಿಯೆಂದು ಪರಿಗಣಿಸಬೇಕು. ಈ ಬಗ್ಗೆ ತಪ್ಪು ಕಲ್ಪನೆಯುಂಟಾಗಿದೆ. ಈ ನಿರ್ಣಯವನ್ನು ವ್ಯಾವಹಾರಿಕ ದೃಷ್ಟಿಯಿಂದ ಕೈಕೊಳ್ಳಲಾಗಿದೆಯಲ್ಲದೆ ಯಾವದೇ ಬಗೆಯ ಪ್ರತ್ಯೇಕತೆಯ ಭಾವನೆ ಇದರಲ್ಲಿ ಅಡಕವಾಗಿಲ್ಲ ಮೈಸೂರು ಸಂಸ್ಥಾನವು ಒಂದು ಪ್ರತ್ಯೇಕ ಆಡಳಿತೆಯ ಘಟಕವಾಗಿರುವ ವರೆಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯಿಂದ ನೇಮಕ ಹೊಂದಿದ ಅಡ್ ಹಾಕ್ ಸಮಿತಿಯು ಮೈಸೂರಿನ ಪಾರ್ಲಿಮೆಂಟರಿ ಚಟುವಟಿಕೆಗಳನ್ನು ಸಮರ್ಥವಾಗಿ ನಿಯಂತ್ರಿಸಿ ನಿರ್ದೇಶಿಸಲಾರದು. ಮೈಸೂರೂ ಇನ್ನುಳಿದ ಕನ್ನಡ ಪ್ರದೇಶಗಳೂ ಒಂದೇ ಆಡಳಿತೆಗೆ ಒಳಗಾದಾಗ ಈ ಪ್ರತ್ಯೇಕ ಕಾಂಗ್ರೆಸ ಸಮಿತಿಯ ಅವಶ್ಯಕತೆ ಉಳಿಯುವದಿಲ್ಲ. ಭಾಷಾನುಗುಣ ಪ್ರಾಂತೀಕರಣದ ತತ್ವವನ್ನು ಮೈಸೂರು ಕಾಂಗ್ರೆಸ್ಸು ಸದಾ ಮನ್ನಿಸುತ್ತದೆ. ಕನ್ನಡನಾಡಿನ ಇತರ ಭಾಗಗಳ ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಹಿತ ಸಂಬಂಧಗಳು ಒಂದೇ ಆಗಿದ್ದು ಮೈಸೂರು ಸಂಸ್ಥಾನದೊಡನೆ ಬೆಸುಗೆಗೊಂಡಿದ್ದರಿಂದ ಮೈಸೂರ ಮಹಾರಾಜರ ಘಟನಾತ್ಮಕ ಆಡಳಿತೆಯಲ್ಲಿ ಎಲ್ಲ ಕನ್ನಡ ಪ್ರದೇಶಗಳು ಒಂದಾಗಬೇಕೆಂಬುದು ಅತ್ಯಾವಶ್ಯವೂ ಮತ್ತು ಅನಿವಾರ್ಯ ಎಂಬ ಮೊದಲಿನ ಘೋಷಣೆಗೆ ಈ ಸಭೆಯು ಈಗಲೂ ಅಂಟಿಕೊಂಡಿದೆ. ಆದ್ದರಿಂದ ಈ ಬಗ್ಗೆ ಭಾರತ ಸರಕಾರ, ಮೈಸೂರಿನ ಮತ್ತು ಏಕೀಕೃತ ಕರ್ನಾಟಕದ ಸಾರ್ವಜನಿಕ ಮುಖಂಡರು ಮತ್ತು ಮೈಸೂರ ಮಹಾರಾಜರೊಡನೆ ಮಾತುಕತೆ ನಡೆಸಲು ಶ್ರೀಗಳಾದ ಟಿ ಸುಬ್ರಹ್ಮಣ್ಯಂ, ಟಿ ಸಿದ್ಧಲಿಂಗಯ್ಯ, (ಅಧ್ಯಕ್ಷ) ಎಸ್ ಚನ್ನಯ್ಯ, ಎ. ಜಿ ಬಂಜಗೌಡ (ಕಾರ್ಯದರ್ಶಿ) ಕೆ. ಜಿ ಒಡೆಯರ ಇವರ ಒಂದು ಉಪಸಮಿತಿಯನ್ನು ನಿರ್ಮಿಸಲಾಗಿದ್ದು ಈ ಸಮಿತಿಯವರು ಮೈಸೂರ ಕಾಂಗ್ರೆಸ ಕಾರ್ಯಕಾರೀ ಮಂಡಳಕ್ಕೆ ಸಾಧ್ಯವಿದ್ದಷ್ಟು ಬೇಗ ತಮ್ಮ ವರದಿ ಒಪ್ಪಿಸಬೇಕು"

ಮೇಲ್ಕಾಣಿಸಿದ ಗೊತ್ತುವಳಿಯನ್ನು ಅನುಮೋದಿಸುತ್ತ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು, ಭಾಷಾನುಗುಣ ಪ್ರಾಂತರಚನೆಯ ಬಗ್ಗೆ ನಮ್ಮ ಮತಭೇದವೇ ಇಲ್ಲ. ಕರ್ನಾಟಕ ಪ್ರಾಂತದಲ್ಲಿ ಮೈಸೂರು ಸೇರುವ ಮೊದಲು ಶ್ರೀಮನ್ಮಹಾರಾಜರ ಸ್ಥಾನಮಾನದ ಬಗ್ಗೆ ನಿರ್ಣಯವಾಗುವದು ಅತ್ಯಾವಶ್ಯವೆಂದೂ ಇದಕ್ಕಾಗಿ ಒಂದು ಉಪಸಮಿತಿ ನಿಯಮಿಸಬೇಕೆಂದೂ ಹೇಳಿದರು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಗೊತ್ತುವಳಿಯನ್ನು ಸಮರ್ಥಿಸಿ, ಭಾಷಾನುಗುಣ ಪ್ರಾಂತರಚನೆಯಿಂದ ಭಾರತದ ಅನೇಕ ಸಮಸ್ಯೆಗಳು ತಾವಾಗಿ ಬಿಡುವವೆಂದೂ ಇದರಿಂದ ಕೇಂದ್ರ ಸರಕಾರದ ಬಲ ಹೆಚ್ಚುವದಲ್ಲದೆ ಕುಗ್ಗುವದಿಲ್ಲವೆಂದೂ ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯು ಅತ್ಯಂತ ಅವಸರದ್ದು ಇದನ್ನು ಮುಂದೂಡಬಾರದೆಂದೂ ಪ್ರತಿಪಾದಿಸಿದರು.

ಗೊತ್ತುವಳಿಯು ಸರ್ವಾನುಮತದಿಂದ ಸ್ವೀಕೃತವಾಯಿತು.




### ನೆಹರುಗಳ ಶಾಂತಿಮಂತ್ರ

ನವೆಂಬರ ೩ ರಲ್ಲಿ ಪ್ಯಾರಿಸ್ಸಿನಲ್ಲಿ ಕೂಡಿದ ಸಂ. ರಾ. ಸಂಘದ ಸಭೆಯಲ್ಲಿ ಪಂಡಿತ ನೆಹರು ಭಾಷಣ ಮಾಡುತ್ತ, ಸಂಘದೆದುರು ಬಂದ ಬೃಹತ್ಸಮಸ್ಯೆಗಳನ್ನು ನಿವಾರಿಸಲು ಸಂಘ ಹೊರಟ ಕ್ರಮ ಅಷ್ಟು ಸರಿಯಾದುದಲ್ಲವೆಂದೂ ಅದು ಅದರ ತಾಮ್ರಪಟದ ಉದಾತ್ತನೀತಿಗೆ ಅನುಗುಣವಾಗಿಲ್ಲವೆಂದೂ ಘೋಷಿಸಿದರು. ಅದರ ಮುಖ್ಯ ವಿವರ ಹೀಗಿದೆ:

ಭಾರತೀಯರು ಶಾಂತಮಾರ್ಗದಿಂದ ಈಗ ತಾನೇ ಸ್ವಾತಂತ್ರ್ಯ ಗಳಿಸಿದವರು, ಅವರ ಮುಖಂಡರಾದ ಮಹಾತ್ಮರು ಗುರಿಯನ್ನು ಸಾಧಿಸಲು ಗುರಿಯಂತೆ ಸಾಧನವಾದರೂ ನ್ಯಾಯವಾಗಿಯೇ ಇರಬೇಕೆಂಬುದನ್ನು ಕಲಿಸಿದ್ದಾರೆ. ಸಂ. ರಾಷ್ಟ್ರ ಸಂಘದವರು ಇದನ್ನು ಮನನ ಮಾಡಬೇಕು. ರಕ್ತರಂಜಿತ ದೃಷ್ಟಿಯಿಂದ ಆವೇಶವಶರಾಗಿ ಸದುದ್ದೇಶವನ್ನೇ ಆದರೂ ಸಾಧಿಸಹೊರಟರೆ ಪರಿಣಾಮ ಅನಿಷ್ಟವೇ ಆಗುವುದು ನಿಶ್ಚಿತ. ದ್ವೇಷ ಹಿಂಸೆಗಳಿಂದ ಶಾಂತಿಸಿಗದೆಂಬ ಪಾಠವನ್ನು ಕಳೆದೆರಡು ಮಹಾಯುದ್ಧಗಳು ಕಲಿಸಿವೆ. ಹಾಗಿದ್ದರೂ ಸಂಘದ ಸದಸ್ಯರು ಆ ಪಾಠದತ್ತ ಲಕ್ಷ್ಯಕೊಡದೆ ಹಿಂಸೆ ಹಗೆತನಗಳ ವೃತ್ತದಲ್ಲೋಡುತ್ತಿದ್ದರೆ ಅದರಿಂದ ಯಾರೂ ಉದ್ದಿಷ್ಟವನ್ನು ಪಡೆಯಲಾರರು. ಅಲ್ಲದೆ ಮಾನವ ಜಗತ್ತಿನ ನಾಶ ಖಂಡಿತವಾಗಿ ಆಗುವುದು ಆದುದರಿಂದ ಸರ್ವರೂ ಮತ್ಸರ ಭಯಗಳನ್ನು ಮನಸ್ಸಿನಿಂದ ದೂರವಿಡಲು ಅಭ್ಯಸಿಸಬೇಕು.

ಏಶಿಯದಿಂದ ಬಂದ ಪ್ರತಿನಿಧಿಯಾಗಿ ಮಾತಾಡುವದಾದರೆ ದೊಡ್ಡ ನಾಗರಿಕತೆಯವರಾದ ಯುರೋಪಿನ ಜನರು ಯುರೋಪವೇ ಜಗತ್ತು ಎಂಬ ಸಂಕುಚಿತ ಮನೋವೃತ್ತಿ ತಾಳಿದ್ದಾರೆ. ಎಚ್ಚತ್ತ ಏಶಿಯವನ್ನು ಮರೆತರೆ ಅದರ ಪರಿಣಾಮ ನೆಟ್ಟಗಾಗದು.

ವಸಾಹತು ಸಾಮ್ರಾಜ್ಯದ ಕಾಲವೀಗ ಮುಗಿದು ಹೋಯಿತು. ಇಂಥ ಆಳಿಕೆಯಿಂದ ಮುಕ್ತವಾದ ಭಾರತದಂಥ ಮಹಾರಾಷ್ಟ್ರವು ಮಿಕ್ಕ ಏಶಿಯದ ನಾಡುಗಳಾದರೂ ಆ ಸಂಕಲೆಯಿಂದ ಮುಕ್ತವಾಗಬೇಕೆಂದೇ ಬಯಸುವುದು. ನಾಡು ನಾಡುಗಳಲ್ಲಿ ಸಮಾನಸ್ಕಂಧತೆ ಬರಬೇಕಾದರೆ ಕುಲಭೇದದ ಅಧ್ಯಾಸ ನಮ್ಮಲ್ಲಿ ನಾಶ ಹೊಂದಬೇಕು. ಈ ವಿಷಯ ಸಂಘದ ತಾಮ್ರಪಟದಲ್ಲೂ ಉಲ್ಲೇಖಿಸಲ್ಪಟ್ಟಿದೆ. ಯುರೋಪಿಗಿಂತ ಹೆಚ್ಚಾಗಿ ಭಾರತ ಅಫ್ರಿಕ ಮುಂತಾದ ನಾಡುಗಳು ಈ ಕುಲವೈಷಮ್ಯದ ವಿಷದಿಂದ ದಗ್ಧವಾಗಿ ಸಾಕಷ್ಟು ನಷ್ಟಹೊಂದಿವೆ. ಸರಿಯಾಗಿ ಇದನ್ನು ತಿಳಿದುಕೊಳ್ಳದೆ ಹೋದರೆ ಈ ಸಮಸ್ಯೆ ಬಗೆಹರಿಯಲಾರದು. ಅದರಿಂದ, ಜೀವನಾವಶ್ಯಕ ವಸ್ತುಗಳ ಅಭಾವದಿಂದ ಜಗದ ಜನ ನರಳುತ್ತಿರುವಾಗ ಈ ಸಭೆ ಅನೇಕ ರಾಜಕೀಯ ಸಮಸ್ಯೆಗಳನ್ನು [illegible] ಕುರಿತು ಚರ್ಚಿಸುತ್ತಿದೆ. [illegible] ಗಳಿಗೆ ಇವನ್ನು ಬದಿಗಿಟ್ಟು ಜಗತ್ತಿನ ಆರ್ಥಿಕ ಮತ್ತು ಅನ್ನ ವಸ್ತ್ರಗಳ ಕೊರತೆಯತ್ತ ಸಂಘ ಲಕ್ಷ್ಯ ಹಾಕಬೇಕಾದ್ದು ಅಗತ್ಯವಿದೆ.

ಗಾಂಧಿಯವರು ಅಟಂಬಾಂಬಿಗೂ ಹೆದರದಿರುವುದನ್ನು ಭಾರತಕ್ಕೆ ಕಲಿಸಿದ್ದಾರೆ. ಅದುದರಿಂದ ಭವಿಷ್ಯದ ಬಗ್ಗೆ ಹೆದರುವ ಕಾರಣವಿಲ್ಲ. ಸುಮ್ಮನೆ ನಾಲ್ಕು ಒಳ್ಳೆಯ ಮಾತನ್ನು ಹೇಳಿದರೆ ಅಥವಾ ಕೇಳಿದರೆ ಫಲವಿಲ್ಲ. ಜಾಗತಿಕ ಶಾಂತಿಗಾಗಿ ಭಾರತದ ಮೂವತ್ತು ಮೂರು ಕೋಟಿ ಜನರು. ದುಡಿಯುವರೆಂಬ ಮಾತನ್ನು ಒತ್ತಿ ಹೇಳುವುದೇ ಈ ಭಾಷಣದ ಉದ್ದೇಶ. ಆದುದರಿಂದ ಭಾರತೀಯರು ಸಂಘದ ತಾಮ್ರಪಟದ ತತ್ವಗಳನ್ನು ಸಾಧಿಸಲು ಹೆಣಗುವವರಲ್ಲದೆ ಜೊತೆಯ ರಾಷ್ಟ್ರಗಳಿಗೂ ಹಾಗೇ ಮಾಡಲು ಬಿನ್ನವಿಸುತ್ತಾರೆ. ಸಿಟ್ಟು, ಉದ್ರೇಕ ಮತ್ತು ಭಯಗಳನ್ನು ಬಿಟ್ಟು ಎದುರಾದ ಸಮಸ್ಯೆಗಳನ್ನು ಬಿಡಿಸಬೇಕೆಂಬುವೇ ಮುಖ್ಯವಾದುದು.

### ಇದು ಚೀನ ಕಮ್ಯುನಿಸ್ಟರ ಪಾಲು?

ಮುಕ್ಡನ್ನನ್ನು ಕಳೆದುಕೊಂಡ ಚಿಯಾಂಗರಿಗೀಗ ವಿಪತ್ತಿನ ಮೇಲೆ ವಿಪತ್ತು ಬಂದೊದಗುತ್ತಿವೆ ಮಧ್ಯಚೀನದ ನಿರ್ಣಾಯಕ ಹೋರಾಟಕ್ಕಾಗಿ ಕಮ್ಯುನಿಸ್ಟರು ಪ್ರಚಂಡ ಸಿದ್ಧತೆ ನಡೆಸಿದ್ದು, ಅದರ ಅಂಗವಾಗಿ ಹೇಳಿದ ನದಿಯ ದಕ್ಷಿಣದಲ್ಲಿದ್ದ ಸರಕಾರೀ ಸೈನ್ಯದ ವ್ಯೂಹವನ್ನು ಎರಡು ಕಡೆ ಭೇದಿಸಿ ಒಳಬಿದ್ದ ವರೆಂದು ತಿಳಿಯುತ್ತದೆ.

ಕಮ್ಯುನಿಸ್ಟರು ೨೫೦ ಮೈಲಿನ ರಣಗದಲ್ಲಿ ಹೋನಾನಿನ ನಾನಯಾಂಗ್, ಅನವೆಯ ಪೆಂಗ್ ಪಾಯಿ ನಗರಗಳನ್ನು ಆಕ್ರಮಿಸಿದ್ದಾರೆ. ಮಧ್ಯಚೀನದ ಕಮ್ಯುನಿಸ್ಟ ಸೈನ್ಯ ಐದು ಲಕ್ಷವಿದ್ದು ಅವಕ್ಕೆ ಚೆನ್-ಯು-ಕಿಂಗ್ ಮತ್ತು ಲಿ-ಪೋ-ಚೆಂಗರು ಸೇನಾಪತಿಗಳಾಗಿರುವರು


ಲಂಡನ್ನಿನಲ್ಲಿ ನಡೆದ ಕಾಮನ್‌ವೆಲ್ತ್ ಮುಖ್ಯ ಮಂತ್ರಿ ಸಮ್ಮೇಳನದಲ್ಲಿ ಸೇರಿದ ಪ್ರತಿನಿಧಿಗಳು– ಎಡದಿಂದ ಬಲಕ್ಕೆ:– ಲಿಯಾಖತ್ ಅಲ್ಲಿಖಾನ್, ಡಾ. ಇವ್ಹಾಟ್, ಪಂಡಿತ ನೆಹರು, ಅ್ಯಟ್ಲೀ ಜೆ. ಬೀಸ್ಲಿ, ಹಬಿಬ್ ಇಬ್ರಾಹೀಂ ರಹಿಮತೂಲಾ, ಡ್ಯೂಗ್ [illegible], ಸೇನಾನಾಯಕೆ, ಹೆರಾಲ್ಡ್ ವಿಲ್ಸನ್

[illegible]

ಅಮೇರಿಕದ ವಿದೇಶ ಮಂತ್ರಿ [illegible] ಮಾರ್ಶಲ್ಲರು ತಮ್ಮ [illegible]

ಅಭಿಪ್ರಾಯವನ್ನು [illegible] ಚೀನ [illegible] ಮುಳುಗಿ ಹೋಗದಂತೆ [illegible] ಪ್ರಕಾರದ ಸಹಾಯವನ್ನು [illegible], ಅದು ಕಮ್ಯುನಿಸ್ಟರ ಪಾಲಾಗದಂತೆ [illegible] ಕೊಳ್ಳಬೇಕೆಂದು [illegible] ಅಮೇರಿಕ ಸರಕಾರದ ಒಂದು [illegible] ಜೋರದಿದ್ದೆ. ಇದರಿಂದ ಚೀನ ಸರಕಾರೀ ವರ್ಗದಲ್ಲಿ ಸ್ವಲ್ಪ ಸಂತೋಷವುಂಟಾಗಿದೆ. [illegible] ರಲ್ಲಿ [illegible] ಒಪ್ಪಂದವನ್ನು [illegible] ವಾಗಿ [illegible] ಅಭಿಪ್ರಾಯ [illegible]. [illegible] ಕಮ್ಯುನಿಸ್ಟ [illegible] ಎಂದು [illegible] ಗೊತ್ತುವಳಿಯನ್ನು [illegible] ಸ್ವೀಕರಿಸಿದರಂತೆ. [illegible] ಅಮೇರಿಕ [illegible] ಕಮ್ಯುನಿಸ್ಟರ [illegible] !

## ಘಟನಾ ಸಮಿತಿಯ ಅಧಿವೇಶನ

ಹೊಸದಿಲ್ಲಿಯಲ್ಲಿ ತಾ. ೫ ರಂದು ರಾಜ್ಯಘಟನೆಯ ಕರಡನ್ನು ಸ್ವೀಕರಿಸುವ ಬಗ್ಗೆ ಡಾ. ಆಂಬೇಡಕರರು ಮುಂಡಿಸಿದ ಗೊತ್ತುವಳಿಯ ಬಗ್ಗೆ ಮತ್ತೆ ಚರ್ಚೆ ನಡೆದಿತು.

ಸಾಮ್ಯವಾದಿ ಮುಖಂಡರಾದ ಸೇಟ ದಾಮೋದರ ಸ್ವರೂಪರು ಈ ಬಗ್ಗೆ ಒಂದು ತಿದ್ದುಪಡಿ ತಂದು ಮಾತನಾಡುತ್ತ ಹೀಗೆ ಹೇಳಿದರು. ಇಂದಿನ ಘಟನಾ ಸಮಿತಿಗೆ ಪ್ರಾತಿನಿಧಿಕ ಸ್ವರೂಪವಿಲ್ಲ. ೧೦೦ ಕ್ಕೆ ೧೫ ರಷ್ಟು ಜನರ ಪ್ರಾತಿನಿಧ್ಯ ಮಾತ್ರ ಈಗಿದೆ. ಭಾರತದ ಈಗಿನ ಪರಿಸ್ಥಿತಿಯು ರಶಿಯದ ಕ್ರಾಂತಿಯ ಪರಿಸ್ಥಿತಿಗೆ ಹೋಲುತ್ತಿದ್ದುದರಿಂದ ಘಟನಾ ರಚನೆಯಲ್ಲಿ ರಶಿಯನ್ ಪದ್ಧತಿಯನ್ನೇ ಅನುಸರಿಸಬೇಕು. ಇದರಲ್ಲಿ ಹಳ್ಳಿಗಳನ್ನು ಕಡೆಗಣಿಸಲಾಗಿದೆ. ಗಾಂಧೀಜಿಯ ಸ್ವಾತಂತ್ರ್ಯದ ಕಲ್ಪನೆಯಲ್ಲಿ ಹಳ್ಳಿಗಳಿಗೆ ಅತ್ಯಂತ ಮಹತ್ವದ ಸ್ಥಾನವಿತ್ತು.

ಈ ತಿದ್ದುಪಡಿಯನ್ನು ಒಬ್ಬರು ವಿರೋಧಿಸಿ ರಾಜ್ಯ ಘಟನೆಯನ್ನು ಸಿದ್ಧಪಡಿಸಲು ಕರೆದ ಸಭೆಗೆ ಅದನ್ನು ಸ್ವೀಕರಿಸುವ ಅಧಿಕಾರವಿಲ್ಲವೆನ್ನುವದು ಅಸಂಗತ ಎಂದು ವಾದಿಸಿದರು.

ಕೊನೆಗೆ ಈ ತಿದ್ದುಪಡಿಯ ಚರ್ಚೆ ಇಲ್ಲಿಗೆ ಮುಗಿಯಬೇಕೆಂದು ಶ್ರೀ ಶ್ಯಾಮ ನಂದನರು ಸೂಚನೆ ತರಲು ಅದು ಅಂಗೀಕೃತವಾಗಿ ಘಟನೆಯ ಮೇಲಿನ ಚರ್ಚೆ ಮುಂದೆ ಸಾಗಿತು.

ಭಾರತದ ರಾಷ್ಟ್ರಭಾಷೆಯಲ್ಲಿಯೇ ಮೊಟ್ಟ ಮೊದಲು ಘಟನೆಯು ಬರೆಯಲ್ಪಡಬೇಕಿತ್ತೆಂದು ಒಬ್ಬರು ಹೇಳಿದರು.

ಕೇಂದ್ರ ಸರಕಾರಕ್ಕೆ ಸಾಧ್ಯವಿದ್ದಷ್ಟು ಹೆಚ್ಚು ಅಧಿಕಾರ ಕೊಡಬೇಕೆಂದೂ ಶಿಕ್ಷಣ, ಪೋಲೀಸ ಮತ್ತು ಆರೋಗ್ಯ ಶಾಖೆಗಳು ಕೇಂದ್ರಕ್ಕೆ ಸೇರಿರಬೇಕೆಂದೂ ಒಬ್ಬರು ನುಡಿದರು.

ಪ್ರತಿಯೊಬ್ಬ ಪೃಥಕಾಯನೂ ದುಡಿಯಲೇಬೇಕೆಂಬ ಬಗ್ಗೆ ಕರಡಿನಲ್ಲಿ ಯಾವ ಕಲಮೂ ಇಲ್ಲ. ಈ ಕಲಮು ಇರದಿದ್ದರೆ ಘಟನೆಯ ಧ್ಯೇಯ ಸಾಧಿಸದು ಎಂದು ಒಬ್ಬರು ವಾದಿಸಿದರು.

ಹಿಂದಿ ಭಾಷೆಯ ಪ್ರಭುತ್ವ ಬೇಡವೆಂದೂ ಇಂಗ್ಲೀಷ ಭಾಷೆಯ ಉಚ್ಚಾಟನೆ ಮಾಡುವ ಭರದಲ್ಲಿ ಹಿಂದಿ ಭಾಷೆ ಅನೇಕರಿಗೆ ಬರುವದಿಲ್ಲವೆಂಬ ಅಂಶವನ್ನು ಮರೆಯಬಾರದೆಂದೂ ಒಬ್ಬರು ವಾದಿಸಿದರು.

ತಾ ೬ ರಂದು ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರೂ ಉಪ ಮುಖ್ಯ ಮಂತ್ರಿ ಸರದಾರ ಪಟೇಲರೂ ಮೊದಲ ಬಾರಿಗೆ ಈ ಅಧಿವೇಶನದ ಸಭೆಗೆ ಬಂದುದರಿಂದ ಸದಸ್ಯರು ಅವರನ್ನು ಹರ್ಷೋದ್ಗಾರಗಳಿಂದ ಸ್ವಾಗತಿಸಿದರು.

ಅಲ್ಪಸಂಖ್ಯಾಕರಿಗೆ ವಿಶೇಷ ಸಂರಕ್ಷಣೆ ಒದಗಿಸುವದು ಯೋಗ್ಯವಲ್ಲವೆಂದು ಅನೇಕರು ಇಂದಿನ ಸಭೆಯಲ್ಲಿ ವಾದಿಸಿದರು. ಶ್ರೀ ಸಿಧ್ವಾರವರು ಮಾತನಾಡುತ್ತ, ಪಾರ್ಶಿಗಳಿಗೆ ವಿಶೇಷ ಸಂರಕ್ಷಣೆಗಳನ್ನು ನೀಡಿದಾಗ ಅವರು ಗೌರವ ಪೂರ್ವಕವಾಗಿ ಅವುಗಳನ್ನು ನಿರಾಕರಿಸಿದಂತೆ ಎಲ್ಲ ಅಲ್ಪಸಂಖ್ಯಾಕರೂ ಅವರ ಉದಾಹರಣೆಯನ್ನೇ ಅನುಕರಿಸಬೇಕೆಂದು ಹೇಳಿದರು. ಆಗ ಸಭೆಯಲ್ಲಿ ಹರ್ಷೋದ್ಗಾರಗಳ ತೆರೆ ಎದ್ದವು.

ಕರಡು ಸಮಿತಿಯು ತನ್ನ ಎಲ್ಲೆ ಮೀರಿ ಹೋಗಿದೆಯೆಂದೂ ಘಟನಾ ಸಮಿತಿಯ ನಿರ್ಣಯಗಳನ್ನು ಬದಲಿಸಲಾಗಿದೆಯೆಂದೂ ಈ ಹೊಸ ರಾಜ್ಯ ಘಟನೆಯನ್ನು ಅಂಗೀಕರಿಸಲು ನಾವು ಅವಸರ ಪಡಕೂಡದೆಂದೂ ಶ್ರೀ ರಂಗರಾವ ದಿವಾಕರರೇ ಮೊದಲಾದ ಕೆಲ ಸದಸ್ಯರು ಅಭಿಪ್ರಾಯ ಪಟ್ಟರು. ರಾಜ್ಯ ಘಟನೆಯು ಹಿಂದಿ ಭಾಷೆಯಲ್ಲಿಯೇ ಸ್ವೀಕೃತವಾಗಬೇಕೆಂದು ಈಗಿನ ಪರಿಸ್ಥಿತಿಯಲ್ಲಿ ಹಟ ಹಿಡಿಯಕೂಡದೆಂದೂ ಹಿಂದಿ ಭಾಷೆಯಲ್ಲಿ ಅವಶ್ಯ ಶಬ್ದ ಭಾಂಡಾರವಿಲ್ಲವೆಂಬುದನ್ನು ಮನದಂದು ಕೆಲಕಾಲ ಇಂಗ್ಲೀಷನ್ನು ಒಪ್ಪಬೇಕೆಂದೂ ಶ್ರೀ ದಿವಾಕರರು ಪ್ರತಿಪಾದಿಸಿದರು.

ಭಾಷಾವಾರ ಪ್ರಾಂತಗಳ ರಚನೆ ಮುಂದೂಡಲ್ಪಡಕೂಡದೆಂದೂ ನಮ್ಮನ್ನೆದುರಿಸುವ ಎಲ್ಲ ಸಮಸ್ಯೆಗಳನ್ನೂ ಬಿಡಿಸಲು ನಾವಿಲ್ಲಿ ಕೂಡಿರುವೆವಲ್ಲದೆ ಅವುಗಳನ್ನು ಬದಿಗೊತ್ತಬೇಕೆಂದಲ್ಲ ಎಂದು ಮೊದಲಾಗಿ ಪ್ರತಿಪಾದಿಸಿದರು. ಮುಂದೆ ಶ್ರೀ ದಿವಾಕರರು ಪ್ರೌಢ ಮತದಾನ ಪದ್ಧತಿಯ ಕಡೆಗೆ ಹೊರಳಿ ಹೀಗೆ ನುಡಿದರು. "ಪ್ರಾಂತಿಕ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ ನಾವು ಜನರ ಪ್ರತಿನಿಧಿಗಳು ಮಾತ್ರವಾಗಿರದೆ ಕಾಯದೆಗಳನ್ನು ರಚಿಸಬಲ್ಲವರೂ ಘಟನೆಯಲ್ಲಿ ಹೇಳಿದಂತಹ ಯೋಗ್ಯ ಪ್ರತಿನಿಧಿಗಳೂ ಆಗಿ ನಮ್ಮ ಹೊಣೆಯನ್ನು ಅರಿತವರಾಗಿರಬೇಕು. ಆದ್ದರಿಂದ ಉಮೇದವಾರರಾದವರು ಇದಕ್ಕೆ ತಕ್ಕ ಅರ್ಹತೆಯುಳ್ಳವರಾಗಿರುವದು ಅತ್ಯವಶ್ಯ. ಉಮೇದವಾರರು ವಿಶೇಷ ಅರ್ಹತೆ ಇಲ್ಲದವರಿದ್ದರೆ ಯಾವ ಘಟನೆಯೂ ಸರಿಯಾಗಿ ಕೃತಿಯಲ್ಲಿ ಇಳಿಯಲಾರದು. ಶಾಸನ ಸಭೆಗಳಂತೆ ಜನರು ಸಹ ಯಾವ ಸ್ವರೂಪದವರಿರಬೇಕೆಂಬುದನ್ನು ನಿರ್ಧರಿಸಿಯೇ ಹೆಜ್ಜೆ ಹಾಕುವದು ಒಳ್ಳೆಯದು"- ಎಂಬು ಮುಂತಾಗಿ ಶ್ರೀ ದಿವಾಕರರು ಹೇಳಿದರು.

# ಜಾತಿ ಧರ್ಮಗಳಿಗೆ ಸರಕಾರದ ಪುರಸ್ಕಾರ

(ಲೇಖಕರು— ಶ್ರೀ ರಂ. ರಾ. ದಿವಾಕರ)

ಜಾತಿಪಂಥಗಳಿಗೆ ಸರಕಾರದಲ್ಲಿ ಪುರಸ್ಕಾರ ಕೊಡುವ ಮತ್ತು ಜನಗಣನೆಯೇ ಮೊದಲಾದ ದಾಖಲೆಗಳಲ್ಲಿಯೂ ನಮೂನೆಗಳಲ್ಲಿಯೂ ಅದರ ಉಲ್ಲೇಖಮಾಡುವ ಪ್ರಶ್ನೆ ಭಾರತ ಪಾರ್ಲಮೆಂಟಿನಲ್ಲಿ ಎರಡುಬಾರಿ—ಒಮ್ಮೆ ೧೧-೮-೪೯ ನೆ ದಿನ ಆ ಸಂಬಂಧದಲ್ಲಿ ಮಂಡಿಸಲ್ಪಟ್ಟಿದ್ದ ಗೊತ್ತುವಳಿ ಹಿಂತೆಗೆದುಕೊಳ್ಳಲ್ಪಟ್ಟಾಗ ಹಾಗು ಇನ್ನೊಮ್ಮೆ ೧೮-೮-೪೮ ರಲ್ಲಿ ಜನಗಣನೆಯ ಮಸೂದೆಯು ಚರ್ಚೆಯಾಗಿ ಅದು ಅಂಗೀಕರಿಸಲ್ಪಟ್ಟಾಗ—ಚರ್ಚೆಗೆ ಬಂದಿತ್ತು. ಇವೆರಡೂ ಸಂದರ್ಭಗಳಲ್ಲಿ, ಗೃಹ ಮಂತ್ರಿಗಳು, ಸರಕಾರವು ಜಾತ್ಯತೀತವಾಗಿರುವದರಿಂದ ಜಾತಿಪಂಥ ಭೇದಗಳಿಗೆ ಇರುವ ಪುರಸ್ಕಾರವನ್ನು ರದ್ದುಗೊಳಿಸಬೇಕೆಂದು ವಾದಿಸುವವರೊಡನೆ ಅದು ಸಂಪೂರ್ಣ ಸಹಮತವಾಗಿದೆಯೆಂದು ಹೇಳಿದರು. ಆದರೆ, ನೌಕರಿಗಳಲ್ಲಿಯೂ ಶಾಸನ ಸಭೆಗಳಲ್ಲಿಯೂ ಜಾತ್ಯನುಸಾರವಾಗಿ ಒಂದಂತ ಸ್ಥಳಗಳನ್ನು ಕಾದಿರಿಸುವ ಪರಿಪಾಠ ಇನ್ನೂ ಉಳಿದಿರುವದರಿಂದ ಈ ವಿಷಯದಲ್ಲಿ ಎಷ್ಟು ಮುಂದೆ ಹೋಗಬಹುದೆಂಬದನ್ನು ವಿಚಾರಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಸರಕಾರದ ಪರವಾಗಿ ಅವರು ನುಡಿದರು.

### ಬರಿ ಪುರಸ್ಕಾರ ಮಾಡಿದರೆ ಸಾಲದು

ಸರಕಾರ ಈ ವಿಚಾರದಲ್ಲಿ ಸಾಕಷ್ಟು ಮುಂದಾಗಲಿಲ್ಲವೆಂಬ ಬಲವತ್ತರವಾದ ಅಸಂತೋಷ ಅನೇಕರ ಮನಸಿನಲ್ಲಿದ್ದರೂ ಸದ್ಯಕ್ಕೆ ಇಷ್ಟರಿಂದಲೇ ಸಂತುಷ್ಟಿಗೊಂಡು ಪ್ರಸ್ತಾವಿತ ಸಮಿತಿಯ ಸೂಚನೆಗಳ ಹಾದಿ ನೋಡಬೇಕಾಗಿದೆ. ಆದರೆ ಅಸ್ತಿತ್ವದಲ್ಲಿರುವ ವಿದ್ಯಮಾನಗಳಿಗೆ ಬರಿ ಪುರಸ್ಕಾರ ಕೊಡದಾಕ್ಷಣ ಅಥವಾ ದಾಖಲೆಗಳಲ್ಲಿ ಅವುಗಳನ್ನು ಉಲ್ಲೇಖಿಸದೆ ಬಿಟ್ಟ ಮಾತ್ರಕ್ಕೆ ಜಾತಿಪ್ರಜ್ಞೆಯನ್ನೂ ಜಾತೀಯತೆಯನ್ನೂ ತೊಡೆದುಹಾಕಿದಂತಾಗಲಿಲ್ಲವೆಂದು ಸರಿಯಾಗಿ ತಿಳಿದುಕೊಳ್ಳಬೇಕು. ಇದಕ್ಕೆ ನಿಜವಾದ ಪರಿಹಾರವೆಂದರೆ ಸಮಾಜದ ಘಟನೆಯನ್ನೆ ಬದಲು ಮಾಡುವದು. ಇದು ಕ್ರಾಂತಿಯ ಮೂಲಕವಾಗಲಿ ಮಂದಗತಿಯ ಪರಿವರ್ತನೆಯಿಂದಾಗಲಿ ಮಾತ್ರ ಸಾಧ್ಯವಾಗಬಹುದಾದ ಮಾತು. ಸಾಮಾಜಿಕ ಅಂತಸ್ತುಗಳಲ್ಲಿ ಮೇಲ ಕೀಳೆಂಬ ಭೇದವನ್ನೆಲ್ಲ ಕಡೆಗಣಿಸಿ ಸಹಭೋಜನ ಮತ್ತು ಅಂತರ್ಜಾತೀಯ ವಿವಾಹಗಳನ್ನು ಬಳಕೆಯಲ್ಲಿ ತರುವುದೊಂದೇ ಜಾತೀಯ ಭಾವನೆಗಳನ್ನು ತೊಡೆದು ಹಾಕುವ ಪರಮೋಪಾಯವೆಂದು ತೋರುತ್ತದೆ. ಅಂಥ ದಿನ ಬರುವ ವರೆಗೆ ಮಾಡುವ ಕೆಲಸಗಳೆಷ್ಟೋ ಇವೆ, ಮತ್ತು ಆ ರಚನಾತ್ಮಕ ಕಾರ್ಯದಲ್ಲಿ ಸರಕಾರ ತನ್ನ ಪಾಲಿನ ಹೊಣೆಯನ್ನು ನಿರ್ವಹಿಸುವದು ಅವಶ್ಯವಾಗಿದೆ.

ಮೇಲೆ ಹೇಳಿದ ಗೊತ್ತುವಳಿಯ ಉದ್ದೇಶ ಸಾಮಾಜಿಕ ಕ್ರಾಂತಿಯನ್ನುಂಟುಮಾಡುವದಲ್ಲವೆಂಬ ಮಾತು ಸ್ವಯಂವೇದ್ಯ ಸರಕಾರದ ಕಾಗದಪತ್ರಗಳಲ್ಲಿ ಅವುಗಳ ಉಲ್ಲೇಖ ಮಾಡುವ ನಿಯಮವನ್ನು ಕಿತ್ತುಹಾಕುವ ಮೂಲಕ ಜಾತೀಯ ಮತ್ತು ಧಾರ್ಮಿಕ ಭೇದ ಬುದ್ಧಿಯನ್ನು—ಸರಕಾರಿ ವ್ಯವಹಾರದಲ್ಲಿ—ನಿರುತ್ತೇಜನಗೊಳಿಸಬೇಕೆಂದು ಅದರ ಆಶಯವಾಗಿತ್ತು. ಜಾತಿವರ್ಣಗಳು ಭಾರತದಲ್ಲಿ ಕಳೆದ ಮೂರುಸಾವಿರ ವರ್ಷಗಳಿಂದ ಅಸ್ತಿತ್ವದಲ್ಲಿವೆಯಾದರೂ ನಾಗರಿಕ ಜೀವನದಲ್ಲಿ, ನೌಕರಿಗಳಲ್ಲಿ, ಪಕ್ಷಪಾತ ತೋರಿಸುವ ಬಗ್ಗೆ, ಅವುಗಳಿಗೆ ಸರಕಾರದ ಪುರಸ್ಕಾರ ದೊರೆತ ಕತೆ ಮಾತ್ರ ಕೌತುಕದ್ದಾಗಿದೆ. ಈಗ ನಾವು ಸ್ವತಂತ್ರರಾಗಿರುವದರಿಂದ ಈ ಇಡಿ ಪ್ರಸಂಗವನ್ನು ನಿರ್ವಿಕಾರವಾಗಿ ವಿವೇಚಿಸಬಹುದು. ಆದರೆ ಆ ವಿಷಯವನ್ನು ಇಲ್ಲಿ ಚರ್ಚಿಸುವದು ನನ್ನ ಉದ್ದೇಶವಲ್ಲ. ಜಾತಿ ಪಂಗಡಗಳ ವಿವರಗಳನ್ನೆಲ್ಲ ಸಂಗ್ರಹಿಸಿ ಸ್ಥಾನಗಳನ್ನು ಕಾಯ್ದಿಟ್ಟದ್ದೇ ಮೊದಲಾದ ಉಪಕ್ರಮದಲ್ಲಿ ಸ್ವಾರ್ಥದ ಪ್ರೇರಣೆ ಇಲ್ಲದೆ ಇದ್ದಿಲ್ಲವೆಂದಿಷ್ಟೆ ಇಲ್ಲಿ ಹೇಳಬಯಸುವೆ. ಅದರಲ್ಲಿಯೂ ೧೮೫೭ ರ ನಂತರ ಬ್ರಿಟಿಶ ಆಡಳಿತಗಾರರು ವಹಿಸಿದ ನೀತಿಯಿಂದ, ಜೇಮ್ಸ ಕರ್‍ರರು ಹೇಳುವಂತೆ, "ರಾಷ್ಟ್ರೀಯ ಐಕ್ಯಕ್ಕೆ ವಿರುದ್ಧವಾದ ಜಾತೀಯ ಭಾವನೆ" ಬೆಳೆದುಬರಲು ಉತ್ತೇಜನ ದೊರೆಯಿತು. ಇಂದು ಭಾರತದಲ್ಲಿ ಜೀವನದ ಎಲ್ಲ ಅಂಗಗಳಲ್ಲಿಯೂ ಅನೇಕ ಸಲ ತನ್ನ ಜಾತಿಯನ್ನು ಉಲ್ಲೇಖಿಸುವ ಪ್ರಸಂಗಗಳು ಬರುವ ಕಾರಣ ಪ್ರತಿಯೊಬ್ಬನಿಗೂ—ಮನಸಿರಲಿ ಇಲ್ಲದಿರಲಿ—ತನ್ನ ಜಾತಿಯ ಪ್ರಜ್ಞೆ ಮೇಲಿಂದ ಮೇಲೆ ಬಂದೇ ಬರುತ್ತದೆ. ಹುಟ್ಟು ಸಾವುಗಳಾದಾಗ, ಸಾಲೆ ಕಾಲೇಜುಗಳಿಗೆ ಹೋಗುವಾಗ, ನೌಕರಿಗೆ ಅರ್ಜಿ ಹಾಕುವಾಗ ಇಲ್ಲವೆ ಚುನಾವಣೆಗೆ ನಿಲ್ಲುವಾಗ, ಕೋರ್ಟು ಕಚೇರಿಗಳಲ್ಲಿ ವ್ಯಾಜ್ಯ ಹೂಡುವಾಗ, ಸಾಲಕ್ಕೆ ಅರ್ಜಿ ಹಾಕುವಾಗ ಮೊದಲು ಮಾಡಿ ಎಲ್ಲ ಸಂದರ್ಭಗಳಲ್ಲಿಯೂ ತನ್ನ ಜಾತಿಯನ್ನು ಮತ್ತು ಎಷ್ಟೋ ಬಾರಿ ತನ್ನ ಉಪಜಾತಿಯನ್ನು ಕೂಡ ಉಲ್ಲೇಖಿಸಬೇಕಾಗುತ್ತದೆ. ಈ ಮೂಲಕ ಜಾಗ್ರತವಾಗುವ ಜಾತೀಯ ಭಾವನೆಯನ್ನು ಇಲ್ಲದಂತೆ ಮಾಡುವದೇ ಗೊತ್ತುವಳಿಯ ಗುರಿಯಾಗಿತ್ತು. ಸಂಗಡಲೇ, ಜಾತೀಯ ಭಾವನೆಯನ್ನು ಜಾಗ್ರತಗೊಳಿಸದೆಯೇ ಹಿಂದುಳಿದ ವರ್ಗಗಳನ್ನು ಮುಂದೆ ತರುವ ಉಪಾಯವನ್ನು ನಾವು ಹುಡುಕಬೇಕಾಗಿದೆಯೆಂದು ನನ್ನ ದೃಢವಾದ ನಂಬಿಗೆ.

### ಈಗಿನ ಪದ್ಧತಿ ಅಭಿಶಾಪದಂತಿದೆ

ಹೊಸ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನವಾದ ಅವಕಾಶವನ್ನೂ ಹಿಂದುಳಿದ ವರ್ಗಗಳಿಗೆ ವಿಶೇಷ ಸೌಕರ್ಯಗಳನ್ನೂ ದೊರಕಿಸಿ ಕೊಡುವ ಪೂರ್ಣ ಹೊಣೆಯನ್ನು ರಾಷ್ಟ್ರೀಯ ಸರಕಾರವೇ ಹೊರಬೇಕೆಂಬಲ್ಲಿ ಸಂಶಯವಿಲ್ಲ. ಆದರೆ ಜಾತಿ, ಧರ್ಮಗಳಿಗೆ ಮಹತ್ವ ಕೊಡದೆ, ಜಾತೀಯ ಭಾವನೆ—ಅಭಿಮಾನಗಳಿಗೆ ಉತ್ತೇಜನ ಕೊಡದೆ ಇದನ್ನು ಹೇಗೆ ಸಾಧಿಸಬೇಕೆಂಬುದೀಗ ಪ್ರಶ್ನೆ. ಈಗಿರುವ ಪದ್ಧತಿಯಿಂದ ಇಮ್ಮಡಿ ಕೇಡಾಗುತ್ತಿದೆ. ಅದು ಜಾತೀಯ ಗುಂಪುಗಳನ್ನೂ ಜಾತೀಯ ದ್ವೇಷ ಮಾತ್ಸರ್ಯಗಳನ್ನೂ ಉಂಟುಮಾಡಿ ಶ್ರೇಷ್ಠೋಹಂ ಬುದ್ಧಿಯನ್ನೂ ನೀಚೋಹಂಬುದ್ಧಿಯನ್ನೂ ಹೆಚ್ಚಿಸುತ್ತದೆ. ಸಾಲದ್ದಕ್ಕೆ ಅದು "ಹಿಂದುಳಿದ" ಜಾತಿಗಳನ್ನು ಮಾತ್ರವಲ್ಲ, ಮುಂದುವರಿದ ಜಾತಿಗಳನ್ನು ಕೂಡ ಸಂಘಟಿಸಲು ಎಡೆ ಕೊಡುತ್ತದೆ. ಇನ್ನು ಜಾತಿಭೇದಗಳಿಗಂತೂ ಲೆಕ್ಕವಿಲ್ಲ, ಪಾರವಿಲ್ಲ. ಹೊಸ ಹೊಸ ಜಾತೀಯ ಗುಂಪುಗಳು ತಲೆಯೆತ್ತಿ ಸ್ಥಾನಗಳನ್ನು ಕಾದಿರಿಸಿರೆಂದು ಕೂಗೆಬ್ಬಿಸಿವೆ. ಈ ಪದ್ಧತಿಯಿಂದ ದೇಶದ ರಾಜಕೀಯ ಶರೀರದಲ್ಲಿ ಅಲ್ಲಸಲ್ಲದ ಅಡ್ಡತಿಡ್ಡ ವಿಭಾಗಗಳಾಗುವವು. ಈ ವಿಭಾಗಗಳಿಗೆ ಯಾವ ತರ್ಕಸಿದ್ಧ ತತ್ವಗಳ ಅಥವಾ ಆರ್ಥಿಕ ಹಿತಸಂಬಂಧಗಳ ಆಧಾರವಿರದೆ ಶಾಶ್ವತ ಜನ್ಮ ಜಾತಿಯೇ ಆಧಾರವಾಗಿದೆ. ನಿಜವಾಗಿ ಹಿಂದೆಬಿದ್ದವರಿಗೆ ಹೆಚ್ಚು ಅವಕಾಶ ದೊರೆಯುವಂತೆ ಆದರೆ ಜಾತಿಭಾವನೆ ಬೆಳೆಯದಂತೆ ಹೇಗೆ ವ್ಯವಸ್ಥೆ ಮಾಡಬೇಕೆಂದು ನಾವೀಗ ವಿಚಾರ ಮಾಡಬೇಕಾಗಿದೆ.

### ಹಿಂದುಳಿದವರನ್ನು ಉದ್ಧರಿಸುವ ಬಗೆ

ಭಾರತದಲ್ಲಿಂದು ಐತಿಹಾಸಿಕ ಮತ್ತು ಸಾಮಾಜಿಕ ಕಾರಣಗಳಿಂದ ಕೆಲಕೆಲವು ಗುಂಪುಗಳು ಶಿಕ್ಷಣ—ಸಂಸ್ಕಾರಗಳಲ್ಲಿ, ಸಾಮಾಜಿಕ—ಆರ್ಥಿಕ ವಿಚಾರಗಳಲ್ಲಿ ಹಿಂದುಳಿದುದು ಕಾಣಬರುತ್ತದೆ. ಈ ಜನರಿಗೆ ಸಹಾಯ ಮಾಡುವದು ಅತ್ಯಗತ್ಯ. ಸರಕಾರದವರು ಅವರಿಗೆ ಎರಡು ಬಗೆಯಾಗಿ ಸಹಾಯ ಮಾಡಬಹುದು.— ಅವರಿಗೆ ಹೆಚ್ಚು ಶಿಕ್ಷಣ ಸೌಕರ್ಯಗಳನ್ನು ಕೊಡುವ ಮತ್ತು ನೌಕರಿ ದೊರಕಿಸಿ ಕೊಡುವ ಮೂಲಕ ಹಾಗು ಅವರ ಆರ್ಥಿಕ ದುರವಸ್ಥೆಯನ್ನು ನೀಗಿಸಲು ಕ್ರಮಗಳನ್ನು ಕೈಕೊಳ್ಳುವ ಮೂಲಕ.

ಐದು ವರ್ಷಕ್ಕೊಮ್ಮೆ ಹಿಂದುಳಿದ ಜನರ ಸ್ಥಿತಿಗತಿಯ ಪರಿಶೀಲನೆಯಾಗಬೇಕೆಂದು ನನ್ನ ಅಭಿಪ್ರಾಯ. ಈ ಪರಿಶೀಲನೆಯಲ್ಲಿ ಜಾತಿಗಳನ್ನು ಗಣನೆಗೆ ತೆಗೆದುಕೊಳ್ಳದೆ ವಿಶಿಷ್ಟ ಪ್ರದೇಶಗಳನ್ನು ತೆಗೆದುಕೊಳ್ಳಬೇಕು. ಇದಲ್ಲದೆ ತಾವು ಹಿಂದುಳಿದವರೆಂದು ನೊಂದು ಮಾಡಿಕೊಳ್ಳಲು ಸಿದ್ಧರಿರುವ ಅಥವಾ ಇಚ್ಛಿಸುವ ಜನರ ಪ್ರಕರಣಗಳನ್ನು ಪರೀಕ್ಷಿಸಿ ಅವರನ್ನು ಹಿಂದುಳಿದವರು ಅಥವಾ ಅಲ್ಲವೆಂದು ವರ್ಗೀಕರಿಸಬಹುದು.

ಒಮ್ಮೆ ಪರಿಶೀಲನೆಯಾಗಿ ಕೆಲ ಕೆಲವು ಪ್ರದೇಶಗಳನ್ನು ಗುರುತಿಸಿದುದಾಯಿತೆಂದರೆ ಬಳಿಕ ಅಂಥ ಪ್ರದೇಶಗಳಿಗೆ ಕೈಗಾರಿಕೆಗಳ ಶಿಕ್ಷಣ ಮೊದಲಾಗಿ ವಿಶೇಷ ಶೈಕ್ಷಣಿಕ ಸೌಕರ್ಯಗಳನ್ನು ಒದಗಿಸಬೇಕು. ಅಲ್ಲಿ ಹೆಚ್ಚು ಶಿಷ್ಯವೃತ್ತಿಗಳನ್ನೂ ಅಲ್ಲಿನ ಶೈಕ್ಷಣಿಕ ಸಂಸ್ಥೆಗಳಿಗೆ ಧಾರಾಳ ಸಹಾಯ ಧನವನ್ನೂ ಕೊಡಬೇಕು,

### ನೌಕರಿಗಳ ಹಂಚಿಕೆಗೆ ಹೊಸ ಉಪಾಯ

ನೌಕರಿಗಳ ವಿಷಯದಲ್ಲೇ ಎಲ್ಲಕ್ಕಿಂತ ಹೆಚ್ಚು ಕಚ್ಚಾಟ ಕಾಣಬರುತ್ತದೆ. ಆದರಲ್ಲಿ ಜಾತಿಗಳನ್ನು ಪುರಸ್ಕರಿಸಲೇಬಾರದೆಂದು ನನ್ನ ಮತ. ಆದರೆ ಹಿಂದುಳಿದ ಅರ್ಜಿದಾರರಿಗೆ ಪೂರ್ಣ ಅವಕಾಶವನ್ನು ಕೊಡುವ ಸಲುವಾಗಿ, ಕನಿಷ್ಠ ಅರ್ಹತೆಗಳುಳ್ಳವರಿಗಾಗಿಯೇ ಸಾಕಷ್ಟು ಸ್ಥಾನಗಳನ್ನು ಕಾದಿರಿಸಬೇಕು. ನನ್ನೀ ಸೂಚನೆಯನ್ನು ದೃಷ್ಟಾಂತ ಕೊಟ್ಟು ವಿವರಿಸುವೆ. ಉದಾಹರಣೆಗಾಗಿ, ಒಂದೊಂದು ವಿಶಿಷ್ಟ ಶಾಖೆಯಲ್ಲಿಯೂ ಕಾರ್ಯಕ್ಷಮತೆಯನ್ನು ಕಾಯ್ದುಕೊಳ್ಳಲು ತಡೆಯಾಗದಂತೆ, ಇಂತಿಷ್ಟು ಅಂಶ ಸ್ಥಾನಗಳನ್ನು ಯೋಗ್ಯತೆ ನೋಡಿಯೇ ತುಂಬತಕ್ಕದ್ದೆಂದು ವಿಧಿಸಬೇಕು. ಉಳಿದ ಸ್ಥಾನಗಳಿಗೆ ಕಡಿಮೆ ಅರ್ಹತೆಗಳುಳ್ಳವರನ್ನು ನೇಮಿಸಿಕೊಳ್ಳಬೇಕು, ಈ ಪ್ರಮಾಣ ಬೇರೆ ಬೇರೆ ಶಾಖೆಗಳಿಗೆ ಬೇರೆ ಬೇರೆ ವಿಧವಾಗಿರಬಹುದು ಉದಾಹರಣೆಗಾಗಿ ನನ್ನನ್ನು ಕೇಳಿದರೆ, ಶಿಕ್ಷಣ ಮತ್ತು ಎಂಜಿನಿಯರಿಂಗ್ ಶಾಖೆಗಳಲ್ಲಿ ಉತ್ಕೃಷ್ಟ ಅರ್ಹತೆಗಳುಳ್ಳವರು ನೂರಕ್ಕೆಪ್ಪತ್ತರಷ್ಟಾದರೂ ಇರುವಂತೆ ನೋಡಿಕೊಳ್ಳಬೇಕು. ಉಳಿದ ಮುವ್ವತ್ತು ಅಂಶ ಸ್ಥಾನಗಳನ್ನು ತುಂಬುವಾಗ, ಅತಿ ಕಡಿಮೆ ಅರ್ಹತೆಯುಳ್ಳವನನ್ನು ಮೊದಲು ಆರಿಸಿಕೊಂಡು ಹೆಚ್ಚು ಹೆಚ್ಚು ಅರ್ಹತೆಯುಳ್ಳವರನ್ನು ಕಡೆಕಡೆಗೆ ಆರಿಸುತ್ತ ಹೋಗಬೇಕು. ಕಾರಕೂನರನ್ನು ಭರತಿಮಾಡಿಕೊಳ್ಳುವಾಗ ಇದೇ ಪ್ರಮಾಣವನ್ನು ಅನುಸರಿಸಬೇಕೆಂದಿಲ್ಲ. ಅಲ್ಲಿಶ್ರೇಷ್ಠ ಅರ್ಹತೆಯುಳ್ಳವರಿಗೆ ನೂರಕ್ಕೈವತ್ತರಷ್ಟು ಸ್ಥಾನ ಕಾದಿಟ್ಟರೆ ಸಾಕು ಉಳಿದ ಐವತ್ತರಷ್ಟನ್ನು ಕನಿಷ್ಠ ಯೋಗ್ಯತೆಯುಳ್ಳವರಿಂದಲೇ ತುಂಬಿಕೊಳ್ಳಬಹುದು. ಈ ಪದ್ಧತಿಯನ್ನು, ಅವಶ್ಯವಿದ್ದರೆ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಅನುಸರಿಸಿದರೆ, ಜಾತಿಪಂಥಗಳೇನೇ ಇರಲಿ, ಎಲ್ಲ ಹಿಂದುಳಿದವರಿಗೆ ಸರಿಯಾದ ಸಂದರ್ಭಗಳು ದೊರಕಲು ಅವಕಾಶವಾಗುವದೆಂದು ನಾನು ನಂಬಿದ್ದೇನೆ.

ಕೆಲ ಪ್ರದೇಶಗಳಲ್ಲಿರುವ ಹಿಂದುಳಿದ ಜನರ ಆರ್ಥಿಕ ದುರವಸ್ಥೆಯನ್ನು ಸುಧಾರಿಸುವ ಸಲುವಾಗಿ ಕೈಗಾರಿಕೆಗಳ ಶಿಕ್ಷಣದ ವ್ಯವಸ್ಥೆಯಾಗಬೇಕು. ಅದರ ಬೆನ್ನಿಗೇ ಸರಕಾರಿ ಸಂಘಗಳನ್ನು ಸ್ಥಾಪಿಸಬೇಕು.

ಹತ್ತು ವರ್ಷಗಳ ಕಾಲ ಈ ಪದ್ಧತಿಯನ್ನನುಸರಿಸಿದರೆ ಜಾತಿಜಾತಿಗಳ ಸಂಬಂಧದಲ್ಲಿ ಸ್ಫುಟವಾದ ಪರಿವರ್ತನೆ ದೃಗ್ಗೋಚರವಾಗಿ ಸಂಗಡಲ್ಲೇ ಎಲ್ಲರ ಉತ್ಕರ್ಷ ಸಾಧಿಸಬಹುದು ಆದರೆ ಈ ಬಗೆಯಾಗಿ ಧೈರ್ಯದಿಂದ ಹೊಸ ಪ್ರಯೋಗವನ್ನು ಮಾಡುವಬದಲು ಜಾತೀಯ ಭಾವನೆಯನ್ನೂ ಅದರೊಡನೆ ಬರುವ ಸಮಸ್ತ ಉಪದ್ರವಗಳನ್ನೂ ನಾವು ಶಾಶ್ವತಗೊಳಿಸುತ್ತ ಹೋದರೆ, ಜಾತೀಯತೆಗಾಗಲಿ ಜಾತೀಯ ದುರಭಿಮಾನವಾಗಲಿ ಕೊನೆಗೊಳ್ಳುವ ಸಂಭವವೇ ಇಲ್ಲ.

—"ಫಾರ್ವರ್ಡ" ಪತ್ರಿಕೆಯಿಂದ

---

ದಕ್ಷಿಣ ಕನ್ನಡ ಜಿಲ್ಲಾ ಅಧ್ಯಾಪಕ ಸಂಘದ ಆಶ್ರಯದಲ್ಲಿ ದಿನಾಂಕ ೩ ರಂದು ಅಪರಾಹ್ನ ಜರಗಿದ ಸೆಕೆಂಡರೀ ಶಾಲಾ ಉಪಾಧ್ಯಾಯರ ಪರಿಷತ್ತಿನಲ್ಲಿ ಮದ್ರಾಸು ಸರಕಾರದ ಹೊಸ ವಿದ್ಯಾಯೋಜನೆಯ ತತ್ವಗಳನ್ನು ವಿದ್ಯಾಮಂತ್ರಿಗಳು ವಿವರಿಸಿ ಅಧ್ಯಾಪಕ ವರ್ಗದ ಸಹಕಾರವನ್ನು ಕೇಳಿದರು.

ಅಮೇರಿಕೆಯಲ್ಲಿ

# ಮರಳಿ ಟ್ರೂಮನ್ನರಿಗೇ ಅಧ್ಯಕ್ಷಪದ

## ವಾಲೇಸ್, ಡ್ಯೂಯಿ, ಥರ್ಮಂಡ ಇವರ ಪರಾಭವ

### ಟ್ರೂಮನ್ನರ ಸಂಕ್ಷಿಪ್ತ ಪರಿಚಯ



ಅಮೇರಿಕೆಯ ಶಾಸನ ಸಭಾ ಭವನ — ಕ್ಯಾಪಿಟೋಲ

ಅಮೇರಿಕೆಯ ಮತದಾರರ ಚಿತ್ತ ಹೀಗೆಯೇ ನಿಲ್ಲುವದೆಂದು ಭವಿಷ್ಯ ಹೇಳುವವರಿಗೆ ಎದೆಗಾರಿಕೆ ಬಹಳ ಬೇಕು. ಮೊನ್ನೆ ನವೆಂಬರ ೪ಕ್ಕೆ ಪೂರ್ಣವಾದ ಅಮೇರಿಕೆಯ ಅಧ್ಯಕ್ಷ ಚುನಾವಣೆ ಈ ಮಾತಿಗೆ ಇನ್ನೊಂದು ನಿದರ್ಶನ.



ಅಲ್ಬೆನ್ ಬಕ್ಲೆರ್ - ಉಪಾಧ್ಯಕ್ಷ

ಅಧ್ಯಕ್ಷ ಟ್ರೂಮನ್ನರು ಈ ಬಾರಿ ತಿರುಗಿ ಆರಿಸಿ ಬರುವರೆಂದು ಯಾರೂ ನೆನಸಿರಲಿಲ್ಲ. ಅದು ಅನೇಕ ರೀತಿಗಳಿಂದ ಅನಿರೀಕ್ಷಿತವಾಗಿತ್ತು. ಮೊದಲನೆಯದಾಗಿ, ತಾನೇ ಅಧ್ಯಕ್ಷನಾಗಿ ಆರಿಸಿ ಬಾರದೆ, ಅಧ್ಯಕ್ಷನ ಮರಣದ ಫಲವಾಗಿ ಉಪಾಧ್ಯಕ್ಷ ಸ್ಥಾನದಿಂದ ಅಧ್ಯಕ್ಷತೆಗೇರಿದವರಾರೂ ಈ ವರೆಗೆ ಮತ್ತೊಂದು ಬಾರಿ ಆರಿಸಿ ಬಂದದ್ದಿಲ್ಲವೆನ್ನಬಹುದು. ಮೇಲಾಗಿ ಅಧ್ಯಕ್ಷ ರೂಜವೆಲ್ಟರು ಬಿಟ್ಟು ಹೋದ ಪದವಿಗೆ ಇವರು ಅಷ್ಟು ಯೋಗ್ಯರೆನಿಸಲಿಲ್ಲವೆಂಬ ಅಭಿಪ್ರಾಯ ಅವರ ಪಕ್ಷದವರಲ್ಲೇ ಉಂಟಾಗಿತ್ತು. ಹದಿನಾರು ವರ್ಷಗಳ ನಂತರ ರಿಪಬ್ಲಿಕನ್ನರು ತಿರುಗಿ ಅಧಿಕಾರವನ್ನು ಕಸಿದುಕೊಳ್ಳುವರೆಂದು ಹೇಳಲು ಬೇಕಾದಷ್ಟು ಲಕ್ಷಣಗಳು ಎರಡು ವರ್ಷಗಳ ಹಿಂದೆಯೆ ಕಾಣಿಸಿಕೊಂಡಿದ್ದವು. ಕಳೆದ ದ್ವೈವಾರ್ಷಿಕ ಚುನಾವಣೆಗಳಲ್ಲಿ ಶಾಸನ ಸಭೆಗಳಲ್ಲಿ (ಕಾಂಗ್ರೆಸ್) ರಿಪಬ್ಲಿಕನ್ನರು ಬಹುಸಂಖ್ಯರಾಗಿ ಆರಿಸಿಬಂದಿದ್ದರು. ದೇಶದಲ್ಲೆಲ್ಲ ಟ್ರೂಮನ್ನರ ಡೆಮೊಕ್ರೆಟಿಕ್ ಪಕ್ಷದ ವರ್ಚಸ್ಸು ಇಳಿಮುಖವಾದಂತೆ ಕಂಡುಬಂದಿತ್ತು. ಸಾಲದ್ದಕ್ಕೆ ಪ್ರಗತಿ ಪಕ್ಷದ ಹೆನ್ರಿ ವಾಲೇಸರೂ ನಿಗ್ರೋಗಳ ವಿಷಯಕ್ಕೆ ಔದಾರ್ಯದ ಧೋರಣ ವಹಿಸಬೇಕೆಂದಿದ್ದ ಟ್ರೂಮನ್ನರ ವಿರುದ್ಧ ಡೆಮೊಕ್ರೆಟಿಕ್ ಪಕ್ಷದಲ್ಲಿ ದಂಗೆಯೆದ್ದು ಸ್ಥಾಪಿಸಲ್ಪಟ್ಟ "ಸ್ಟೇಟ್ಸ್ ರೈಟ್ಸ್" ಇಲ್ಲವೆ ಸಂಸ್ಥಾನಗಳ ಹಕ್ಕುಗಳ ಪ್ರತಿಪಾದಕ ಪಕ್ಷದ ಥರ್ಮಂಡರೂ ಟ್ರೂಮನ್ನರ ಲಕ್ಷಾಂತರ ಮತಗಳನ್ನು ತಿರುಗಿಸಿಕೊಳ್ಳುವರೆಂದೂ ಒಡನುಡಿಯಲಾಗಿತ್ತು. ಆದರೆ ಅಂಥದೇನೂ ಒದಗಿ ಬರದೆ ಅಧ್ಯಕ್ಷ ಟ್ರೂಮನ್ನರು ಆರಿಸಿ ಬಂದುದು ಮಾತ್ರವಲ್ಲದೆ ಕಾಂಗ್ರೆಸ್ಸಿನ ಎರಡೂ ಭವನಗಳಲ್ಲಿ ಎರಡು ವರ್ಷಗಳ ಹಿಂದೆ ಟ್ರೂಮನ್ ಪಕ್ಷದವರು ಕಳೆದುಕೊಂಡಿದ್ದ ಬಹುಮತವನ್ನು ಅವರು ತಿರುಗಿ ಸಂಪಾದಿಸಿದ್ದು ಅವರಿಗೇ ಆಶ್ಚರ್ಯವೆನಿಸಿರಬಹುದು.

* *

## ಟ್ರೂಮನ್ನರ ಆಡಳಿತ

ಅಧ್ಯಕ್ಷ ಟ್ರೂಮನ್ನರು ೧೯೪೫ ಎಪ್ರಿಲ ೧೨ ನೆ ದಿನ ಅಧ್ಯಕ್ಷತೆಗೇರಿದರು. ೧೯೪೪ ನವೆಂಬರದಲ್ಲಿ ರೂಜವೆಲ್ಟರ ದ್ವಿತೀಯರಾಗಿ ಚುನಾವಣೆಯನ್ನು ಹೋರಾಡಿ ಅವರು ಉಪಾಧ್ಯಕ್ಷತೆಗೆ ಆರಿಸಿ ಬಂದಿದ್ದರು. ಆದರೆ ಕೆಲವೇ ತಿಂಗಳುಗಳಲ್ಲಿ— ಇನ್ನೂ ಜರ್ಮನಿಯು ಶರಣಾಗತಿ ಆಗದಿದ್ದಾಗ— ಅಧ್ಯಕ್ಷ ರೂಜವೆಲ್ಟರು ತಮ್ಮ ನಾಲ್ಕು ವರ್ಷದ ಅವಧಿಯಲ್ಲಿ ಒಂದು ವರ್ಷವನ್ನೂ ದಾಟದೆ ಅಕಸ್ಮಾತ್ ಮೃತ್ಯುವಿಗೆ ತುತ್ತಾದುದರಿಂದ ಅಮೇರಿಕನ ಘಟನೆಯ ವಿಧಿಯಂತೆ ಉಪಾಧ್ಯಕ್ಷರು ಅಧ್ಯಕ್ಷಪಟ್ಟವನ್ನು ಪಡೆದರು ಅವರು ಅಧಿಕಾರಕ್ಕೆ ಬಂದ ಕಾಲ ಗಂಡಾಂತರದ್ದಲ್ಲದಿದ್ದರೂ ಅದು ಅತ್ಯಂತ ನಿರ್ಣಾಯಕ ಮುಹೂರ್ತವಾಗಿತ್ತು. ಅವರ ಅಧಿಕಾರ ಕಾಲದಲ್ಲಿ ಜರ್ಮನಿ ಶರಣು ಬಂತು, ಜಪಾನದ ಮೇಲೆ ಅಣುಬಾಂಬು ಒಗೆದು ಅದನ್ನು ಹಣಿದುದಾಯಿತು. ಆ ಮೇಲೆ ಪ್ರಾರಂಭವಾಯಿತು, ವಿಜೇತರೊಳಗಿನ ಕಚ್ಚಾಟ. ಶಾಶ್ವತ ಶಾಂತಿಯೆಂಬುದು ಅವರ ಆಳಿಕೆಯಲ್ಲಿ ಕನಸಿನ ಗಂಟಾಗುತ್ತ ಹೊರಟಿತು. ಯುರೋಪಿನ ಮಿತ್ರರಾಷ್ಟ್ರಗಳ ತಣಿಯಲಾರದ ಹಸಿವೆಯನ್ನು ತಣಿಸುವ ಭಾರ ಅಮೇರಿಕೆಯ ಕೊರಳಿಗೆ ಸುತ್ತುಬಿತ್ತು. ರಶಿಯದೊಡನೆ ಮನಸ್ತಾಪ ಬೆಳೆದು ಜಗತ್ತಿನ ನಾಯಕತ್ವಕ್ಕೆ ಅದರೊಡನೆ ಸೆಣಸಲು ಅಮೇರಿಕೆ ಕಣಕ್ಕಿಳಿಯಿತು. ಇವೆಲ್ಲ ಅವಾಂತರಗಳಲ್ಲಿ ಟ್ರೂಮನ್ನರ ಪಾತ್ರ ಉದಾತ್ತವಾಗಿತ್ತೆಂದಾಗಲಿ, ಅವರ ಮುತ್ಸದ್ದಿತನವೂ ವ್ಯಕ್ತಿತ್ವದ ವರ್ಚಸ್ಸೂ ಅಪೇಕ್ಷಿತ ಘನತೆಯನ್ನು ಪ್ರದರ್ಶಿಸಿದವೆಂದಾಗಲಿ ಹೇಳಬರುವದಿಲ್ಲ. ರೂಜವೆಲ್ಟರು ಬದುಕಿದ್ದರೆ ಶಾಂತಿ ಇಷ್ಟು ಬೇಗನೆ ಜಗತ್ತಿನ ಕೈಯಿಂದ ಸುಣಚಿಕೊಂಡು



ಹೆನ್ರಿ ವಾಲೇಸ್ .. ಸೋತ ಎದುರಾಳಿ

ಹೋಗುತ್ತಿರಲಿಲ್ಲವೆಂದು ಅನೇಕರು ಇಂದಿಗೂ ನಂಬಿದ್ದಾರೆ. ಇದರ ಸಾರಾಸಾರತೆಯನು ಪರೀಕ್ಷಿಸುವ ಹಾದಿ ಇಂದು ಉಳಿದಿಲ್ಲ. ಟ್ರೂಮನ್ನರ ನಾಯಕತ್ವದಲ್ಲಿ ರೂಜವೆಲ್ಟರ ಹಲವಾರು ನಂಬಿಗೆಯ ಸಹಯೋಗಿಗಳು— ಹೆನ್ರಿ ವಾಲೇಸರು ಅವರಲ್ಲಿ ಒಬ್ಬರು ಮಾತ್ರ— ಹಿಂಬದಿಗೆ ತಳ್ಳಲ್ಪಟ್ಟದ್ದೂ ರೂಜವೆಲ್ಟರ ಉಜ್ವಲ ಆರ್ಥಿಕ ಸಾಮಾಜಿಕ ಸುಧಾರಣಾವಾದದ ಮೇಲೆ ತಣ್ಣೀರು ಎರಚಲ್ಪಟ್ಟದ್ದೂ ಸುಳ್ಳಲ್ಲ. ಅಧಿಕಾರ ಲಾಲಸೆಯ ರಾಜಕಾರಣದಲ್ಲಿ ಅಮೇರಿಕೆ ಗಂಟಲಾಳಕ್ಕೆ ಇಳಿದುದು ಮತ್ತು ಸೇನಾ ನಾಯಕರ ಪ್ರಭಾವ ಅವರ ವಿದೇಶ ಧೋರಣೆಯನ್ನು ಉಗ್ರವಾಗಿ ಮಾಡಿದ್ದು ಎದ್ದು ಕಾಣಿಸಿವೆ. ಆದರೆ ಇದೆಲ್ಲದರಲ್ಲಿ ಅವರದು ಉದ್ದೇಶಪೂರ್ವಕವೆಷ್ಟು ದೌರ್ಬಲ್ಯ ಮೂಲಕವೆಷ್ಟು ಅಪರಾಧವೆಂದು ಹೇಳುವದು ಕಠಿಣ ಅಮೇರಿಕನ್ ಜನತೆಯ ಭಾವನೆಗಳೇ ಅಧಿಕಾರಲಾಲಸೆಯತ್ತ ಹೊರಳಿದ್ದವು. ರೂಜವೆಲ್ಟರ ಪ್ರಚಂಡ ವರ್ಚಸ್ಸಿಲ್ಲದ ಟ್ರೂಮನ್ನರು ಜನರನ್ನು ಆ ಒಲವಿನಿಂದ ಸೆಳೆದು ಬೇರೆಡೆಗೆ ಒಯ್ಯಲಾರದೆ ತಾವೇ ಆ ಪ್ರವಾಹದಲ್ಲಿ ತೇಲಿಕೊಂಡು ಹೋಗಿ ಜನಪ್ರಿಯತೆಯನ್ನು ಗಳಿಸಿದರೆಂದು ತೋರುತ್ತದೆ.

* *

## ಟ್ರೂಮನ್ನರ ಜೀವನ

ಹ್ಯಾರಿ ಟ್ರೂಮನ್ನರು ಬಡತನದಿಂದ ಮೇಲೇರಿಬಂದು ರಾಷ್ಟ್ರದ ಅತ್ಯಂತ ಗೌರವಸ್ಥಾನಕ್ಕೆ ಮುಟ್ಟಿದವರು ಮಿಸೂರಿ ಸಂಸ್ಥಾನದ ಲಾಮಾರ ಎಂಬಲ್ಲಿ ಅವರು ಒಕ್ಕಲಿಗ ಕುಟುಂಬವೊಂದರಲ್ಲಿ ೧೮೮೪ ರಲ್ಲಿ ಜನಿಸಿದರು. ಅವರು ಅಧ್ಯಕ್ಷತೆಗೇರಿದಾಗ ಅವರ ವೃದ್ಧ ಮಾತೆ, "ಆ ಹುಡುಗ ಈ ನಾಡಿನಲ್ಲೆಲ್ಲ ಅತಿ ಜಾಣ ರೈತ. ಅವನು ರಂಟೆ ಹೊಡೆದನೆಂದರೆ ಕೋಲಿಟ್ಟು ಗೆರೆಯೆಳೆದಂತೆ ನಟ್ಟಗೆ ಧಾರೆ ಬೀಳುತಿತ್ತು" ಎಂದು ಅಭಿಮಾನದಿಂದ ನುಡಿದರಂತೆ ಟ್ರೂಮನ್ನರು ಅತ್ತ ಹೊಲದಲ್ಲಿ ದುಡಿಯುತ್ತ ಇತ್ತ ಸಾಲೆಗೆ ಹೋಗುತ್ತ ಹದಿನೇಳರ ವಯಸ್ಸಿಗೆ ಸಾಲೆ ಮುಗಿಸಿದರು. ಆದರೆ ಅವರ ತಂದೆ ಅಷ್ಟು ಅನುಕೂಲವಂತರಿದ್ದಿಲ್ಲವಾಗಿ ಕಾಲೇಜಿನ ಹೋಗುವ ಆಸೆ ಫಲಿಸಲಿಲ್ಲ. ಸೈನ್ಯದಲ್ಲಿ ಸೇರಲು ಅವರು ಯತ್ನಿಸಿದರೆ ಕಣ್ಣು ದುರ್ಬಲವೆಂದು ಅವರ ಅರ್ಜಿಯನ್ನು ತಳ್ಳಿಹಾಕಲಾಯಿತು.

ಹೀಗಾಗಿ ಅವರು ಸಿಕ್ಕಿದ ಕೆಲಸ ಮಾಡುತ್ತ ನಗರಗಳನ್ನು ಆಶ್ರಯಿಸಬೇಕಾಯಿತು. ಕೆಲಕಾಲ ಕಾನ್ಸಾಸ್ ಪಟ್ಟಣದ "ಸ್ಟಾರ್" ಪತ್ರಿಕೆ ೮ ಳ ಪುಡಿಕೆಗಳನ್ನು ಕಟ್ಟುತ್ತಲೂ ಮತ್ತೆ ಕೆಲದಿನ ಕಟ್ಟಡಗಳ ಗುತ್ತಿಗೆಗಾರರಲ್ಲಿಯೂ ಬ್ಯಾಂಕುಗಳಲ್ಲಿಯೂ ಕಾರಕೂನರಾಗಿಯೂ ಅವರು ಕಾಲಯಾಪನೆ ಮಾಡಿದರು. ಕೆಲಸಮಯ ಅವರು ಪೇಪೆಯ ಕೆಲಸವನ್ನು ಕೂಡ ಮಾಡಿದ್ದರಂತೆ! ಆದರೆ ಮುಂದೆ ೧೯೦೬ರಲ್ಲಿ ಅವರು ತಮ್ಮೂರಿಗೆ ಮರಳಿ ತಮ್ಮ ತಂದೆಯೊಡನೆ ಸೇರಿಕೊಂಡು ಒಕ್ಕಲಿಗನಾಗಿಯೆ ದುಡಿಯ ತೊಡಗಿದರು. ೧೦ ವರ್ಷ ಕಾಲ ಹೀಗೆಯೆ ಸಾಗಿತು.

ಮೊದಲನೆ ಯುದ್ಧಕಾಲದಲ್ಲಿ ಅವರು (೧೯೧೭) ಸೈನ್ಯವನ್ನು ಸೇರಿ ಪ್ರತ್ಯಕ್ಷ ಯುದ್ಧದಲ್ಲಿ ಭಾಗವಹಿಸಿದರು. ತೋಫುಖಾನೆಯ 'ಕರ್ನಲ್" ಪದವಿಯ ತನಕ ಅವರು ಬಡತಿ ಪಡೆದರು.



ಥಾಮಸ್ ಡ್ಯೂಯಿ--ಎರಡನೆ ಬಾರಿಯೂ ಅಪಜಯ

ಯುದ್ಧಾಂತ್ಯದಲ್ಲಿ ಸ್ವದೇಶಕ್ಕೆ ಮರಳಿದ ಹ್ಯಾರಿ ಟ್ರೂಮನ್ನರು ಬೆಸ್ ವಾಲೇಸ್ ಎಂಬ ತಮ್ಮ ಹೈಸ್ಕೂಲ್ ಗೆಳತಿಯನ್ನು ಮದುವೆಯಾದರು.

ಆ ಮೇಲೆ ಟ್ರೂಮನರು ವ್ಯಾಪಾರದಲ್ಲಿ ಒಂದು ಕೈ ನೋಡಿದರು. ಆದರೆ ಯುದ್ಧಾನಂತರ ಬಂದ ಹಣಕಾಸಿನ ಬಿಕ್ಕಟ್ಟಿಗೆ ಅದು ಬಲಿಯಾಗಲು ೨೦೦೦೦ ಡಾಲರು ಸಾಲಮಾಡಿಕೊಂಡು ಅವರು ತಮ್ಮ ಅರಿವೆ ಅಂಗಡಿಯನ್ನು ಮುಚ್ಚಬೇಕಾಯಿತು. ಆಗ ದಿವಾಳಿಕಾಯದೆ ಜಾರಿಯಲ್ಲಿದ್ದು ಟ್ರೂಮನ್ನರು ತಮ್ಮ ಸಾಲ ತೀರಿಸಲು ಬದ್ಧರಾಗಿದ್ದಿಲ್ಲವಾದರೂ ಪ್ರತಿ ತಿಂಗಳ ತಮ್ಮ ದುಡಿಮೆಯಿಂದ ಹಣ ಉಳಿಸಿ ಅನೇಕ ವರ್ಷಗಳ ನಂತರ ಎಲ್ಲ ಸಾಲವನ್ನು ತೀರಿಸಿದ್ದರಿಂದ ಅವರ ಪ್ರಾಮಾಣಿಕತೆಗೆ ಜನ ಮೆಚ್ಚಿದರು.

* *

## ರಾಜಕೀಯ ಜೀವನ

ಟ್ರೂಮನ್ನರ ರಾಜಕೀಯ ಜೀವನ. ೧೯೨೨ ರಲ್ಲಿ ಅವರು ಜ್ಯಾಕ್ಸನ್ ಕೌಂಟಿ ನ್ಯಾಯಾಲಯದ ನ್ಯಾಯಾಧೀಶರಾಗಿ ಆರಿಸಲ್ಪಟ್ಟಾಗ ಪ್ರಾರಂಭವಾಯಿತು. ೧೯೨೪ ರಲ್ಲಿ ಚುನಾವಣೆಯಾದಾಗ ಅವರು ಸೋತು ತಮ್ಮ ಜೀವನದ ಏಕಮಾತ್ರ ರಾಜಕೀಯ ಪರಾಭವಕ್ಕೆ ಗುರಿಯಾದರೂ ೧೯೨೬ ರಲ್ಲಿ ತಿರುಗಿ ಆ ಸ್ಥಾನಕ್ಕೆ ಆರಿಸಿಬಂದದ್ದಲ್ಲದೆ ಮುಖ್ಯ ನ್ಯಾಯಾಧೀಶ ಪದವನ್ನೇರಿದರು ಈ ಸ್ಥಾನದಲ್ಲಿ ಅವರಿದ್ದಾಗ ೬೦ ಕೋಟಿ ಡಾಲರುಗಳಷ್ಟು ಸಾರ್ವಜನಿಕ ಹಣ ಅವರ ಕೈಯಲ್ಲಿ ವಿವಿಧ ಕಾರ್ಯಗಳಿಗಾಗಿ ಹಾದುಹೋಯಿತು. ಮುಂದೆ ಅವರು ಉಚ್ಚತರ ಸ್ಥಾನಗಳಿಗೆ ಸ್ಪರ್ಧಿಸಿದಾಗ ಈ ಅವರ ರಾಜಕೀಯ ವಿರೋಧಿಗಳು ಈ ಹಣದ ವಿನಿಯೋಗದಲ್ಲಿ ಏನಾದರೂ ದೋಷಗಳು ಸಿಗುವವ್ವೋ ಎಂದು ಬಹಳ ಮಗುಚಾಡಿದರು. ಆದರೆ ಟ್ರೂಮನ್ನರ ಪ್ರಾಮಾಣಿಕತೆಗೆ ಕಲಂಕ ಹಚ್ಚಲು ಅವರಿಗೆ ಅಲ್ಲಿ ಏನೊಂದೂ ಸಿಗಲಿಲ್ಲ.

೧೯೩೪ ರಲ್ಲಿ ಅವರು ಮೊದಲನೆ ಬಾರಿ ಅಮೇರಿಕೆಯ ಸಿನೇಟ (ಮೇಲ್ಮನೆ) ಸಭೆಯ ಸದಸ್ಯರಾಗಿ ಆರಿಸಿ ಬಂದರು. ಸಿನೇಟ ಸಭೆಯಲ್ಲಿ ಅವರು "ಅಡವೇ ಮಾಡುವ" ಗುಂಪಿಗೆ ಸೇರಿದವರಾಗಿದ್ದರು. ೧೯೪೧ರ ವರೆಗೂ ಅವರ ಹೆಸರು ಅಷ್ಟೇನೂ ಬೆಳಕಿಗೆ ಬಂದಿರಲಿಲ್ಲ. ಆದರೆ ಆ ವರ್ಷ, ರಾಷ್ಟ್ರೀಯ ಸಂರಕ್ಷಣ ಯೋಜನೆಯ ಹೆಸರಲ್ಲಾಗುತಿದ್ದ ಅಪಾರ ವೆಚ್ಚವನ್ನು ಕಟುವಾಗಿ ಟೀಕಿಸಿದ ಅವರ ನೇತೃತ್ವದಲ್ಲಿ ಆ ವೆಚ್ಚಗಳ ಪರಿಶೀಲನೆಗಾಗಿ ಒಂದು ಸಮಿತಿ ಏರ್ಪಡಿಸಲ್ಪಟ್ಟಿತು. ಅದರಲ್ಲಿ ಅವರು ತೋರಿಸಿದ ಕ್ಷಮತೆ, ನಿರ್ಭಯತೆಗಳ ಫಲವಾಗಿ ತಪ್ಪುಗಾರರು ಹಿಡಿಯಲ್ಪಟ್ಟರಲ್ಲದೆ ೧೦೦ ಕೋಟಿ ಡಾಲರುಗಳು ರಾಷ್ಟ್ರಕ್ಕೆ ಉಳಿದುದರಿಂದ ಅವರ ಕೀರ್ತಿ ನಾಲ್ಕೂ ಕಡೆ ಹಬ್ಬಿತು.

ಅಧ್ಯಕ್ಷ ರೂಜವೆಲ್ಟರು ನಾಲ್ಕನೆ ಬಾರಿ ಡೆಮೊಕ್ರೆಟಿಕ್ ಪಕ್ಷದ ಪರವಾಗಿ ೧೯೪೪ರಲ್ಲಿ ಅಧ್ಯಕ್ಷತೆಗೆ ಸ್ಪರ್ಧಿಸಲು ನಿರ್ಧರಿಸಿದಾಗ ವಯಸ್ಸಾಗಿದ್ದ ತಮ್ಮನ್ನು ಮೃತ್ಯುದೇವತೆ ನಡುವಿಗೇ ತರುಬಿದರೆ ಹೊಣೆಯರಿತು ನಡೆವ ಉಪಾಧ್ಯಕ್ಷನಿಗಾಗಿ ಹುಡುಕುತ್ತಿದ್ದಾಗ ಸಿನೇಟರ ಟ್ರೂಮನ್ನರ ಮೇಲೆ ಅವರ ದೃಷ್ಟಿ ಬಿತ್ತು. ಮೊದಲಿಂದಲೂ ಡೆಮೊಕ್ರೆಟಿಕ್ ಪಕ್ಷದ ಮತ್ತು ರೂಜವೆಲ್ಟ ಯೋಜನೆಗಳ ಬೆಂಬಲಿಗರಾಗಿದ್ದ ಇವರೇ ತಕ್ಕ ಹುರಿಯಾಳೆಂದು ಅವರಿಗನಿಸಿತು. ಆಗ ಯುದ್ಧಕಾಲವಾಗಿದ್ದು ಪ್ರತ್ಯಕ್ಷ ಯುದ್ಧದಲ್ಲಿ ಭಾಗವಹಿಸುವ ಅವಲವಿಕೆ ಟ್ರೂಮನ್ನರಿಗೆ ವಿಶೇಷವಾಗಿದ್ದರೂ ಪಕ್ಷದ ಒತ್ತಾಯದಿಂದ ಉಪಾಧ್ಯಕ್ಷ ಪದಕ್ಕೆ ಅವರು ಸ್ಪರ್ಧಿಸಿ ರೂಜವೆಲ್ಟರ ದ್ವಿತೀಯರಾಗಿ ಆರಿಸಿ ಬಂದರು.

* *

ಟ್ರೂಮನ್ನರ ವ್ಯಕ್ತಿತ್ವದಲ್ಲಿ ಅದ್ಭುತವಾದುದೇನೂ ಇಲ್ಲವಾದರೂ ಅವರು ಸರಳ ಜೀವಿಗಳು. ಅವರ ನಿಲುಮೆ ೫ ಅಡಿ ೧೦ ಅಂಗುಲ, ಭಾರ ೧೭೦ ಪೌಂಡು. ಸಂಗೀತದಲ್ಲಿ ಅವರಿಗೆ ವಿಶೇಷ ಅಭಿರುಚಿ. ಪಿಯಾನೋ ಬಾರಿಸುವದರಲ್ಲಿ ತಕ್ಕಮಟ್ಟಿಗೆ ಮರಿತವರವರ. ಧೂಮಪಾನದ ಚಟ ಅವರಿಗಿಲ್ಲ.

ಹೆಂಡತಿಯ ಮೇಲೆ ಟ್ರೂಮನ್ನರ ಆದರ, ಗೌರವ ಬಹಳ. ಅವರು ಸಿನೇಟರ ಆಗಿದ್ದಾಗ್ಗೆ ಹೆಂಡತಿಯೆ ಅವರಿಗೆ ಮುಖ್ಯ ಕಾರ್ಯದರ್ಶಿ. ಈಗಲೂ ಮಹತ್ವದ ಎಲ್ಲ ವಿಷಯಗಳಲ್ಲಿ ಹೆಂಡತಿಯ ಸಲಹೆ ಕೇಳದೆ ಅವರು ಮುಂದುವರಿಯುವದಿಲ್ಲ.

ಟ್ರೂಮನ ದಂಪತಿಗಳಿಗೆ ಮೇರಿ ಮಾರ್ಗರೇಟ ಎಂಬ ಒಬ್ಬಳೇ ಮಗಳು. ಅವಳ ವಯಸ್ಸು ೨೪. ಸಂಗೀತಗಾರಳಾಗಬೇಕೆಂದು ಅವಳ ಹಂಬಲ. ಅದಕ್ಕಾಗಿ ಮದುವೆಯ ಯೋಜನೆಯನ್ನು ಕೂಡ ಬಿಟ್ಟಿದ್ದಾಳೆ.

# ಜನಮತ

## ಉತ್ತರ ಕನ್ನಡ ಜಿಲ್ಲೆಯ ಅರಣ್ಯವೂ ಕಾರಖಾನೆಯೂ

ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಸಂಪತ್ತಿನ ಲಾಭಪಡೆಕೊಳ್ಳಲು ಸರಕಾರವು ಆಮಂತ್ರಿಸಿದೆ. ಈಗ ಸದ್ಯ ಕಾಗದ ಮತ್ತು ಬೆಂಕಿ ಪೆಟ್ಟಿಗೆಯ ಕಾರಖಾನೆಯನ್ನು ತೆಗೆಯಬಹುದೆಂದೂ ಯಾರಾದರೂ ಶ್ರೀಮಂತ ಉದ್ಯೋಗಸ್ಥರು ಮುಂದೆ ಬಂದರೆ ಅದಕ್ಕೆ ತಾವು ಸಮ್ಮತಿಸುವದಾಗಿಯೂ ಸರಕಾರವು ಸಾರಿದೆ. ನಿರುಪಯೋಗಿಯಾಗಿ ಬಿದ್ದು ಹಾಳಾಗುತ್ತಿರುವ ಬಿದಿರು ಮತ್ತು ಬೆಂಡು ಕಟ್ಟಿಗೆಗಳಿಗೆ ಜೀವಕಳೆ ಬರುವ ಸಂದರ್ಭವೊದಗಿದೆ. ಯಾವುದೂ ಕಾರಖಾನೆಯಿಲ್ಲದ, ಔದ್ಯೋಗಿಕ ಚಟುವಟಿಕೆಯಿಂದ ಅಲಿಪ್ತವಾದ ಉತ್ತರ ಕನ್ನಡಕ್ಕೆ ಅದನ್ನು ಕಾಣುವ ಯೋಗ ಬಂದಿರಬಹುದೆಂದು ಅನಿಸಹತ್ತಿದೆ. ಆದರೆ ಅದಕ್ಕೆ ಅವಶ್ಯವುಳ್ಳ ಕಾರಖಾನೆಯು ಬಂಡವಾಳದ ಸಂಪತ್ತನ್ನು ಹೇಗೆ ಸಿದ್ಧಗೊಳಿಸಬೇಕೆಂಬ ಚಿಂತೆಗೂ ಕಾರಣವಾಯಿತು. ಹೊರಗಿನ ಬಂಡವಾಳ ಹೊರಗಿನ ಕಾರಖಾನೆದಾರರ ಕಡೆಯೇ ಕಾರಖಾನೆಯು ಹೋದರೆ ನಮ್ಮ ಉತ್ತರ ಕನ್ನಡದ, ಅಂದರೆ ಕರ್ನಾಟಕದ ಪಾಲಿಗೆ ಯಾವ ಲಾಭವೂ ಇಲ್ಲದಂತಾಗಿ ಇದ್ದ ಅರಣ್ಯ ಸಂಪತ್ತನ್ನೂ ಕಳಕೊಂಡದ್ದೇ ಲಾಭವಾಗಬಹುದು. ಕರ್ನಾಟಕದೊಳಗಿನ ಈ ಅಮೂಲ್ಯ ಸಂಧಿಯನ್ನು ಕಳಕೊಂಡು ಕೂತರೆ ಕರ್ನಾಟಕವು ಮುಂದೆ ಪಶ್ಚಾತ್ತಾಪಪಡಬೇಕಾಗಬಹುದು.

ಮಹಾತ್ಮರ ಉಪದೇಶವನ್ನು ನಾವೀಗ ಸ್ಮರಿಸಿಕೊಳ್ಳಬೇಕಾಗಿದೆ. ೨ ಕೋಟಿ ರೂಪಾಯಿ ಬಂಡವಾಳದ ಸಂಸ್ಥೆಯು ಯಾವನೊಬ್ಬ ಕೋಟ್ಯಾಧೀಶ ಬಂಡವಾಳಶಾಹಿಯ ವಶವಾಗುವದಕ್ಕಿಂತ ವಿಕೇಂದ್ರೀಕರಣ ಪದ್ಧತಿಯಿಂದ ರಚಿತವಾದರೆ ಹಿತವಾಗಬಹುದು. ಅರಣ್ಯವು ರಾಷ್ಟ್ರೀಯ ಸಂಪತ್ತು; ಇದರ ಲಾಭವು ಪ್ರತಿಯೊಬ್ಬ ಮನುಷ್ಯನಿಗೆ ಹಂಚಿಕೆಯಾಗುವದು ಯೋಗ್ಯ. ಕರ್ನಾಟಕದ ಪ್ರತಿಯೊಂದು ಕುಟುಂಬವೂ ಈ ಕಾರಖಾನೆಯ ಪಾಲುದಾರರಾಗಲು ಬರುವಂತೆ ಸಣ್ಣ ಮೊತ್ತದ ಪಾಲನ್ನು ನಿರ್ಮಿಸಿ ಒಂದು ಸಂಸ್ಥೆಯನ್ನು ಸರಕಾರವೇ ಮುಂದಾಗಿ ಪ್ರಾರಂಭಿಸಬೇಕು. ಲೋಕ-ರಾಜ್ಯದ ಸರಕಾರವು ಈ ಹೊಣೆಯನ್ನು ಹೊರುವದರಲ್ಲಿ ತಪ್ಪೇನೂ ಅನಿಸಲಿಕ್ಕಿಲ್ಲ. ಐದು ರೂಪಾಯಿಯ ಒಂದು ಪಾಲಿನಿಂದ ಪ್ರಾರಂಭಿಸಿ ಸಾವಿರಾರು ಪಾಲು ಕೊಳ್ಳಲು ಬರುವಂತಿದ್ದರೆ ಅವರವರ ಶಕ್ತಿಯಂತೆ ಪ್ರತಿಯೊಬ್ಬರೂ ಪಾಲುದಾರರಾಗಲು ಬರುವದು.

ಮೈಸೂರು ಸರಕಾರವು ಕಬ್ಬಿಣ ಕಾರಖಾನೆ, ಗಂಧದ ಕಾರಖಾನೆ, ಸಾಬೂನು ಕಾರಖಾನೆ, ಸಕ್ಕರೆ ಕಾರಖಾನೆ, ಕಾಗದ ಕಾರಖಾನೆ ಮುಂತಾದ ಎಲ್ಲ ಬಗೆಯ ಉದ್ಯೋಗದಲ್ಲೂ ಮುಂದಾದಂತೆ ನಮ್ಮ ಸರಕಾರವೂ ಮುಂದಾಗುವದೇ ಹಿತ.

ಸಿದ್ದಾಪುರ ಐನಕೈ ವೆಂಕಟಸುಬ್ಬಯ್ಯ

## ಪ್ರಶ್ನೆಗೆ—ಉತ್ತರ

ಅಣ್ಣಾ ಶ್ರೀ ರಾಮಗೋಪಾಲರು ತಾ. ೮-೧೧-೪೮ರ 'ಕರ್ಮವೀರ'ದಲ್ಲಿ ಬರೆದ ಕಲಿಯದ ಹೆಮ್ಮಕ್ಕಳ ಸಮರ್ಥನೆ ಯೋಗ್ಯವಿದೆ. ನನ್ನದಾದರೂ ಅದೇ ಅಭಿಪ್ರಾಯವಿದೆ. ಮನೆಗೆಲಸ ಉತ್ಪಾದಕ ವೃತ್ತಿಯಲ್ಲವೆಂದು ತಿಳಿವ ಬುದ್ಧಿಯನ್ನು ಸ್ತ್ರೀ ಪುರುಷರಿಬ್ಬರೂ ಬಿಟ್ಟ ದಿನವೇ ಅವರ ಸರ್ವ ಸಮಸ್ಯೆಗಳೂ ಪರಿಹಾರವಾಗುವವು. ಆದರೆ ಈ ಬುದ್ಧಿ ಹೋಗಲು ಬಾಲ್ಯದಿಂದಲೂ ಗಂಡು ಮತ್ತು ಹೆಣ್ಣುಮಕ್ಕಳಿಬ್ಬರನ್ನೂ ಉಡಿಗೆ ತೊಡಿಗೆ, ವಿಹಾರ, ವಿನೋದ, ಆಚಾರ ವಿಚಾರಗಳಲ್ಲಿ ಸಮಾನತೆಯಿಂದ ಪ್ರಾಯ ಬರುವ ವರೆಗೆ ನಡೆಸಿಕೊಂಬ ಸಾಮಾಜಿಕ ವಾತಾವರಣ ಅಗತ್ಯ. ಇದನ್ನು ನಿರ್ಮಿಸಿಕೊಡುವುದು ಸಮಾಜದ ಹಿರಿಯರ ಕರ್ತವ್ಯ, ಶಿಕ್ಷಣಜ್ಞರ ಹೊಣೆ. ಇಬ್ಬರ ವಿಶಿಷ್ಟ ಜೀವನದ ವೃತ್ತಿಯ ಶಿಕ್ಷಣ ಪ್ರಾಯ ಬರುವಾಗ ಕಲಿಸಿದರೆ ಸರಿ. ಅಲ್ಲಿಯ ವರೆಗೆ ಸಾಮಾನ್ಯವಾದ ಮನೆಯ ಮನೆ ಹೊರಗಿನ, ಮೈಯ, ಮನದ, ಸಾಹಿತ್ಯಾದಿ ಕಲೆಗಳ ಸಾಮಾನ್ಯ ಶಿಕ್ಷಣ ಹುಡುಗ ಹುಡುಗಿಯರಿಗೆ ಸಹವಿದ್ಯಾಭ್ಯಾಸದ ಮೂಲಕ ಕೊಡಬೇಕು; ಅಲ್ಲದೆ ತಿಳಿದವರ ಒಡನಾಟ ಸಿಗುವಂತೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸೌಲಭ್ಯವಿರಬೇಕು. ಸ್ತ್ರೀ ಪುರುಷರನ್ನು ಹಿಂದು ಮುಂದೆನದೆ ಕೀಳು ಮೇಲೆಂದು, ಸುಂದರ ಅಸುಂದರವೆಂದು, ಸಬಲ ದುರ್ಬಲವೆಂದು ಹೊಗಳುವ ಮತ್ತು ತೆಗಳುವ ಗದ್ಯ ಪದ್ಯ ಮಾತುಕತೆಗಳಿಂದ ಮಕ್ಕಳನ್ನು, ತರುಣ ತರುಣಿಯರನ್ನು — ಅಷ್ಟೇ ಏಕೆ – ಎಲ್ಲರನ್ನು ದೂರವಿರಿಸುವ ವಾತಾವರಣ ಸಮಾಜದಲ್ಲಿ ನಿರ್ಮಿಸಲ್ಪಡಬೇಕು. ಇಷ್ಟಾದರೆ ಸ್ತ್ರೀ ಪುರುಷರ ಯಾವ ಸಂಬಂಧದಲ್ಲೂ ಅನೀತಿ, ಅನ್ಯಾಯ, ಅಸಂತೃಪ್ತಿ, ಅಸಹಕಾರ, ಮತ್ಸರ, ಮೋಹ ಉಂಟಾಗದು. ಈ ದರ್ಶನವನ್ನು ಶ್ರೀ ರಾಮಗೋಪಾಲ ಅಣ್ಣನಂಥವರು ಸಮಾಜದಲ್ಲಿ ಪ್ರಚುರಪಡಿಸಲು ಹೆಣಗಿ ಉಪಕರಿಸುವರೆಂದು ನಂಬುತ್ತೇನೆ. — ಸುಭದ್ರೆ

# ವಿವಿಧ ಪ್ರಪಂಚ

## 'ಬಾಲವೀರ'

ಚಿತ್ರಹಿಂಸೆಕೊಟ್ಟಾಗ ಚೇಳುಗಳು ತಮ್ಮನ್ನು ತಾವೇ ಕಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತವೆಂದು ಕೆಲವರ ನಂಬಿಗೆ. ಇದು ಸುಳ್ಳು. ಸುಳ್ಳಿಗಿಂತ ಹೆಚ್ಚಿನ ಸುಂದರ ವಸ್ತು ಸಾಮಾನ್ಯರಿಗೆ ಗೋಚರವಾಗುವದಿಲ್ಲವಾದುದರಿಂದ ಇಲ್ಲಿಯವರೆಗೂ ಈ ನಂಬಿಗೆ ಉಳಿದುಕೊಂಡು ಬಂದಿದೆ. ವಿಜ್ಞಾನಿಗಳಿದನ್ನು ಪರೀಕ್ಷಿಸಿ ನೋಡಿದ್ದಾರೆ. ಚೇಳಿಗೆ ವಿಸ್ಕಿ ಅಥವಾ ಬೆಂಕಿಯನ್ನು ತಾಗಿಸಿದರೆ ಅವು ಬಾಲವನ್ನು ಹಿಂದಕ್ಕೆ ಮಡಿಸಿಕೊಂಡು ಕುಕ್ಕಿದಂತೆ ಮಾಡುವುದು ಕಚ್ಚಿಕೊಳ್ಳುವುದಕ್ಕಲ್ಲ; ಮಿಡುಕಾಡಿ ವೇದನೆಯನ್ನು ಕಡಿಮೆ ಮಾಡಿಕೊಳ್ಳಲೆಂದು, ಒಂದು ವೇಳೆ ಅದು ತನ್ನನ್ನು ತನ್ನ ವಿಷಪುಚ್ಛದ ಕೊಂಡಿಯಿಂದ ಚುಚ್ಚಿಕೊಂಡರೂ ಅದಕ್ಕೆ ವಿಷದ ಪರಿಣಾಮ ಉಂಟಾಗದು. ಅದು ತನ್ನ ಜಾತಿಯ ಬಂಧುಗಳಿಗೆ ಕಚ್ಚಿದಗೂ ಅಷ್ಟೇ ನಿಷ್ಪರಿಣಾಮ!

ಮನುಷ್ಯರನ್ನು ಚೇಳು ಕಚ್ಚಿದಾಗ ವಿಷದಿಂದ ಬಾಯುವುದು, ಓಕರಿಕೆ ಮತ್ತು ಉಸಿರಾಟವನ್ನು ನಿಯಂತ್ರಿಸುವ ಬೆನ್ನಿನ ಮತ್ತು ಮಿದುಳಿನ ನರಮಂಡಲದ ನಿಶ್ಚೇತನತೆ ಇವು ಉಂಟಾಗುತ್ತವೆ. ಆದರ ವಿಷ ಮರಣಾಂತಿಕವಲ್ಲ. ಜೇನು ಹುಳುವಿನಷ್ಟೇ ಇರುತ್ತದೆ. ಆದರೆ ಅದರ ಪರಿಣಾಮ ಹೆಚ್ಚಾದರೆ ದುರ್ಬಲರು ಮರಣಕ್ಕೆ ಗುರಿಯಾಗಬಹುದು. ಅಷ್ಟೆ. 'ಬಾಲವೀರ'ನ ಪ್ರತಾಪ ಜನರು ತಿಳಿದುಕೊಂಡಷ್ಟಿಲ್ಲ. ಅನೇಕಸಲ ಚೇಳಿಂದ ಕಚ್ಚಿಸಿಕೊಂಡ ಕೆಲವರಿಗೆ ಏನೂ ಆಗಿಲ್ಲ. ಅವರು ಕಡೆಗೆ ವಿಷಪ್ರತಿರೋಧಕರಾಗುತ್ತಾರೆ.

## ಔದಾರ್ಯದ ಅಂದ

ಜುಬ್ಬಾಕಿನ ದೊರೆಯಾದ ರಾಜಾ ರಾಜಾ ದಿಗ್ವಿಜಯ ಚಂದರು ದಿಲ್ಲಿಯ ಸರಕಾರೀ ಕಚೇರಿಯ ವಾಣಿಜ್ಯ ಮಂತ್ರಿ ಶಾಖೆಯಲ್ಲಿ ನಿರ್ಯಾತದ ಮುಖ್ಯ ನಿಯಂತ್ರನೆನಿಸಿ ಕೆಲಸಕ್ಕೆ ಸೇರಿದರು. ಅವರು ಪ್ರತಿಫಲವೇನನ್ನೂ ಪಡೆಯದೆ ಜನಸೇವೆ ಮಾಡುವ ತಮ್ಮ ಇಚ್ಛೆಯನ್ನು ಸರಕಾರಕ್ಕೆ ತಿಳಿಸಿದರು. ಆದರೆ ಸರಕಾರೀ ಕಾಯದೆಯಂತೆ ಪ್ರತಿಯೊಬ್ಬ ನೌಕರನೂ ಸಂಬಳ ತೆಗೆದುಕೊಳ್ಳಲೇಬೇಕಾಗಿದೆ ಎಂಬ ಅಂಶವನ್ನು ಸರಕಾರ ತಿಳಿಸಿದೊಡನೆ ತಿಂಗಳಿಗೆ ಇಡೀ ಒಂದು ರೂಪಾಯಿಯನ್ನು ಸಂಬಳವನ್ನಾಗಿ ತೆಗೆದುಕೊಳ್ಳಲು ಒಪ್ಪಿದರು. ಅವರ ಸಂಸ್ಥಾನ ಸಿಮ್ಲಾದ ಹತ್ತಿರ ಇದೆ. ಅವರ ಸರಕಾರದ ವಾರ್ಷಿಕ ಉತ್ಪನ್ನ ೨೪ ಲಕ್ಷ ರೂಪಾಯಿಗಳು. ಈ ರಾಜರ ಉದಾರತೆ ಅಸದೃಶವಾದುದು. ಈ ಆತ್ಮ ಸೌಂದರ್ಯ ಎಷ್ಟು ಜನರಿಗಿದೆ?

ಕೆನಡದ ಅತಿ ಚಿಕ್ಕ ವಾಹನ. ಇದರ ಹೆಸರು “ವಿನ್‌ಸ್ಟನ್ ಚರ್ಚಿಲ್” ಜಗತ್ತಿನಲ್ಲಿ ಅತಿ ಚಿಕ್ಕದಾದ ರೇಲ್ವೆ ಮಾರ್ಗದಲ್ಲಿ ಇದು ತಿರುಗಬಲ್ಲದು

## ಹಿಂದೀ ಕಲಾಪ್ರದರ್ಶನ

ಅಖಿಲ ಭಾರತ ಲಲಿತ ಕಲೆ ಮತ್ತು ಕುಶಲ ಕಲೆಗಳ ಸಂಘವು ಅಮೇರಿಕ ಕೆನಡ, ಆಸ್ಟ್ರೇಲಿಯ, ಬ್ರಿಟನ್, ಫ್ರಾನ್ಸ್, ರಶಿಯ ಮತ್ತು ಇತರ ಐರೋಪ್ಯ ದೇಶಗಳಲ್ಲಿ ಹಿಂದೀ ಕಲೆಯ ಪ್ರದರ್ಶನದ ಒಂದು ಮಾಲೆಯನ್ನೇ ಸುರು ಮಾಡಬೇಕೆಂದಿರುವರು.

ಈ ಸಂಘವೀಗ ಕೆನಬೆರಾ ಕಲಾ ಸಮಿತಿಯೊಡನೆ ಸಂಧಾನ ನಡೆಸುತ್ತಿದೆ. ಒಪ್ಪಂದವಾದರೆ ಮುಂದಿನ ವರ್ಷದ ಮೊದಲ ಭಾಗದಲ್ಲಿ ಆಸ್ಟ್ರೇಲಿಯದಲ್ಲೊಂದು ಪ್ರದರ್ಶನ ನಡೆಯಬಹುದು.

## ಆಟಂ ಹೊಟೇಲು!

ಬ್ರಿಟನ್ನಿನ ಬರ್ಕ್‌ಶೈರಿನ ಆಟಂ ನಿಲ್ದಾಣದಲ್ಲಿ ೩ ಕೋಟಿ ರೂಪಾಯಿ ವೆಚ್ಚದಿಂದ “ಆಟಂ ಹೊಟೇಲ್”ನ್ನು ಕಟ್ಟಲಾಗಿದೆ. ಅಣುಶಕ್ತಿ ಸಂಶೋಧನವ ನಡೆಸಲು ನಿಯುಕ್ತರಾದ ೩೬ ಜನ ಸ್ತ್ರೀ ಪುರುಷರಿಗೆಂದು ಇದನ್ನು ವಿಶೇಷವಾಗಿ ಕಟ್ಟಿಸಿ ಕೊಡಲಾಗಿದೆ.

ಶುದ್ಧ ರೇಡಿಯಮ್ಮಿಗಿಂತ ಹೆಚ್ಚು ಅಪಾಯಕರವಾದ ರಾಸಾಯನಿಕ ದ್ರವ್ಯಗಳನ್ನು ಬಳಸುವ ಆ ಕೆಲಸಗಾರರ ಆರೋಗ್ಯವನ್ನು ಕಾಪಾಡಲು ಈ ಸಂಶೋಧನಾಲಯದಲ್ಲಿ ವಿಶೇಷ ವ್ಯವಸ್ಥೆಯಿದೆ. ಅಲ್ಲಿ ಅವರಿಗಾಗಿ ೧೨ “Hot suits, ಅಗ್ನಿ ಕವಚ”ಗಳನ್ನು ತಯಾರಿಸಿ ಇಡಲಾಗಿದೆ. ಒಂದು ದೊಡ್ಡದಾದ ಸಮಶೀತೋಷ್ಣ ಯಂತ್ರವು ರೇಡಿಯೋ-ಕ್ರಿಯಾತ್ಮಕ ಧೂಳನ್ನು ಹೀರಿ ತೆಗೆಯುತ್ತದೆ. ಗ್ಯಾಮಾಕಿರಣಗಳಿಂದ ರಕ್ಷಣೆ ಪಡೆಯಲು ಬಲವಾದ ಸೀಸದ ಗೋಡೆಗಳಿವೆ. ಈ ಅಣುಶಕ್ತಿ ಸಂಶೋಧನಾಲಯದ ಪ್ರಯೋಗಗಳನ್ನು ಯಾವಾಗಲೂ ಎರಡು ಅಂಗುಲ ದಪ್ಪದ ಸೀಸದ ಗೋಡೆಗಳ ಹಿಂದೆಯೇ ನಡೆಸಲಾಗುತ್ತದೆ.

ಹಿಂಸಾಕರವಾದ ಮತ್ತು ಭಯಂಕರ ರೇಡಿಯೋ ಕ್ರಿಯೆಯ ದ್ರವ್ಯಗಳನ್ನು ಪ್ರಯೋಗ ಪಾತ್ರದಲ್ಲಿ ಪ್ರಯೋಗ ಪಾತ್ರದಲ್ಲಿ ಕರಗಿಸುಟ್ಟಿದ್ದನ್ನು ದೂರದಿಂದ ಕನ್ನಡಿ ಮತ್ತು ದುರ್ಬಿನ್ನುಗಳ ಮೂಲಕ ನೋಡುವ ಅನುಕೂಲಗಳನ್ನು ಕಲ್ಪಿಸಲಾಗಿದೆ.

ಪ್ರಯೋಗಪಾತ್ರಗಳನ್ನು ಮನುಷ್ಯರ ಕೈಗಳು ಮುಟ್ಟುವುದಿಲ್ಲ. ಅವನ್ನು ಯಾಂತ್ರಿಕ ಸಾಧನಗಳ ಮೂಲಕ ತೆಗೆದು ಇಟ್ಟು ಮಾಡಲಾಗುತ್ತದೆ ಕೆಲಸಗಾರರು ಅಪಾಯಕರ ಕಿರಣಗಳಿಂದ ರಕ್ಷಿಸಿಕೊಳ್ಳಲು ಅಗ್ನಿಕವಚನಗಳನ್ನು ಹಾಕಿಕೊಂಡಿರುತ್ತಾರೆ. ಆಟಂ ಹೋಟೇಲಿನಿಂದ ೫೦ ಗಜ ದೂರದಲ್ಲಿ ಯುರೇನಿಯಂ ಕರಗಿಸುವ ಪೆಟ್ರೋಲೆಯಿದೆ. ಒಂದು ಹೆಮ್ಮನೆಯ ೨ ಪಟ್ಟು ಗಾತ್ರದ ಯುರೇನಿಯಂ ಗ್ರಾಫೈಟ್ ಮತ್ತು ಕಾಂಕ್ರೀಟುಗಳ ಮುದ್ದೆಯನ್ನು ಅದರಲ್ಲಿ ಕರಗಿಸಲಾಗುತ್ತದೆ. ಒಂದು ಅಣುಬಾಂಬನ್ನು ತಯಾರಿಸಲು ಆ ಪೆಟ್ರೋಲೆ ೧೦ ವರ್ಷಗಳವರೆಗೆ ಪ್ಲುಟೋನಿಯಮ್ಮನ್ನು ಕರಗಿಸಬೇಕಂತೆ! ಅಣುಶಕ್ತಿಯನ್ನು ಔದ್ಯಮಿಕ ಉಪಯೋಗಕ್ಕೆ ಬಳಸುವ ಹಲವಾರು ವಿಧಾನಗಳನ್ನೂ ಇಲ್ಲಿ ಪ್ರಯೋಗದಿಂದ ಕಂಡುಹಿಡಿಯುವ ಪ್ರಯತ್ನ ನಡೆದಿದೆ.

## ಚರ್ಮರೋಗ

ಚರ್ಮರೋಗಗಳಲ್ಲಿ ಕಜ್ಜಿ ಮುಂತಾದ ತುರಿ, ಉರಿ, ಕೀವಿರುವ ಬೊಕ್ಕೆಗಳು ಸಾಮಾನ್ಯವಾದವು. ಇವಕ್ಕೆ ದೇಹದ ಒಳಗಿನ ನರ, ಮಾಂಸ, ರಕ್ತಾದಿಗಳ ದೋಷಗಳು ಕಾರಣ. ಆದುದರಿಂದ ಸಮೂಲ ನಾಶಕ್ಕೆ ಒಡಲಿಗೇ ಔಷಧ ತೆಗೆದುಕೊಳ್ಳಬೇಕಾಗುತ್ತದೆ. ಅದರಲ್ಲೂ ರಕ್ತಶುದ್ಧಿಗೆ ತಕ್ಕ ಉಪಾಯವನ್ನು ಕೈಕೊಳ್ಳಬೇಕು. ಇನ್ನು ಸಾಮಾನ್ಯವಾಗಿ ಚರ್ಮನೈರ್ಮಲ್ಯ ಕಡಿಮೆಯಾಗಿ ಉಂಟಾಗುವ ಚಿಲ್ಲರೆ ಕಜ್ಜಿ ಬೊಕ್ಕೆ ಮುಂತಾದವಕ್ಕೆ ಹೊರಗಣ ಲೇಪಗಳು ಸಾಕಾಗುತ್ತವೆ.

ಬೊಕ್ಕೆ ಅಥವಾ ಗುಳ್ಳೆಗಳಲ್ಲಿ ೧೦ ಬಗೆಗಳಿವೆ. ನಡುವೆ ಎತ್ತರವಿದ್ದು ಮುಚ್ಚಳದ ಆಕೃತಿ ತಳೆದ ಬೊಕ್ಕೆಗಳಿಗೆ ಶರಾವಿಕೆಯನ್ನುತ್ತಾರೆ. ಬಿಳಿಯ ಸಾಸಿವೆಯಂತಿರುವವುಗಳಿಗೆ ಕಚ್ಛಪಿಕೆ ಎಂದೂ ಉರಿಯಿದ್ದು ಆನೆಯ ಬೆನ್ನಿನಂತೆ ತೋರುವವಕ್ಕೆ ಕೂರ್ಮಿಕೆಯೆಂದೂ ಅವುಗಳ ಮೇಲೆ ಮಾಂಸದ ಪೊರೆಯ ಜಾಳಿಗೆಯಿದ್ದರೆ ಜಾಲಿನಿಯೆಂದೂ ಹೇಳುತ್ತಾರೆ. ದೊಡ್ಡ ನೀಲವರ್ಣದ ಗುಳ್ಳೆಗಳು ವಿನತೆಗಳು, ಗುಳ್ಳೆಗಳ ಗುಂಪುಗಳು ಪುತ್ರಿಕೆಗಳೆನಿಸುವುವು, ಚಿನ್ನಂಗಿಯ ಆಕಾರದವು ಮಸೂರಿಕೆಗಳು. ಬಿಳಿಯ ದೊಡ್ಡ ಗುಳ್ಳೆಗಳು ಅಲಜಿಗಳು, ಅಂಡಾಕಾರದವು ವಿದಾರಿಗಳು, ಕೀವಿರುವವು ವಿದ್ರಧಿಕೆಗಳು.

ಸಾಮಾನ್ಯ ಚರ್ಮನೈರ್ಮಲ್ಯವನ್ನು ಕಾದುಕೊಳ್ಳಲು ಈಗಿನವರು ಜಾಹಿರಾತಿಗೆ ಮರುಳಾಗಿ ಬಳಸುವ ಸಾಬೂನುಗಳು ಚರ್ಮಕಾಂತಿ ನಾಶಕಗಳೆನಿಸುತ್ತವೆ ಅದಕ್ಕೆ ಹೆಸರು ಹಿಟ್ಟನ್ನು ಆಯುರ್ವೇದದವರು ಸೂಚಿಸಿದ್ದಾರೆ. ಚರ್ಮದ ಕಾಠಿಣ್ಯ, ಉರಿ, ತುರಿ, ಬೆವರು ಕೊಳೆಯ ನಿವಾರಣ ಇವಕ್ಕೆ ಅರಸಿನ ಬೆರಸಿದ ಕೊಬ್ಬರಿಯ ಎಣ್ಣೆಯನ್ನು ಹಚ್ಚಿಕೊಂಡು ಅಭ್ಯಂಜನ ಮಾಡುವುದು ಸರ್ವೋತ್ತಮ. ಅರಸಿನ ಕೃಮಿನಾಶಕವೂ ಲೋಮನಾಶಕವೂ ಚರ್ಮಕಾಂತಿಪ್ರದವೂ ಆಗಿದೆ. ಮುಖದಲ್ಲಿ ಏಳುವ ನಾನಾ ವಿಧದ ಚಿಲ್ಲರೆ ಬೊಕ್ಕೆಗಳಿಗೂ, ಮಚ್ಚೆ ಮೊಡವೆ ಮುಂತಾದವುಗಳಿಗೂ ಅದು ಪ್ರತೀಕಾರವಾಗುವುದರಿಂದ ಅದರ ಬಳಕೆ ಹೆಂಗಸರಿಗಿಂತ ಗಂಡಸರಿಗೆ ಇನ್ನಷ್ಟು ಅವಶ್ಯಕ. ಪರಂಪರಾಗತ ಅಜ್ಞಾನದಿಂದ ಅದರ ಬಳಕೆ ಸ್ತ್ರೀಯರಲ್ಲಿ ಮಾತ್ರ ಉಳಿದಿತ್ತು. ಅವರೂ ಈಗೀಗ ಪಟ್ಟಣಗ ನಾಗರಿಕತೆಯಿಂದ ಪ್ಲೋಡಿಗೆ ಶರಣುಹೋಗುತ್ತಿರುವದು ಹಾನಿಕರ. ಸಾಬೂನವನ್ನು ಬಳಸುವವರು ಗಂಧದೆಣ್ಣೆಯದೊಂದನ್ನು ಮಿತವಾಗಿ ಬಳಸಿದರೆ ಅಷ್ಟೇನೂ ಹಾನಿಕರವಲ್ಲ. ಉಳಿದವು ತಾತ್ಕಾಲಿಕ ಸತ್ಪರಿಣಾಮಿಗಳೆನಿಸಿ ಕಾಲಾಂತರದಲ್ಲಿ ದುಷ್ಪರಿಣಾಮವನ್ನುಂಟುಮಾಡತಕ್ಕವು

ಇದೇ ಮೇರೆಗೆ ಕಣ್ಣಿಗೆ ಕಾಡಿಗೆ ಹಚ್ಚುವ ಅಭ್ಯಾಸವನ್ನಾದರೂ ಸರ್ವರೂ ಕಲಿಯಬೇಕು ಆದರಿಂದ ಯುದ್ಧಾತದ್ವಾ ಧನವ್ಯಯಮಾಡಿ ಕನ್ನಡಕಗಳನ್ನು ಕೊಂಡು ಕಷ್ಟನಷ್ಟಗಳಿಗೆ ಗುರಿಯಾಗುವುದು ತಪ್ಪುತ್ತದೆ. ಕಾಡಿಗೆಯೊಂದು ಉತ್ತಮ ಕ್ರಿಮಿನಾಶಕ ಔಷಧ ಮತ್ತು ಅಲಂಕರಣದ್ರವ್ಯ.

# ವ್ಯಾಪಾರ ಪ್ರಪಂಚ

## ಮುಂಬಯಿ ಶೇರ ಪೇಟಿ

ತಾ. ೧೧

ಮುಂಬಯಿ ಶೇರ ಪೇಟೆಯಲ್ಲಿ ವ್ಯಾಪಾರ ಬಹಳ ಮಂದಗತಿಯಿಂದ ಸಾಗಿದೆ. ಡಿವಿಡೆಂಡ್ ನಿಯಂತ್ರಣ, ಉತ್ಪನ್ನ ಕರದ ಭಯ, ಕೂಲಿಕಾರರ ಹೆಚ್ಚುತ್ತಿರುವ ಬೇಡಿಕೆಗಳೇ ಮೊದಲಾದವುಗಳಿಂದ ಕಂಪನಿಗಳ ಲಾಭ ಸಂಪಾದನಾ ಸಾಮರ್ಥ್ಯ ಕುಗ್ಗುವದೆಂಬ ನಂಬಿಕೆಯಿಂದ ಬೆಲೆಗಳು ಏರುವದಿಲ್ಲ ಏರಿದರೂ ಅಲ್ಪ ಸ್ವಲ್ಪ ಮಾತ್ರ. ಇಂದಿನ ಕೊನೆಯ ಬೆಲೆಗಳು ಇಂತಿದ್ದವು.

### ಜವಳಿ

| | |
|---|---|
| ಕೋಹಿನುರು | ೩೮೦-೦-೦ |
| ಮುಂಬಯಿ ಡಾಯಿಂಗ್ | ೧೦೨೦-೪-೦ |
| ಗೋಕಾಕ | ೩೮೩-೦-೦ |
| ಸ್ವದೇಶಿ | ೫೯೦-೦-೦ |
| ಸೆಂಚುರಿ | ೫೩೦-೦-೦ |
| ಸಿಂಪ್ಲೆಕ್ಸ | ೧೭೬-೦-೦ |
| ಬೇಲಾಪುರ ಸಕ್ಕರೆ | ೩೪೭-೦-೦ |
| ಸಿಂಧ್ಯ ಸ್ಟೀಮ | ೨೧-೧೦-೬ |
| ಅಸೊ. ಸಿಮೆಂಟ್ಸ | ೧೩೦-೦-೦ |
| ಟಾಟಾ ಸ್ಟೀಲ ಡೆಫರ್ಡ | ೧೫೩೭-೪-೦ |
| ಸೆಂಟ್ರಲ ಬ್ಯಾಂಕ್ | ೮೨-೪-೦ |
| ಇಂಪೀರಿಯಲ್ ಬ್ಯಾಂಕ ಫೂರ್ಣ | ೧೯೪೭-೮-೦ |
| ರಿಝರ್ವ ,, | ೧೧೪-೧೦-೦ |

### ಚಿನ್ನ--ಬೆಳ್ಳಿ

ಅಮೇರಿಕೆಯಿಂದ ಚಿನ್ನ ತರಿಸಿ ಹಿಂದುಸ್ಥಾನ ಪೇಟೆಯನ್ನು ಹಿಡಿತಕ್ಕೆ ತರುವ ವಿಚಾರದಲ್ಲಿ ಸರಕಾರ ಇದೆಯೆಂಬ ಸಂಶಯದಿಂದ ಪೇಟಿ ಸ್ವಲ್ಪ ಅಳುಕುತ್ತಿದೆ. ದರಗಳು ಇಳಿಮುಖವಾಗಿವೆ.

| | |
|---|---|
| ತಯಾರಿ ಚಿನ್ನ | ೧೧೪-೪-೦ |
| ವಾಯದಾ '' | ೧೧೨-೧೨-೦ |
| ಸಾವರಿನ | ೭೫-೪-೦ |
| ತಯಾರಿ ಬೆಳ್ಳಿ | ೧೭೬-೨-೦ |
| ವಾಯದಾ ,, | ೧೬೭-೪-೦ |

### ಅರಳೆ

ಅರಳೆ ಸ್ವಲ್ಪ ಸ್ವಲ್ಪ ಪೇಟೆಗೆ ಬರುತ್ತಿದ್ದರೂ ತೇಜಿಗಳು ಕೊಂಡುಕೊಳ್ಳುತ್ತಿರುವದರಿಂದ ಪೇಟೆಯಲ್ಲಿ ಇಳಿತಾಯಕ್ಕೆ ಅವಕಾಶವಿಲ್ಲ. ಬೆಲೆಗಳು ಕೆಲ ರೂಪಾಯಿಗಳ ಅಂತರದಲ್ಲಿ ಚಲಿಸುತ್ತಿವೆ.

ಇಂದಿನ ಬೆಲೆಗಳು ಹೀಗಿದ್ದವು.

| | |
|---|---|
| ಫೆಬ್ರುವರಿ | ೬೦೪-೧೨-೦ |
| ಮೇ | ೫೯೫-೦-೦ |
| ಜುಲೈ | ೬೦೦-೦-೦ |
| ಸೆಪ್ಟೆಂಬರ | ೬೦೦-೧೨-೦ |

### ಎಣ್ಣೆಕಾಳು

| | |
|---|---|
| ಶೇಂಗಾ | ೧೬೭-೮-೦ |
| ಅಗಸಿ | ೨೭-೮-೦ |
| ,, ಹೊಸ ಬೆಳೆ | ೨೭-೬-೦ |
| ಅಗಸಿ ಎಣ್ಣೆ | ೧೬-೬-೦ |

### ಶಿವಮೊಗ್ಗೆ ಅಡಿಕೆ

ತಾ. ೧೦

| | |
|---|---|
| ದೇಶಾವರೆ ನಂ. ೧ ಮಣ ೧ ಕ್ಕೆ | ೩೧-೩೨ |
| ,, ,, ೨ | ೨೬-೩೦ |
| ,, ,, ೩ | ೨೪-೨೬ |
| ರಾಜಾಅಲವು | ೨೫-೨೮ |
| ತೊರಸಾಲು | ೨೨-೨೫॥ |
| ಚೆಟ್ಟಿವಂತಿ | ೧೯-೨೦ |
| ಚೆಟ್ಟಿ | ೧೬-೧೮ |

### ಸಾಗರ

ತಾ. ೧೧

| | |
|---|---|
| ಗುಂಡು ಅಡಿಕೆ | ೨೮-೨೮। |
| ಚೆಟ್ಟಿ ,, | ೨೬॥-೨೬।।। |
| ರಾಶಿ ,, | ೨೭-೩೦ |
| ಚಿಕಣಿ ನಂ. ೧ | ೩೪-೩೫ |
| ,, ೨ | ೩೨-೩೨। |
| ಸಿಕಾಳಿ | ೩೦-೩೧ |

### ಸಾಂಗಲಿ

ತಾ. ೯

| | |
|---|---|
| ಅರಸಿಣ ಹೊಸ (ಹೇರು) | ೧೩೦-೧೩೪ |
| ಮೆಣಸಿನಕಾಯಿ ಹೊಸ ಹೇರು | ೭೫-೧೯೦ |
| ಬೆಲ್ಲ | ೫೫-೬೦ |
| ಶೇಂಗಾ ಖರಿದಿ | ೧೨೦ |

### ಹುಬ್ಬಳ್ಳಿ

ತಾ. ೧೧

| | |
|---|---|
| ಜ. ಹತ್ತಿ ನಗಕ್ಕೆ | ೪೧೫-೪೩೦ |
| ,, ಅರಳೆ ,, | ೨೬೦-೨೮೫ |
| ಹತ್ತಿಕಾಳು ರೂ.ಗೆ | ೭ ಪೌಂಡ |
| ಜೋಳ (ಬೀಲಕ್ಕೆ) | ೩೫-೩೯ |
| ಕೆಂಪು ,, ,, | ೯೨-೧೦೮ |
| ಬಿಳೆ ಗೋದಿ ಚೀಲ | ೮೦-೯೪ |
| ಸಣ್ಣ ಭತ್ತ ,, | ೪೪-೪೫ |
| ದೊಡ್ಡ ,, ,, | ೪೦-೪೨ |
| ಕುಸುಬಿ ,, | ೩೧-೩೨ |
| ಶೇಂಗಾ (ಹಳೆ) ಹೇರು | ೪೫-೫೦ |
| ,, (ಹೊಸ) ,, | ೪೦-೪೪ |

## ಘಟನಾ ಸಮಿತಿಯಲ್ಲಿ ಪಂ. ಜವಾಹರಲಾಲರ ಭಾಷಣ
## ಜಗದೋದ್ಧಾರ ನಮ್ಮಿಂದೇ ಸಾಧ್ಯ

ಭಾರತದ ಮುಖ್ಯಮಂತ್ರಿಗಳಾದ ಪಂ. ಜವಾಹರಲಾಲರು ತಾ ೮ ರಂದು ಘಟನಾ ಸಮಿತಿಯಲ್ಲಿ ರಾಜ್ಯ ಘಟನೆಯ ಕರಡಿನ ಚರ್ಚೆಯ ಕಾಲಕ್ಕೆ ಭಾಷಣ ಮಾಡುತ್ತ, ಹಿಂದುಸ್ಥಾನ-ಕಾಮನವೆಲ್ತಗಳ ಸಂಬಂಧದ ಬಗ್ಗೆ ನಡೆದ ಲಂಡನದ ಚರ್ಚೆಯಲ್ಲಿ ನಾನು ಕೈಕಟ್ಟಿಸಿಕೊಂಡು ಬಂದಿಲ್ಲವಷ್ಟೇ ಅಲ್ಲ; ಈ ವಿಷಯವನ್ನು ಹಿಂದುಸ್ಥಾನ ಘಟನಾ ಸಮಿತಿಯು ಮಾತ್ರ ಕೊನೆಯದಾಗಿ ತೀರ್ಮಾನಿಸಬಲ್ಲದೆಂದು ಸ್ಪಷ್ಟಪಡಿಸಿ ಬಂದಿದ್ದೇನೆ ಎಂದು ನುಡಿದಾಗ ಸಭೆಯು ಹರ್ಷೋದ್ಗಾರಗಳನ್ನು ತೆಗೆದಿತು. ಅವರು ಇನ್ನೂ ಹೇಳಿದ್ದರ ಸಾರಾಂಶ ಹೀಗಿದೆ:-

"ನಾನು ನಮ್ಮ ಘಟನಾ ಸಮಿತಿಯ ಧ್ಯೇಯ ನಿರೂಪಣೆಯ ಗೊತ್ತುವಳಿಯನ್ನು ಕಾಮನ್‌ವೆಲ್ತ ಮಂತ್ರಿಗಳ ಗಮನಕ್ಕೆ ತಂದು ಕೊಟ್ಟೆ. ಘಟನಾ ಸಮಿತಿಯು ಸಾರ್ವಭೌಮ ಅಧಿಕಾರ ಉಳ್ಳದ್ದಾಗಿರುವದರಿಂದ ಇತರ ಗೊತ್ತುವಳಿಗಳನ್ನು ತಿದ್ದಬಲ್ಲ ಹಾಗೆಯೆ ಈ ಧ್ಯೇಯ ನಿರೂಪಣೆಯ ಗೊತ್ತುವಳಿಯನ್ನೂ ತಿದ್ದಬಲ್ಲದು. ಈ ಧ್ಯೇಯನಿರೂಪಣೆಗನುಸರಿಸಿ ಈಗ ನಮ್ಮ ರಾಜ್ಯಘಟನೆ ರಚಿತವಾಗುತ್ತದೆ. ಇತರ ರಾಷ್ಟ್ರಗಳೊಡನೆ ಭಾರತವು ಸ್ನೇಹದಿಂದ ಇರಬಯಸುತ್ತದೆ ಎಂಬಿವೇ ಮೊದಲಾದ ಅಂಶಗಳನ್ನೂ ಲಂಡನದಲ್ಲಿ ಹೇಳಿದ್ದೇನೆ.

### ಭಾಷಾನುಗುಣ ಪ್ರಾಂತರಚನೆ

"ಭಾಷಾನುಗುಣ ಪ್ರಾಂತರಚನೆಯ ಬಗ್ಗೆ ಒಂದೆರಡು ಮಾತು. ಹಿಂದೀಯರ ಆಶೆ-ಆಕಾಂಕ್ಷೆಗಳಿಗೆ ಅನುಗುಣವಾಗಿ ಅವರು ಸಾಂಸ್ಕೃತಿಕ ಮತ್ತು ಭೌಗೋಲಿಕ ಪರಿಸ್ಥಿತಿಗೆ ಒಪ್ಪುವಂತೆ ಈಗಿದ್ದ ಪ್ರಾಂತಗಳ ಪುನರ್ನಿರ್ಮಾಣ ಕಾರ್ಯವು ಆಗುವದು ಅನಿವಾರ್ಯವೆಂದು ನನಗೆ ಬಹಳ ದಿನಗಳಿಂದ ಅನಿಸುತ್ತಿದೆ. ನಾವು ಈ ತತ್ವವನ್ನು ಎಂದೊ ಒಪ್ಪಿಕೊಂಡಿದ್ದೇವೆ. ಆದರೆ ಪ್ರಾಂತರಚನೆಗಿಂತ ಇನ್ನೂ ಮಹತ್ತರವಾದ ಸಮಸ್ಯೆಗಳು ನಮ್ಮ ಎದುರಿಗಿವೆ. ಆದ್ದರಿಂದ ತರ್ಕದ ಹೋರಾಟಕ್ಕಿಂತ ಶಾಂತಚಿತ್ತದಿಂದ ಮತ್ತು ಶಾಂತವಾದ ವಾತಾವರಣದಲ್ಲಿ ಈ ವಿಷಯವನ್ನು ಸರಿಪಡಿಸಿಕೊಳ್ಳೋಣ. ಈ ಬಗ್ಗೆ ತುಂಬ ಉದ್ವೇಗ ಕಂಡು ಬರುತ್ತಿದೆ. ಇದಕ್ಕಾಗಿ ನನಗೆ ವ್ಯಸನವಾಗುವದು. ಈ ಮಾತಿನ ಬಗ್ಗೆ ಉದ್ವೇಗ ಬೇಡವೆಂದೂ ಅವಸರ ಬೇಡವೆಂದೂ ಈ ಸಭೆಯನ್ನು ಕೇಳಿಕೊಳ್ಳುತ್ತೇನೆ.

### ರಾಷ್ಟ್ರಭಾಷೆ

"ರಾಷ್ಟ್ರಭಾಷೆಯ ಬಗ್ಗೆ ಇಷ್ಟೇ ಹೇಳಬಹುದು. ಸ್ವತಂತ್ರ ರಾಷ್ಟ್ರವು ತನ್ನದಾದ ಭಾಷೆಯಲ್ಲಿಯೇ ವ್ಯವಹರಿಸಬೇಕೆಂಬುದು ಕ್ರಮಪ್ರಾಪ್ತವೇ. ನಾನೂ ನನ್ನ ಮಿತ್ರರೂ ಆಂಗ್ಲ ಭಾಷೆಯಲ್ಲಿ ಮಾತನಾಡಬೇಕಾದುದಕ್ಕೆ ನನಗೆ ವಿಷಾದವಾಗುತ್ತದೆ. ಈಗಿನ ಸ್ಥಿತಿಯು ಒಮ್ಮೆಗೇ ಬದಲಾಗಬೇಕೆಂದು ಹಟಹಿಡಿದು ರಾಜ್ಯಘಟನೆಯ ರಚನೆಗೆ ಅಡ್ಡಿ ಒಡ್ಡಬಾರದು. ನಾವು ಬಯಸುವದು ಒಕ್ಕಟ್ಟಿನಿಂದ ರಾಷ್ಟ್ರಭಾಷೆಯನ್ನು ಬಳಕೆಗೆ ತರಬಯಸಿದರೆ, ಅಲ್ಪಸಂಖ್ಯಾಕರ ವಿರೋಧ ಹೆಚ್ಚಾಗಿ ಪರಿಣಾಮವು ಅಪ್ರಿಯವಾದೀತು. ಆದ್ದರಿಂದ ಆಂಗ್ಲಭಾಷೆ ತಾನಾಗಿ ಕಣ್ಮರೆಯಾಗಿ ರಾಷ್ಟ್ರಭಾಷೆ ಬಳಕೆಗೆ ಬರಲು ತುಸು ಅವಕಾಶ ಕೊಡಬೇಕು.

### ಜಗದೋದ್ಧಾರ ನಮ್ಮಿಂದೇ ಸಾಧ್ಯ

"ಎರಡು ವರ್ಷಗಳ ಹಿಂದೆ ಈ ಸಭೆಯಲ್ಲಿ ಧ್ಯೇಯನಿರೂಪಣೆಯ ಗೊತ್ತುವಳಿಯನ್ನು ಮಂಡಿಸುವ ಸೌಭಾಗ್ಯ ನನ್ನ ಪಾಲಿಗೆ ಬಂದಿತ್ತು. ಆ ಗೊತ್ತುವಳಿಯೆಂದರೆ ಹಿಂದೀಯರ ಚೈತನ್ಯದ ಪ್ರತೀಕ. ಉಚ್ಚ ಆದರ್ಶವನ್ನು ತೋರಬಲ್ಲುದೇ ಒಳ್ಳೆಯ ರಾಜ್ಯಘಟನೆ. ಅಂತಹ ಆದರ್ಶವಿಲ್ಲದ ರಾಜ್ಯಘಟನೆಯು ತನ್ನ ಜನತೆಯನ್ನು ಅಧಃಪಾತಕ್ಕೇ ಒಯ್ಯುತ್ತದೆ. ಈ ಧ್ಯೇಯನಿರೂಪಣೆಯ ಗೊತ್ತುವಳಿ ಸ್ವೀಕೃತವಾದಂದಿನಿಂದ ನಡೆದ ಅನೇಕ ಚಿಕ್ಕಪುಟ್ಟ ವಿಷಯಗಳ ಚರ್ಚೆಯು ನಾಡನ್ನು ರೂಪಿಸಲು ನೆರವಾಗಿದೆ. ನಾನು ಇತ್ತೀಚೆ ವಿದೇಶಕ್ಕೆ ಹೋದಾಗ ನನ್ನ ನಾಡನ್ನು ದೂರದಿಂದ ನೋಡುವ ಸೌಕರ್ಯ ಒದಗಿತು. ದೂರದಿಂದ ನೋಡಿದಾಗ ಇಲ್ಲಿಯ ಕೆಲವು ವಿವರಗಳು ಕಾಣುವದೇ ಇಲ್ಲ. ಆದರೆ ಸಮಗ್ರಚಿತ್ರ ನೋಡಬೇಕಂದರೆ ದೂರ ಸರಿದೇ ನಿಲ್ಲಬೇಕು. ಸನಿಹದಲ್ಲಿ ವಿವರಗಳೇ ಹೆಚ್ಚಾಗಿ ಕಂಡು ಸಮಗ್ರತೆಯ ಕಲ್ಪನೆ ಮಸಕಾಗುತ್ತದೆ. ನಮ್ಮ ಈಗಿನ ಸಂಕ್ರಮಣಕಾಲದಲ್ಲಿ ಎಲ್ಲ ಸಮಸ್ಯೆಗಳ ಸಮಗ್ರತೆಯ ಕಲ್ಪನೆ ಅತ್ಯವಶ್ಯ. ಹೀಗೆ ದೂರದಿಂದ ನೋಡಿದಾಗ ಹಿಂದುಸ್ಥಾನವು ಪ್ರಶಾಂತ ಗಂಭೀರತೆಯಿಂದ ಹೊಳೆಗಿತು. ಜಗತ್ತೇ ಇಂದು ಸಂಕಟದಲ್ಲಿರುವದರಿಂದ ಲೋಕವೆಲ್ಲ ನಮ್ಮತ್ತ ಆಶಾಪೂರ್ಣ ದೃಷ್ಟಿಯಿಂದ ನೋಡುವದನ್ನು ಅರಿತುಬಂದೆ. ಜಗದೋದ್ಧಾರ ಕಾರ್ಯವು ಭಾರತದಿಂದಲೇ ಸಾಧ್ಯವೆಂದು ಸಕಲರ ನಿರೀಕ್ಷೆ. ಹಾಗೆಂದು ನನಗೂ ಅನಿಸುತ್ತದೆ. ವಿಶ್ವವು ನಡೆಸಿರುವ ದುರಂತ ನಾಟಕದಲ್ಲಿ ನಾವೆಲ್ಲರೂ ಪಾತ್ರಧಾರಿಗಳೇ ಎಂದು ತೋರುತ್ತಿದ್ದರೂ ಅನಿವಾರ್ಯವೆಂದು ತೋರುವ ಗಂಡಾಂತರಗಳು ಅನಿವಾರ್ಯವಲ್ಲ ಎಂದು ನನಗೆ ದೂರದಿಂದ ನೋಡಿದಾಗ ಪ್ರತೀತಿಯಾಗಿದೆ. ಜಗತ್ತನ್ನು ಗಂಡಾಂತರದಿಂದ ಪಾರುಮಾಡಬಯಸುವ ಸಜ್ಜನರು ಬೇಕಾದಷ್ಟಿದ್ದಾರೆ. ಆದ್ದರಿಂದ ಜಗದೋದ್ಧಾರದ ಕಾರ್ಯದಲ್ಲಿ ನಮಗೆ ಗೆಲವು ಕಟ್ಟಿಟ್ಟದ್ದೇ ಎಂದು ನನಗೆ ಆತ್ಮವಿಶ್ವಾಸವಿದೆ.

### ಹಿಂದುಸ್ಥಾನದ ಹೊಣೆಗಾರಿಕೆ

ಈ ಎರಡು ವರ್ಷಗಳಲ್ಲಿ ನಾವು [illegible] ಹೊಣೆಗಾರಿಕೆಯು ಹೆಚ್ಚಿ [illegible] ಇನ್ನು [illegible] ಹೊಣೆಗಾರಿಕೆ [illegible] ಪ್ರಪಂಚದ [illegible] ಭೌಗೋಲಿಕ, ಸಾಂಸ್ಕೃತಿಕ ಚರಿತ್ರೆ, [illegible] ಎಲ್ಲ ದೃಷ್ಟಿಯಿಂದಲೂ [illegible] ಹೊರೆಯನ್ನು ಹಿಂದುಸ್ಥಾನವು ಜಗತ್ತಿನಲ್ಲಿ [illegible] ವಹಿಸಬೇಕಾಗಿದೆ. [illegible] ನಮ್ಮ ಹೊಣೆಗಾರಿಕೆ ಇನ್ನೂ ಹೆಚ್ಚುತ್ತದೆ. ಈ ಅದ್ಭುತ ಹೊಣೆಗಾರಿಕೆಯು ಕಲ್ಪನೆ [illegible] ಗಲಿಲ್ಲ ನಾನು ಒಮ್ಮೊಮ್ಮೆ ಬೆಚ್ಚುತ್ತೇನೆ. ಆದರೆ ಭಾರತದ ಪ್ರತಿನಿಧಿಗಳಾಗಿ ಕುಳಿತ ನೀವೆಲ್ಲ ಈ ಹೊಣೆಗಾರಿಕೆಯನ್ನು ಮರೆಯಲಾದೀತು ಬೇರೆ ಹೇಳಬೇಕೆ? ಜಗತ್ತೇ [illegible] ದೃಷ್ಟಿಯಿಂದ ನಮ್ಮ ಕಡೆಗೆ ನೋಡುತ್ತಿದೆ. ಇದನ್ನೆಲ್ಲ ಅನುಲಕ್ಷಿಸಿಯೇ ನಮ್ಮ ರಾಜ್ಯಘಟನೆಯನ್ನು ರಚಿಸಬೇಕು.

### ಜೀವಂತ ರಾಷ್ಟ್ರದಲ್ಲಿ ಸಮಸ್ಯೆ ಇರತಕ್ಕವೇ

"ಹಿಂದುಸ್ಥಾನವು ಜೀವಂತ ರಾಷ್ಟ್ರ. ಜೀವಂತ ರಾಷ್ಟ್ರದಲ್ಲಿ ಸಮಸ್ಯೆಗಳು ಇರತಕ್ಕವೇ. ಅವನ್ನು ವಿಚಾರಿಸಿ ಬಿಡಿಸುವಲ್ಲಿಯೇ ರಾಷ್ಟ್ರದ ಹಿರಿಮೆಯಿದೆ. ಇಲ್ಲಿ ಕುಳಿತಿರುವ ನಾವು ಭವಿಷ್ಯನಿರ್ಮಾಪಕರು ಹೌದೊ ಅಲ್ಲವೊ ನನಗೆ ಗೊತ್ತಿಲ್ಲ. ಆದರೆ ನಮ್ಮ ದೇಶ ಮಾತ್ರ ಭವಿಷ್ಯ ನಿರ್ಮಾಪಕ ರಾಷ್ಟ್ರವೆಂಬಲ್ಲಿ ಸಂದೇಹವಿಲ್ಲ. ಅಂತಹ ದೇಶದ ಪ್ರತಿನಿಧಿಗಳು ನಾವಾದಕಾರಣ ನಮ್ಮ ದೃಷ್ಟಿ ವಿಶಾಲವಾಗಬೇಕು. ಅಂತಹ ವಿಶಾಲ ದೃಷ್ಟಿಯಿಂದಲೇ ನಮ್ಮ ಸಮಸ್ಯೆಗಳನ್ನು ಪರ್ಯಾಲೋಚಿಸಬೇಕು. ಚಿಕ್ಕಪುಟ್ಟ ವಾದಗಳಲ್ಲಿ ತೊಡಗುವದು ಇನ್ನು ಬೇಡ.

### ಅಲ್ಪ ಸಂಖ್ಯಾಕರ ಹಿತರಕ್ಷಣೆ

ಧ್ಯೇಯ ನಿರೂಪಣೆಯಲ್ಲಿ ಅಲ್ಪಸಂಖ್ಯಾಕರ ಹಿತ ರಕ್ಷಣೆಯ ಬಗ್ಗೆ ಹೇಳಿದೆ. ಅದನ್ನು ನಡೆಸಿಕೊಂಡು ಹೋಗುವದು ಬಹುಸಂಖ್ಯಾಕರ ಕೆಲಸ. ಇದನ್ನು ಸಾಧಿಸುವ ನೆವದಲ್ಲಿ ಹೊಸ ವಿಘ್ನಗಳನ್ನು ತಂದೊಡ್ಡಬಾರದು. ನಮ್ಮ ದೇಶದ ಜೀವನವು ವೈವಿಧ್ಯಪೂರ್ಣವಾಗಿದ್ದರೂ ಐಕ್ಯವೇ ಅದರ ಜೀವಾಳವಾಗಿದೆ. ಎಲ್ಲ ಅಲ್ಪಸಂಖ್ಯಾಕರಿಗೂ ಅಭಿವೃದ್ಧಿಗೆ ಸಾಕಷ್ಟು ಅವಕಾಶ ಕೊಡುತ್ತ ಹೋಗಬೇಕು. ರಾಜ್ಯಘಟನೆಯನ್ನು ರಚಿಸುವಾಗ ಈ ಎಲ್ಲ ಸೂಚನೆಗಳನ್ನೂ ಗಮನಿಸುವಿರೆಂದು ನಂಬಿದ್ದೇನೆ."

## ಮೊದಲು ಶಾಂತಿ, ಸುವ್ಯವಸ್ಥೆ

[illegible]

## ಲಂಡನ್ನಿನಲ್ಲಿ ಪಂ. ನೆಹರೂ



[illegible]

# ವಾರದ ಸಿಂಹಾವಲೋಕನ

### ಪರದೇಶಗಳಿಂದ ಹೆಚ್ಚಿನ ಅಕ್ಕಿ

[illegible]

### ಮೈಸೂರು ಕಾಂಗ್ರೆಸ್ಸಿನ ನಿರ್ಣಯ

[illegible]

### ಅಮೇರಿಕೆಯ ಅಧ್ಯಕ್ಷ ಚುನಾವಣೆ

[illegible]

# ದೇವಾಲಯ ಪ್ರವೇಶ

ಆಟ್ಟಕಡೆಗೆ ಇದೀಗ ಜಾತೀಯ ಗಲಭೆಗಳಿಂದ—ಅವುಗಳ ಪರಿಣಾಮದಿಂದ ನಾವಿನ್ನೂ ಕಷ್ಟಪಡುತ್ತಿದ್ದರೂ—ನಾವು ಪಾರಾಗಿದ್ದೇವೆಂದು ತೋರುತ್ತದೆ. ಸತ್ಯ ಪ್ರೇಮಗಳಿಂದ ಜಾತೀಯ ದ್ವೇಷ—ಉದ್ವೇಗಗಳನ್ನು ತಣಿಸಬೇಕೆಂದು ಹಟ ತೊಟ್ಟ ಆಧುನಿಕ ಯುಗದ ಶ್ರೇಷ್ಠತಮ ವ್ಯಕ್ತಿಯನ್ನು ನಾವು ಜಾತೀಯತೆಯ ವೇದಿಕೆಯಲ್ಲಿ ಬಲಿಗೊಟ್ಟಿದ್ದೇವೆ. ದುರ್ದೈವದಿಂದ ಜಾತೀಯ ಜಗಳವನ್ನು ಸಜೀವವಾಗಿಡುವದರಲ್ಲೆ ವಿಶೇಷ ಆಸ್ಥೆವಹಿಸಿದ ಆ ಇನ್ನೊಬ್ಬ ಮಹಾ ನಾಯಕನೂ ಜೀವನ ಯಾತ್ರೆಯನ್ನು ಮುಗಿಸಿದ್ದಾನೆ. ಇನ್ನಾದರೂ ಉಸ್ಸಪ್ಪಾ ಎಂದು ಸಮಾಧಾನದ ನಿಟ್ಟುಸಿರು ಬಿಡಬಹುದೆಂದು ನಾವು ಆಶಿಸಿದ್ದೆವು. ಆದರೆ ಸೈತಾನನಿಗೆ ಸಂತುಷ್ಟಿಯೆಲ್ಲಿ? ಕಾಡುವ ಒಂದೇ ಒಂದು ಸಂಧಿಯನ್ನು ಕೂಡ ಅವನು ಹುಸಿಯಾಗಗೊಡಲೊಲ್ಲನು. ಹರಿಜನ ಪ್ರಶ್ನೆಯಲ್ಲಿ ಅದೇ ಕಾಟದ ಭಯ ನಮ್ಮನ್ನು ಬೆದರಿಸುತಿದೆ.

ಹಿಂದುಗಳಲ್ಲಿ ಈ ಪ್ರಶ್ನೆ ತೋರಿಕೆಗೆ ಹರಿಜನ ದೇವಾಲಯ ಪ್ರವೇಶದ ಸಂಬಂಧದಲ್ಲಿ ಮತ್ತು ನಿಜವಾಗಿ ಮಹತ್ವಾಕಾಂಕ್ಷಿಗಳ ರಾಜಕಾರಣದ ಹೊಲಸು ಆಟದ ಅಂಗವಾಗಿ ಎದ್ದು ನಿಂತಿರುವದು ವಿಷಾದಕರ. ಬಡೋದಾ ಸಂಸ್ಥಾನದ ಕಾಲೋಲದಲ್ಲಿಯೂ ಅನೇಕ ರಜಪುತಾನ ಸಂಸ್ಥಾನಗಳಲ್ಲಿಯೂ ಈಚೆಗೆ ಕಾಶೇವಾಡದಲ್ಲಿಯೂ ಹರಿಜನರಿಗೆ ಒದಗಿದ ಆಪತ್ತುಗಳನ್ನು ನೋಡಿದರೆ ಸವರ್ಣ ಹಿಂದುಗಳ ಹೃದಯದಲ್ಲಿ ಹರಿಜನರ ಬಗೆಗೆ ಎಷ್ಟು ದ್ವೇಷವೂ ತಿರಸ್ಕಾರವೂ ಇನ್ನೂ ಜಾಗೃತವಾಗಿವೆಯೆಂದು ಊಹಿಸಬಹುದು. ಬಿಕಾನೇರದ ಘಟನೆಗಳು ಅದನ್ನು ಇನ್ನಷ್ಟು ಬೆಳಕಿಗೆ ತಂದಿವೆ. ಅಲ್ಲಿ ಕೆಲ ಕಾಂಗ್ರೆಸ್ಸಿಗರು ಹರಿಜನರ ಕೇರಿಯನ್ನು ಸ್ವಚ್ಛಮಾಡುವ ಕಾರ್ಯಕ್ರಮವನ್ನು ಸಾರಿದರು. ಅದರಲ್ಲಿ ಕೆಲ ಸವರ್ಣ ಹಿಂದುಗಳೂ ಭಾಗವಹಿಸಿದರು. ಇವರಲ್ಲಿ ಬರಿ ನಾಲ್ವರು ಕಾಂಗ್ರೆಸ್ ಬ್ರಾಹ್ಮಣರು ಮಾತ್ರ ಹರಿಜನರ ಕೈಯ ನೀರನ್ನು ಕುಡಿಯುವ ಧೈರ್ಯವನ್ನು ಪ್ರದರ್ಶಿಸಿದರು. ಈ ನಾಲ್ವರು ಕಾರ್ಯಕರ್ತರು ಯಾವಾಗಲೂ ದೇವಸ್ಥಾನಕ್ಕೆ ಹೋಗುವ ಭಕ್ತರಾಗಿದ್ದರು. ದೇವಾಲಯದ ಅಧಿಕಾರಿಗಳು ಅವರನ್ನು ದೇವಸ್ಥಾನದಿಂದ ಬಹಿಷ್ಕರಿಸಿದರು. ಇಲ್ಲಿ ಹರಿಜನ ಪ್ರವೇಶದ ಪ್ರಶ್ನೆಯೇ ಇದ್ದಿಲ್ಲ. ಈ ಮೊದಲು ದೇವಸ್ಥಾನಕ್ಕೆ ಬಂದುಹೋಗುವ ಸವರ್ಣ ಹಿಂದುಗಳು ಯಾರ ಕೈಯಿಂದ ಅನ್ನ ಉಣ್ಣುತ್ತಾರೆ, ನೀರು ಕುಡಿಯುತ್ತಾರೆ ಎಂದು ಪರೀಕ್ಷಿಸುವ ಗೊಡವೆಗೆ ಯಾರೂ ಎಂದೂ ಹೋಗಿದ್ದಿಲ್ಲ. ಒಂದಾನೊಂದು ಕಾಲದಲ್ಲಿ ಆಯಾ ಜಾತಿಯ ಪಂಚಾಯತಿಗಳು ಅನ್ನ ನೀರಿನ ವಿಷಯದ ನಿರ್ಬಂಧಗಳನ್ನು ಮುರಿದವರನ್ನು ದಂಡಿಸುವ ಇಲ್ಲವೆ ಅವರಿಗೆ ಪ್ರಾಯಶ್ಚಿತ್ತ ಕೊಡಿಸುವ ಕೆಲಸವನ್ನು ಮಾಡುತಿದ್ದುದುಂಟು. ಆದರೆ ಅದು ಗತಕಾಲವೆಂದು ನಾವೆಲ್ಲರೂ ಬಲ್ಲೆವು. ಆಗ ಕೂಡ ಮೇಲೆ ಹೇಳಿದ ಬಗೆಯ ದೃಷ್ಟಾಂತಗಳು ಬಹಳ ದುರ್ಲಭವಾಗಿದ್ದವು. ಆದರೆ ಇದೀಗ ಬಿಕಾನೇರದಲ್ಲಿ ಸಂಭವಿಸಿದೆ—ಮತ್ತು ಅದಕ್ಕೆ ಮಹಾರಾಜರ ಅನುಮತಿಯಿದೆಯೆಂದು ಹೇಳಲಾಗಿದೆ. ಶ್ರೀ ರಾಜಾಜಿಯವರಲ್ಲಿ ಇದನ್ನು ಅರಿಕೆ ಮಾಡಿಕೊಳ್ಳಲಾಗಿ ಅವರು ಕಾಲಮಹಿಮೆಯನ್ನು ಮನ್ನಿಸಬೇಕೆಂದು ಮಹಾರಾಜರಿಗೆ ಉಪದೇಶ ಕೊಟ್ಟರಂತೆ. ಆದರೆ ಗವರ್ನರ ಜನರಲ್ಲರ ಸೂಚನೆ ಕೂಡ ಅಷ್ಟೇನೂ ಪರಿಣಾಮಕಾರಿಯಾದಂತಿಲ್ಲ. ಆ ಸುಧಾರಕ ಬ್ರಾಹ್ಮಣರು ದೇವಸ್ಥಾನದ ಮುಂದೆ ಉಪವಾಸವನ್ನು ಪ್ರಾರಂಭಿಸಿದರು. ಶ್ರೀ ವಿನೋಬಾ ಅವರು ನಡುವೆ ಬಿದ್ದು ಉಪವಾಸವನ್ನು ಕೊನೆಗೊಳಿಸುವಂತೆ ಅವರನ್ನು ಮನವೊಲಿಸಿದರು. ಹರಿಜನರಿಗೆ ಪ್ರವೇಶವಿಲ್ಲದ ಗುಡಿಯಲ್ಲಿ ದೇವರ ಸಾನ್ನಿಧ್ಯವಿರಲಾರದೆಂದು ಸಮಾಧಾನ ಹಚ್ಚಿಕೊಂಡು ಆ ಸುಧಾರಕರು ದೇವಸ್ಥಾನದಲ್ಲಿ ಆರಾಧನೆ ಮಾಡುವ ಬದಲು ಹರಿಜನರನ್ನು ಸಂಗಡ ಸೇರಿಸಿಕೊಂಡು ಮಿಶ್ರಭಜನೆಗಳನ್ನು ಏರ್ಪಡಿಸಿ ಕೃತಾರ್ಥರಾಗಬೇಕಾಯಿತು.

ಇವೆಲ್ಲವೂ ರಾಜಕೀಯ ಗತ್ತುಗಳೆಂಬದು ಸ್ಪಷ್ಟವೇ ಇದೆ. ಕಾಂಗ್ರೆಸ್ ವಿರೋಧಿ ಗುಂಪುಗಳು ಕಾಂಗ್ರೆಸ್ಸಿನ ವಿರುದ್ಧ ಮುಂಬರುವ ಶಾಸನ ಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಬಯಸಿ, ಅದಕ್ಕಾಗಿ ಅಜ್ಞಾನಿ ಜನಜಂಗುಳಿಯನ್ನು ಕಾಂಗ್ರೆಸ್ಸಿನ ವಿರುದ್ಧ ಛಟ್ಟಗೆಬ್ಬಿಸಲು ಇದೊಂದು ಅನುಕೂಲ ಆಯುಧವೆಂದು ಬಗೆದಿವೆ. ಮತದಾರರಲ್ಲಿ ಗಾಬರಿಯನ್ನುಂಟುಮಾಡಿ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳುವ ಆಟವಿದಲ್ಲದೆ ಬೇರಾವ ಉದಾತ್ತ ಅಥವಾ ಧಾರ್ಮಿಕ ಉದ್ದೇಶ ಇದರಲ್ಲಿಲ್ಲ.

ಸಂಗಡಲೇ, ಹರಿಜನರಲ್ಲಿ ದೇವಾಲಯ ಪ್ರವೇಶಕ್ಕಾಗಿ ನಡೆದ ಚಳವಳಿಯಾದರೂ ಅಷ್ಟು ಶುದ್ಧಾಂತಃಕರಣದ್ದಲ್ಲೆಂದೂ ನಾನು ಹೇಳಬಯಸುವೆ. ಹರಿಜನರಿಗೆ ಎಲ್ಲ ಹಿಂದೂ ದೇವಾಲಯಗಳನ್ನು ಮುಕ್ತದ್ವಾರವಾಗಿ ಮಾಡುವ ಕಾಯದೆಯೇನೋ ಸರಿಯಾದುದು. ಆದರೆ ದೇವಸ್ಥಾನಕ್ಕೆ ಯಾರಾದರೂ ಏಕೆ ಹೋಗುವರೆಂಬ ಪ್ರಶ್ನೆ ಯುಕ್ತವೂ ಮಹತ್ವದ್ದೂ ಆಗಿದೆ. ಒಂದು ಕ್ರಿಸ್ತ ದೇವಾಲಯದಲ್ಲಾಗಲಿ ಮಸೀದೆಯಲ್ಲಾಗಲಿ ಜರಗುವ ಪ್ರಾರ್ಥನೆ ಅಥವಾ ಉಪದೇಶಕ್ಕೆ ಹೋಗಲು ಯಾರಿಗೂ ಅಡ್ಡಿಯಿಲ್ಲ. ಆದರೆ ನಿರುದ್ದೇಶವಾಗಿ ಯಾರೂ ಅಲ್ಲಿ ಹೋಗುವದಿಲ್ಲ. ಶ್ರದ್ಧೆಯುಳ್ಳವರು ಅಥವಾ ಜಿಜ್ಞಾಸುಗಳು ಮಾತ್ರವೇ ಅಲ್ಲಿಗೆ ಹೋಗುತ್ತಾರೆ. ಹಿಂದೂ ದೇವಸ್ಥಾನಗಳೂ ಅದೇ ವರ್ಗಕ್ಕೆ ಸೇರಿದವುಗಳು. ಕೇವಲ ಹಕ್ಕನ್ನು ಸ್ಥಾಪಿಸುವ ಛಲದಿಂದ ಅಲ್ಲಿ ಪ್ರವೇಶಿಸಲೆಳಸುವದು ಸರಿಯಲ್ಲ. ಪ್ರವೇಶಾಪೇಕ್ಷೆಯಾದವರಿಗೆ ಆ ದೇವತೆಯ ಬಗ್ಗೆ ಒಂದಿಷ್ಟು ಶ್ರದ್ಧೆ, ಆ ದೇವಸ್ಥಾನ ಯಾವ ಪಂಥಕ್ಕೆ ಸೇರಿದ್ದೋ ಆ ಪಂಥದಲ್ಲಿ ಒಂದಿಷ್ಟು ವಿಶ್ವಾಸ, ಅಥವಾ ಏನಿಲ್ಲೆಂದರೂ ಒಂದಿಷ್ಟು ಜಿಜ್ಞಾಸೆ ಇಲ್ಲವೆ ದರ್ಶನಾಪೇಕ್ಷೆ ಇಷ್ಟಾದರೂ ಇರಬೇಕಾದ್ದು ಅತ್ಯವಶ್ಯ. ಒಂದೇ ಮಾತಿನಲ್ಲಿ ಅವನು "ಶ್ರದ್ಧಾಳು"ವಾಗಿರಬೇಕು. ಅವನು ನಯಶೀಲನಾಗಿರಬೇಕು. ದೇವಾಲಯದ ಆವಾರದಲ್ಲಿ ಅದರ ಭಜಕ ವೃಂದದ ಮನ ನೋಯಿಸುವ ಯಾವ ಕೃತ್ಯವನ್ನೂ ಮಾಡದಂತೆ ಅವನು ಎಚ್ಚರ ವಹಿಸಬೇಕು. ಶುದ್ಧ ರಕ್ತದ ಬ್ರಾಹ್ಮಣನಾದರೂ ಆ ದೇವಾಲಯದ ದೇವತೆಯನ್ನು ಹೀಯಾಳಿಸುವ ಸಲುವಾಗಿ ಅಲ್ಲಿಗೆ ಬರಬಯಸಿದರೆ ಅವನಿಗೆ ಪ್ರವೇಶ ದೊರೆಯಕೂಡದೆಂಬದು ಸ್ವಯಂ ವೇದ್ಯವಾದ ಮಾತು. ಆ ಕಾರಣಗಳಿಗಾಗಿ ಅವನು ಹೊರತಳ್ಳಲ್ಪಟ್ಟರೆ ಯಾರೂ ಗೊಣಗುಟ್ಟಲಾರರು.

ದೇವಾಲಯವಿರುವದು, ಅದರ ಭಜಕರಿಗಾಗಿ, ಅನುಯಾಯಿಗಳಿಗಾಗಿ ಮಾತ್ರ, ಎಂಬ ಮಾತಿನಲ್ಲಿ ಬರಿ ಅರ್ಧಾಂಶ ಸತ್ಯವಿದೆ. ದೇವಾಲಯವನ್ನು ಅದರ ಭಕ್ತರಿಗಾಗಿಯೇ ಕಟ್ಟುವದು ಸಹಜವಾಗಿದ್ದರೂ ಎಲ್ಲ ದೇವಾಲಯಗಳಲ್ಲಿಯೂ ಅನುಯಾಯಿಗಳಲ್ಲದವರಿಗೂ ನಿರಾಪದವಾಗಿ ಪ್ರವೇಶ ದೊರೆಯುತ್ತಿದೆಯೆಂಬದೂ ಅಷ್ಟೇ ಸತ್ಯ. ಪ್ರಸಿದ್ಧರೂ ವರ್ಚಸ್ವಿಗಳೂ ಆದ ಜನರನ್ನು—ಅವರ ಧಾರ್ಮಿಕ ವಿಚಾರ ಅಥವಾ ಪಂಗಡವೇನೇ ಇರಲಿ—ದೇವಾಲಯಗಳಿಗೆ ಆಮಂತ್ರಿಸುವದೂ ಅವರನ್ನು ವಿಶೇಷ ಸಂಭ್ರಮದಿಂದ ಬರಮಾಡಿಕೊಳ್ಳುವದೂ ಉಂಟು. ಕಾರಣ ಸುಲಭಗ್ರಾಹ್ಯವಾದುದೇ. ಹೊರಗಿನವರಿಗೂ ಬಂದು ನೋಡಲು ಅವಕಾಶಕೊಟ್ಟರೆ ತಾನೆ ಅನುಯಾಯಿಗಳ ಸಂಖ್ಯೆ ಬೆಳೆಯಬೇಕು? ಆದುದರಿಂದ ದೇವಸ್ಥಾನಗಳು "ಶ್ರದ್ಧಾಳುಗಳಿಗಾಗಿ" (ಅವರು ಮುಸ್ಲಿಮರು, ಪಾರ್ಸಿಗಳು ಅಥವಾ ಇಂಗ್ಲೀಷರು ಕೂಡ ಇರಬಹುದು.) ಇವೆಯೆಂಬ ಮಾತೂ ಅವು ಭಜಕರಿಗಾಗಿಇವೆಯೆಂಬಷ್ಟೆ ವಿಹಿತವಾಗಿದೆ. ಯಾರಾದರೂ ಪ್ರವೇಶಕ್ಕೆ ಅನರ್ಹರಾಗಿದ್ದರೆ, ಅವರು ನಿಂದಕರಾಗಲಿ ದೇವಾಲಯಭಂಜಕರಾಗಲಿ ಇರಬೇಕು. ಈ ಸತ್ಯಕ್ಕೆ ಬೇರಾವ ಆವರಣ ತೊಡಿಸಬಯಸುವದೆಂದರೆ ಸತ್ಯದ ಗೋಣು ಹಿಸುಕಿದಂತೆಯೆ ಸೈ. ಅದರಿಂದ ಯಾರಿಗೂ ಹಿತವಿಲ್ಲ. ಹರಿಜನರಲ್ಲಿರುವ "ಶ್ರದ್ಧಾಳು"ಗಳನ್ನು ರೂಢಿಯ ಒತ್ತಾಯಕ್ಕೆ ಬಲಿಬಿದ್ದು ದೇವಸ್ಥಾನಗಳಿಂದ ಹೊರಗಿರಿಸಿದ್ದರಿಂದ ಸತ್ಯದ ಮೇಲೆ ಅತ್ಯಾಚಾರವಾಗಿದೆ. ರೂಢಿಯನ್ನು ತಾನಾಗಿ ಮುರಿಯಲು ಸಮಾಜ ಅಸಮರ್ಥವಾದುದರಿಂದ ಕಾಯದೆ ತಾನು ಕೈಹಾಕಿ ಅದನ್ನು ಸುಗಮವಾಗಿ ಮಾಡಿಕೊಟ್ಟಿದೆ.

ಆದರೆ ಶ್ರದ್ಧಾಳುಗಳನ್ನೂ ಇತರರನ್ನೂ ಹೇಗೆ ವಿಗಂಡಿಸಬೇಕೆಂದು ಕಾಯದೆ ನಿಷ್ಕರ್ಷಿಸಲಾರದು. ತದ್ವಿರುದ್ಧವಾಗಿ ಏನಾದರೊಂದು ಕೃತ್ಯವನ್ನು ಮಾಡುವವರೆಗೂ ಎಲ್ಲರೂ ಶ್ರದ್ಧಾಳುಗಳೆಂದೇ ಗ್ರಹಿಸಬೇಕು. ಆದರೆ ಶ್ರದ್ಧೆಯುಳ್ಳವರೆ ಮಾತ್ರ ಹಕ್ಕನ್ನು ಉಪಯೋಗಿಸುವದು ಪ್ರಾಮಾಣಿಕರಿಗೆ ಒಪ್ಪೀತು. ಬರಿ ಹಕ್ಕಿನ ಸ್ಥಾಪನೆಗಾಗಿ ಪ್ರವೇಶಿಸಲೆಳಸುವದಾಗಲಿ ಹಾಗೆ ಮಾಡಲು ಬೇರೆಯವರನ್ನು ಪ್ರೇರಿಸುವದಾಗಲಿ ನ್ಯಾಯವಲ್ಲ.

ಇನ್ನು ದೇವಾಲಯದ ಅಧಿಕಾರಿಗಳಾದರೂ ದೇವಸ್ಥಾನಕ್ಕೆ ಬಂದು ಹೋಗುವವರೆಲ್ಲರೂ ಪಾಲಿಸಬೇಕಾದ ನಿಯಮಗಳನ್ನು ಯಾರು ಅನುಸರಿಸುವರೋ ಅವರೆಲ್ಲರೂ ಶ್ರದ್ಧಾಳುಗಳೆಂದೇ ಬಗೆಯತಕ್ಕದ್ದು. ಹೊಟ್ಟೆ ನಾಣ್ಯದ ಚಲಾವಣೆ ತಾನಾಗಿ ನಿಂತುಹೋಗುವದು. ದೇವಸ್ಥಾನದಲ್ಲಿ ಶ್ರದ್ಧೆಯುಳ್ಳದಾತನು ನಾಲ್ಕಾರು ಸಾರಿ ಬಂದುಹೋದ ಬಳಿಕ ಬರುವದನ್ನು ತಾನಾಗಿ ನಿಲ್ಲಿಸಿಬಿಡುವನು. ಆದರಿಂದ ದೇವಸ್ಥಾನಕ್ಕೆ ಯಾವ ನಷ್ಟವೂ ಇಲ್ಲ. ರೀತಿಗೆಟ್ಟು ವರ್ತಿಸುವವರನ್ನು ಬೇಕಾದಾಗ ತಡೆಯಲು ಎಡೆಯಿದ್ದೇ ಇದೆ.

ಈ ಅಭಿಪ್ರಾಯಕ್ಕೆ ಮುನ್ನಡೆ ದೊರೆತರೆ, ಆಗ, ವೈದಿಕ ಹಿಂದೂ ದೇವಸ್ಥಾನವಿರಲಿ, ಜೈನ—ಹಿಂದೂ ದೇವಾಲಯವಿರಲಿ, ಅದರಲ್ಲಿ ಹರಿಜನರಿಗಾಗಲಿ, ಹಿಂದೂ, ಅ—ಹಿಂದೂ, ಜೈನ ಜೈನೇತರರಿಗಾಗಲಿ ತಂತಮ್ಮೊಳಗೆ ಪಂಕ್ತಿಭೇದ ಮಾಡುವ ಆವಶ್ಯಕತೆಯೆ ಬೀಳದು. ಇದು ಸತ್ಯಸಮ್ಮತವೂ ಸ್ಪಷ್ಟವಾದಷ್ಟೆ ಅನುಮತವೂ ಆದ ವಿಚಾರ. ಇದಕ್ಕೆ ವ್ಯತಿರಿಕ್ತವಾದುದೆಲ್ಲ ಕಪಟ, ಅಸತ್ಯ ಮಿಶ್ರಿತವಾದುದು. ಅದಕ್ಕೆ ಎಡೆಗೊಟ್ಟರೆ, ದೇವಾಲಯಗಳ ನಾಶವೂ ಭ್ರಾತೃಹತ್ಯೆಯೂ ಪರಿಣಮಿಸದಿರದು.

ಮುಂಬಯಿ ೩-೧೧-೪೮ . ಕಿ. ಘ ಮಶ್ರೂವಾಲಾ

ಮರೆತ ಮಾತು: ವಲ್ಲಭಾಚಾರ್ಯ ಪಂಥದ ಕೆಲ ದೇವಸ್ಥಾನಗಳ ವ್ಯವಸ್ಥಾಪಕರು ತಮ್ಮ ದೇವಾಲಯಗಳಿಗೆ ಹೊರಗೀಲಿ ಹಾಕಿದ್ದಾರೆಂದೂ ಅವರು ಗುಡಿಗಳಲ್ಲಿದ್ದ ವಿಗ್ರಹಗಳನ್ನು ಕೂಡ ಮೂಲ ಸ್ಥಾನಗಳಿಗೆ ಸ್ಥಾನಾಂತರಿಸಿದ್ದಾರೆಂದೂ ತಿಳಿಯುತ್ತದೆ. ಧರ್ಮ ಸುಧಾರಣೆಯ ಚರಮ ಪ್ರಸ್ಥಾನದಲ್ಲಿ ಎಲ್ಲ ಮೂರ್ತಿಪೂಜಕ ಪಂಥಗಳೂ ದೇವಾಲಯಗಳೂ ಲಯವಾಗಿ ಹೋಗುವ ಸಂಭವವಿದೆ. ವಲ್ಲಭ ಪಂಥಿಗಳು ತಮ್ಮ ಸಂಸ್ಥೆಗಳನ್ನು, ಹರಿಜನ ದೇವಾಲಯ ಪ್ರವೇಶವನ್ನು ಪ್ರತಿಭಟಿಸುವನೆವದಿಂದ ಸ್ವೇಚ್ಛೆಯಿಂದ ಮುಚ್ಚುವ ವಿಚಾರದಲ್ಲಿದ್ದರೆ ಅದೊಂದು ಪ್ರಚ್ಛನ್ನ ಅನುಗ್ರಹವೆಂದೇ, ಹೇಳಬೇಕು. ಯಾರಿಗೆ ಗೊತ್ತು, ಇಂದಿನ ದೇವಾಲಯ ಸಂಸ್ಥೆಗಳು ಈ ಬಗೆಯಾದ ಸಂದರ್ಭವೊಂದರಲ್ಲಿ ಕಣ್ಮರೆಯಾಗಬೇಕೆಂದು ದೈವ ಸಂಕಲ್ಪವೇನೊ. ಅದೊಂದು ಅನಾಹುತವೆಂದು ತಿಳಿಯಬೇಕಿಲ್ಲ. ಆದರೆ ಅದರಲ್ಲಿ ವಿಷಾದದ ಅಂಶವೆಂದರೆ, ಇದು ಬುದ್ಧಿವಾದ ಪರಿಣತವಾಗಿರದೆ, ವೈಷ್ಣವ ಧರ್ಮಕ್ಕೆ ಬದ್ಧ ವಿರುದ್ಧವಾದ ತತ್ವಗಳ ಫಲಿತಾಂಶವಾಗಿ ಸಂಭವಿಸಿದಂತಾಗುವದು.

೪—೧೧—೪೮ ಕಿ. ಘ. ಮ.

(ಗುಜರಾತಿಯಿಂದ)

## ಹರಿಜನ ಟಿಪ್ಪಣಿಗಳು

### ಗರ್ಭದಲ್ಲಿದ್ದ ಕರುಗಳ ತೊಗಲು

ಅಖಿಲಭಾರತ ಪಶುಸಂಗೋಪನ ಕೇಂದ್ರ, ಕರೊಳಬಾಗ, ಹೊಸದಿಲ್ಲಿ ಈ ಸಂಸ್ಥೆಯ ಗೌರವ ಕಾರ್ಯದರ್ಶಿಗಳು ಕೆಳಗಿನ ಸುದ್ದಿಯನ್ನು ಕಳಿಸಿದ್ದಾರೆ. ಅದು ಸರಿಯಿದ್ದರೆ ಅತ್ಯಂತ ಸಿಡಿಲು ಬಡೆಯುವಂತಹದು.

"ಇನ್ನೂ ಗರ್ಭದಲ್ಲಿ ಇದ್ದ ಕರುಗಳ ಚರ್ಮಕ್ಕಾಗಿ ಗಬ್ಬಿದ್ದ ದನಗಳನ್ನು ಕೊಂದು ಕರುವಿನ ಚರ್ಮವನ್ನು ಮಾರುವ ವ್ಯವಹಾರವು ಗೋಶಾಲೆಯಲ್ಲಿ ಹೆಚ್ಚುತ್ತಿದೆ ಎಂಬುದಾಗಿ ಪಂಜಾಬ ಸರಕಾರದ ಔದ್ಯೋಗಿಕ ಶಾಲೆಯ ಡಾಯರೆಕ್ಟರರ ನೇತೃತ್ವದಲ್ಲಿ ಆರ್ಥಿಕ ಪರಿಶೀಲಕ ಸಮಿತಿಯವರು ನಡೆಸಿದ ವಿಚಾರಣೆಯ ವರದಿಯಿಂದ ತಿಳಿದುಬರುವ ಅಂಶದಿಂದ ನನಗೆ ಸಿಡಿಲು ಬಡಿದಂತಾಯಿತು. ದಿಲ್ಲಿಯೊಂದರಲ್ಲಿಯೇ ಒಬ್ಬನ ಹತ್ತರ ಇಂಥ ೮೦೦ ತೊಗಲುಗಳು ಸಿಕ್ಕವೆಂದು ಸುದ್ದಿ. ಈ ಹೋರೆಯು ಅತ್ಯಂತ ಲಾಭಕರವಾಗಿದ್ದು, ಕಟುಕರು ಗೋಶಾಲೆಯಲ್ಲಿಯ ಗಬ್ಬಿದ್ದ ಅತ್ಯುತ್ತಮ ಆಕಳುಗಳನ್ನು ಕೊಂದು ಗೋಮಾಂಸವನ್ನು ಮತ್ತು ಎಲುಬುಗಳನ್ನು ಪ್ರತ್ಯೇಕವಾಗಿ ಮಾರಿ ಬಹಳ ಲಾಭ ಮಾಡಿಕೊಳ್ಳುವದುಂಟು—ಈ ವ್ಯವಹಾರದಲ್ಲಿಯ ಅತ್ಯಂತಿಕ ಕಟುಕತನದತ್ತ ಸರಕಾರದವರ ಗಮನವನ್ನು ಎಳೆಯಲಾಗಿದೆ. ಸಾರ್ವಜನಿಕರಿಗೂ ಇತ್ತ ಲಕ್ಷಿಸಲು ಕೋರಿದ್ದಾಗಿದೆ. ಈ ಬಗೆಯ ವ್ಯಾಪಾರದಿಂದ ಗೋಸಂಪತ್ತು ನಾಶವಾಗುತ್ತದೆಯೆಂಬುದೇ ಸತ್ಯಕ್ಕೆ [illegible] ಯುಕ್ತವೂ ಬಹಳ [illegible] ಸರಕಾರದ ಗಮನಕ್ಕೆ ತರಲಾಗಿದೆ. ಈ ಪ್ರಶ್ನೆ ಅತ್ಯಂತ ಗಂಭೀರವಾಗಿದ್ದು ಎಲ್ಲರೂ ಕೂಡಲೆ ಇತ್ತ ಗಮನಹರಿಸುವದು ಅವಶ್ಯವಾಗಿದೆ. ಈ ವ್ಯವಹಾರದ ಅಕ್ರಮವಾದದ್ದು [illegible] ಕಾರಣದವರು ಕೂಡಲೆ [illegible]?"

ಮುಂಬಯಿ —ಕಿ. ಘ. ಮಶ್ರೂವಾಲಾ
೫-೧೧-೪೮

### ದುಶ್ಚಟವನ್ನು ಹೆಚ್ಚಿಸಲು ಸಂಪತ್ತಿಯ ವ್ಯಯ

ಚಹಾಪಾನವನ್ನು ಪ್ರೋತ್ಸಾಹಿಸುವದಕ್ಕಾಗಿ ನಿರ್ಮಾಣವಾಗುವ ಚಹಾ ಮೇಲೆ ತೆರಬೇಕಾದ ಪ್ರಭಾರವಿದೆ. ಪ್ರತ್ಯೆಕ್ಕೆ [illegible] ಪೌಂಡಿಗೆ ೧—೬—೦ ಕರ ಹೇರಲಾಗುತ್ತದೆ. ಇದೆಲ್ಲ ಹಣವನ್ನು ಹಿಂದೀ ಚಹಾ ಮಂಡಳಿಯ ಅಧಿಪತ್ಯಕ್ಕೆ ಮಂಡಳಕ್ಕೆ ಕೊಡಲಾಗುತ್ತದೆ.

ಹಿಂದುಸ್ತಾನದಿಂದ ಪ್ರತಿವರ್ಷ [illegible] ಲಕ್ಷ ಪೌಂಡು ಚಹಾ ಪರದೇಶಕ್ಕೆ ಹೋಗುತ್ತದೆ; ಇದರಿಂದ [illegible] ಲಕ್ಷ ರೂಪಾಯಿ ಕರ ವಸೂಲಾಗಿರುತ್ತದೆ. ಈ ಹಣದಲ್ಲಿ ಲಂಡನದಲ್ಲಿ ಮೂರರ್ಧ ಪಾಲಾಂಶವನ್ನು ವೆಚ್ಚ ಮಾಡುತಿದ್ದು ಉಳಿದ ೩೦ ಲಕ್ಷ ರೂಪಾಯಿಗಳನ್ನು ನಮ್ಮನ್ನು ಚಹಾಪಾಯಿಗಳನ್ನಾಗಿ ಮಾಡುವದರಲ್ಲಿ ವ್ಯಯಿಸಲಾಗುತ್ತದೆ. ಕೆಳಗಿನ ಅಂಕೆಗಳನ್ನು ನೋಡಿದರೆ ಇದೆಷ್ಟೊಂದು ಯಶಸ್ವಿಯಾಗಿ ನಡೆದಿದೆಯೆಂಬುದು ಗೊತ್ತಾಗುವದು—

| ವರ್ಷ | ಹಿಂದುಸ್ತಾನದಲ್ಲಿ ಬಳಸುವ ಚಹಾ |
|---|---|
| ೧೯೩೦ | ೪೪೦ ಲಕ್ಷ ಪೌಂಡು |
| ೧೯೪೩—೪೪ | ೧೩೩೦ ಲಕ್ಷ ಪೌಂಡು |
| ೧೯೪೬—೪೭ | ೧೬೫೦ ಲಕ್ಷ ಪೌಂಡು |

ಈ ರೀತಿಯಾಗಿ ಕಳೆದ ಹದಿನಾರು ವರುಷಗಳಲ್ಲಿ ಹಿಂದುಸ್ತಾನದಲ್ಲಿ ಚಹಾ ಕುಡುಕರ ಸಂಖ್ಯೆ ನಾಲ್ಕು ಪಟ್ಟಾಗಿದೆಂಬುದು ಗೊತ್ತಾಗುವದು.

ದಿ. ಕೆ. ಜ.

### ಇದಿಷ್ಟೇ ಅಲ್ಲ

ಮೇಲೆ ವಿವರಿಸಿದ್ದಷ್ಟೇ ಈ ಪದ್ಧತಿಯ ದುಷ್ಪಾಂಶವಲ್ಲ, ಚಹಾಪಾನ ಪ್ರಸಾರವೆಂತಾಗುತಿದೆ ಎಂಬುದು ಅತ್ಯಂತ ಗಹ್ಯ ಸಂಗತಿಯಾಗಿದೆ. ಚಹಾಪಾಯಿಗಳಲ್ಲದವರಲ್ಲಿ ಚಹಾಪಾನದ ಚಟವನ್ನು ಹಚ್ಚುವುದಕ್ಕಾಗಿ ಚಹಾದ ಏಜಂಟರಿಲ್ಲ ಹಳ್ಳಿಹಳ್ಳಿಗಳಿಗೆ ಹೋಗಿ ಚಹಾದ ಅಂಗಡಿಗಳನ್ನು ತೆರೆಯುತ್ತಾರೆ ಅಲ್ಲಿ ಮೂರು ತಿಂಗಳುಗಳ ವರೆಗೆ ಪುಕ್ಕಟೆಯಾಗಿ ಚಹಾ ಕೊಡಲಾಗುತ್ತದೆ. ಈ ಚಹಾದ ಅಂಗಡಿಗಳಿಗೆ ಜನರು ಆಕರ್ಷಿಸಲ್ಪಡುವಂತೆ, ಫೋನೋಗಳನ್ನು ಮತ್ತು ಇನ್ನಿತರ ಆಕರ್ಷಕ ಸಾಧನಗಳನ್ನು ಉಪಯೋಗಿಸಲಾಗುತ್ತದೆ. ಏಜಂಟರು ಮನೆ ಮನೆಗೆ ಹೋಗಿ ಚಹಾವನ್ನು ಕೊಡುವದುಂಟು.

ಕೆಟ್ಟ ಮತ್ತು ಅನಾರೋಗ್ಯಕರವಾದ ಚಟುವಟಿಕೆಗಳನ್ನು ಹಚ್ಚುವದಕ್ಕಾಗಿ ಇಷ್ಟೊಂದು ಧಾರಾಳವಾಗಿ ಹರಿಯುತ್ತಿರುವ ಹಣದ ಹೊಳೆ ಮತ್ತು ಉತ್ಸಾಹವು ಆರೋಗ್ಯವರ್ಧನಕ್ಕೆ ಮತ್ತು ಸದುದ್ದೇಶಗಳಿಗಾಗಿ ವ್ಯಯವಾದರೆ ಜಗತ್ತಿನಲ್ಲಿಯೇ ನಾವು ಎಂಥ ಬದಲಾವಣೆಯನ್ನು ಮಾಡಬಲ್ಲೆವು? ಆದರೆ ಬೇನೆ ಮತ್ತು ದುಶ್ಚಟಗಳನ್ನು ಪ್ರಸಾರ ಮಾಡಲು ನಮ್ಮಲ್ಲಿ ಸಾಕಷ್ಟು ಹಣ ಮತ್ತು ಜನರಿದ್ದಾರೆ. ಆದರೆ ಜ್ಞಾನ ಪ್ರಸಾರಕ್ಕಾಗಿ, ಆರೋಗ್ಯ [illegible]ಗಳಿಗಾಗಿ ಮತ್ತು ಜೀವನದ ಉತ್ಕರ್ಷಕ್ಕೆ ಅವಶ್ಯವಾದ ಸಂಗತಿಗಳನ್ನು ಮಾಡುವದಕ್ಕೆ ಜನರಾಗಲಿ ಹಣವಾಗಲಿ ಸಾಕಷ್ಟು ಇರುವದಿಲ್ಲ.

ಈ ಎಲ್ಲ ಸಂಗತಿಗಳನ್ನು ವಿಶೇಷಿಸಿ ಮುಖ ಪ್ರದರ್ಶಿಸುವ ನಾವೆಲ್ಲ ಚಟುಳು ಮುರಿಯುವಲ್ಲಿ ಇಲ್ಲವೆ ನಿರಾಶೆಯ ನಿಟ್ಟುಸಿರು ಬಿಡುವಲ್ಲಿ ನಮ್ಮ ವೇಳೆ ಮತ್ತು ಉತ್ಸಾಹದ ಅಪವ್ಯಯ ಮಾಡಬಾರದು ಆದರಿಂದ ಯಾರಿಗೂ ಪ್ರಯೋಜನವಾಗದು. ಆಳವಾಗಿ ಬೇರೂರಿದ ರೂಢಿ ಪದ್ಧತಿಗಳನ್ನು ಬೇಗ ಬಿಟ್ಟುಗೊಡುವಂತೆ ಯಾವದೊಂದು ರಾಜಕೀಯವಾಗಲಿ ವ್ಯಾಪಾರಸ್ಥರಾಗಲಿ ಸಿದ್ಧರಾಗುವದು ಬಹಳ ಕಠಿಣವಾದುದು. ಆದುದರಿಂದ ಯಾವುದು ಅನಿಷ್ಟವೆಂದು ಎನಿಸುವದೋ ಅದನ್ನು ಹೊಡೆದು ಹಾಕಲು ಜನರು ಮತ್ತು ಸ್ವಯಂಸೇವಕರು ವಿಶೇಷ [illegible] ನಾನಾಬಗೆ ನಿರ್ಣಾಯಕವಾಗಿ ಬಿಟ್ಟುಬಿಡದೆ ಮತ್ತು [illegible] ಹದಿಂದ ಕಾರ್ಯಕಾರಿಯಾಗುವಂತೆ [illegible] ವನ್ನು ಮಾಡತಕ್ಕದ್ದು.

ಮುಂಬಯಿ ಕಿ. ಘ. ಮ.
೩೦—೧೦—೪೮

# ಹಿಂಸೆಗೆ ಹಸಿರು ದೀಪವೆ?

## (ಮುಕ್ತದ್ವಾರವೆ?)

ಹರಿಜನದ ೧೯೪೮ ನವೆಂ ೭ ನೇ ದಿನದ ಸಂಚಿಕೆಯಲ್ಲಿ, ಒತ್ತಾಯದ ಸಮರಶಿಕ್ಷಣದ ವಿಷಯದಲ್ಲಿ ಅಹಿಂಸಾವಾದಿಯಾದವನು ಹೇಗೆ ವರ್ತಿಸಬೇಕೆಂದು ಕೇಳಿದ ಒಂದು ಪ್ರಶ್ನೆಗೆ ನಾನು ಹೀಗೆ ಉತ್ತರ ಹೇಳಿದ್ದೆ– "ಅಹಿಂಸಾವಾದಿಯಾದವನು ಇಂತಹ ಕಾನೂನನ್ನು ಸವಿನಯವಾಗಿ ಭಂಗಿಸಿ ಈ ಅಪರಾಧಕ್ಕೆ ಕೊಡಲಾಗುವ ಶಿಕ್ಷೆಗೆ ತಲೆಗೊಡಲು ಸಿದ್ಧನಾಗಿರಬೇಕೆಂಬುದು ಸ್ವಯಂಸ್ಪಷ್ಟವಿದೆ." ಆ ಮೇಲೆ ಈ ವಿಷಯದಲ್ಲಿ ಜನಸಾಮಾನ್ಯರ ಮನೋವೃತ್ತಿಯೇನೆಂಬುದನ್ನು ಎತ್ತಿತೋರಿಸಿ ಹೀಗೆ ಮುಗಿಸಿದ್ದೆ– "ಸೈನ್ಯದಲ್ಲಿದ್ದವರ ಕಠಿನ ಜೀವನಕ್ಕೂ ಅವರ ಕಠಿನತರ ಸೇವೆಗೂ ಸರಿತೂಕವಾಗಿರುವ ಇನ್ನಾವುದಾದರೂ ಒಂದು ಬಗೆಯ ಶಿಸ್ತಿನ ಶಿಕ್ಷಣ ಕ್ರಮವನ್ನು ಸಮರ ಶಿಕ್ಷಣಕ್ಕೆ ಪ್ರತಿಯಾಗಿ ಒತ್ತಾಯದಿಂದ ಕೈಕೊಂಡದ್ದಾದರೆ ನಾನದನ್ನು ಅವಾಸ್ತವವೆಂದು ಗಣಿಸಲಾರೆ. ಆದರೆ ಹೇಡಿಯು ಕೂಡ ನಡೆದುಹೋಗಬಹುದೆನ್ನುವಷ್ಟು ಅಹಿಂಸಾಮಾರ್ಗವು ಸುಗಮವೆಂದು ಮಾತ್ರ ತಿಳಿದುಕೊಳ್ಳುವದು ಸರ್ವಥಾ ತಪ್ಪು.

ನನ್ನ ಅಭಿಪ್ರಾಯವನ್ನು ಎತ್ತಿ ಒಪ್ಪಿ ವಿ. ಬ್ರೂಸ ಒವ್ಹ್‌ಸ್ವರ ಎಂಬ ಒಬ್ಬ ಆಂಗ್ಲ ಶಾಂತತಾವಾದಿ, 'ಪೀಸನ್ಯೂಜ' ಎಂಬ ಹಿಂಸೆಯನ್ನೂ ಯುದ್ಧವನ್ನೂ ತೊಳುಗಿಸಬೇಕೆಂಬ ತತ್ವವನ್ನೂ ಪ್ರತಿಪಾದಿಸುವ ವಾರಪತ್ರಿಕೆಯಲ್ಲಿ ಒಂದು ಲೇಖ ಬರೆದಿದ್ದಾರೆ.

ವಿ. ಬ್ರೂಸರ ಅಭಿಪ್ರಾಯವನ್ನು ಟೀಕಿಸುತ್ತ ಇನ್ನೊಬ್ಬ ಆಂಗ್ಲ ಶಾಂತತಾವಾದಿ ವಿ. ಮಾಯಕೆಲಜೆ. ಕ್ಲೇ ಎಂಬವರು ೧೯೪೮ ಆಗಸ್ಟ ೬ ರ 'ಪೀಸ ನ್ಯೂಜ' ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ–

"ಹಿಂಸೆಯ ಬಗ್ಗೆ ಗಾಂಧಿಯವರ ಅಭಿಪ್ರಾಯವೇನೆಂಬುದನ್ನು ನಾನು ಸಮರ್ಥಿಸುವೆನಾದರೂ ಬ್ರೂಸರು ಶ್ರೀಮಶ್ರುವಾಲಾ ಅವರ ಅಭಿಪ್ರಾಯವನ್ನು ಎತ್ತಿಹಿಡಿದು ಹಿಂದುಸ್ತಾನದಲ್ಲಿ ಹಾಗು ಆನುಸಂಗಿಕವಾಗಿ ಇಲ್ಲಿಯೂ ಒತ್ತಾಯದ ಸೈನ್ಯಭರತಿಗೆ ಹಸಿರು ದೀಪ ಹಿಡಿದದ್ದು ಕಂಡು ನನಗೆ ವಿಷಾದವಾಗುತ್ತದೆ.

"ಶಾಂತತಾವಾದಕ್ಕೆ ಬೆರಳೆಣಿಸುವಷ್ಟು ಜನರ ಬೆಂಬಲವಿದೆಯೆಂದ ಮಾತ್ರಕ್ಕೆ ಆ ತತ್ವದ ಗುರುತ್ವವಾಗಲಿ ಸ್ವರೂಪವಾಗಲಿ ಬದಲಾಗಲಾರದು ಮತ್ತು ಅದು ಕೇವಲ ವೈಯಕ್ತಿಕ ಪ್ರತಿರೋಧವೆಂದೂ ಅರ್ಥವಾಗದು. ಯುದ್ಧವನ್ನು ಅಲ್ಲಗಳೆವುದೂ ಒತ್ತಾಯದ ಸೈನ್ಯ ಭರತಿಯನ್ನು ಅಲ್ಲಗಳೆವುದೂ ಒಂದೇ. ಒತ್ತಾಯದ ಸೈನ್ಯಭರತಿಯನ್ನು ವಿರೋಧಿಸಿ ತಮ್ಮ ಹೆಸರು ಕೊಡದವರ ಜೀವನವು, ಇನ್ನೊಂದು ಬಗೆಯ ಯಾವುದೊ ಕಠಿನ ಶಿಸ್ತಿಗೆ ಒಳಪಟ್ಟ ಸೇವಾ ಕಾರ್ಯವನ್ನು ಕೈಕೊಂಡವರಷ್ಟು ಸುಗಮವಾಗದು. ಆದರೆ ಇಂತಹರು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಅಪ್ರತ್ಯಕ್ಷವಾಗಿ ಹಿಂಸಾವಾದಿಗಳ ಬೆಂಬಲ ಕಟ್ಟುವದು ಖಂಡಿತ. ಹಿಂಸೆಯು ಹೇಡಿತನಕ್ಕಿಂತ ಹಿರಿದಾಗಿರಬಹುದು ಇಲ್ಲವೆ ಕೀಳಾಗಿರಬಹುದು. ಆದರೆ ಶಾಂತತಾವಾದವೆಂಬುದು ಹೆಣ್ಣು ಗಂಡು ಎಲ್ಲರೂ ಅನುಸರಿಸಬಹುದಾದ ಮಾರ್ಗವೆಂಬಲ್ಲಿ ಯಾವ ಸಂದೇಹವೂ ಇಲ್ಲ."

ಅದಾವ ಶಾಂತತಾವಾದಿಯೇ ಇರಲಿ, ಅಷ್ಟೇ ನಾನೂ ಯುದ್ಧ ವಿರೋಧದ ಬಗ್ಗೆ ದೃಢ ವಿಶ್ವಾಸವಿಟ್ಟವನಿದ್ದೇನೆ ಮತ್ತು ಅಹಿಂಸೆಯಲ್ಲಿ ಶ್ರದ್ಧೆಯುಳ್ಳವನಿದ್ದೇನೆ. ಆದ್ದರಿಂದ ವಿ. ಕ್ಲೇ ಅವರು ನನ್ನಮೇಲಿಟ್ಟ ಆರೋಪವು ನನ್ನ ತಲೆತಿನ್ನಹತ್ತಿತು. ನಾನು ಯಾವದೇ ಬಗೆಯಾಗಿ ಹಿಂಸೆಯೊಡನೆ ಒಡಂಬಡಿಕೆಗೆ ಬಂದೆನೆ? ನಾನು ಕೊಟ್ಟ ಉತ್ತರ ಮತ್ತೆಮತ್ತೆ ಓದಿನೋಡಿದೆ. ನಾನು ತಿಳಿದುಕೊಂಡ ಸತ್ಯ ಮತ್ತು ಅಹಿಂಸೆಯ ತತ್ವಕ್ಕೆ ಅಸಂಗತವಾದುದೇನೂ ನನಗೆ ಕಂಡುಬರಲಿಲ್ಲವಿಷ್ಟೇ ಅಲ್ಲ ಅಹಿಂಸಾ ತತ್ವದಿಂದ ನಾನೆಲ್ಲಿ ಚ್ಯುತಿಗೊಂಡೆ ಎಂಬುದೂ ನನಗೆ ತೋರಲಿಲ್ಲ ನಾನು ಹಿಂದುಸ್ತಾನದ ಹಿನ್ನೆಲೆಯನ್ನು ಮಾತ್ರ ಇಟ್ಟುಕೊಂಡು ಆ ಮಾತುಗಳನ್ನಾಡಿದ್ದರಿಂದಲೂ ವಿ. ಕ್ಲೇ ಅವರು ಯುರೋಪದ ಹಿನ್ನೆಲೆಯನ್ನು ಇಟ್ಟುಕೊಂಡದ್ದರಿಂದಲೂ ಈ ದೃಷ್ಟಿಭೇದ ಒಂದು ವೇಳೆ ಘಟಿಸಿರಬಹುದೆಂದು ಅಂದುಕೊಂಡೆ. ಆದ್ದರಿಂದ ಈ ಬಗ್ಗೆ ನನಗೆ ಗೊತ್ತಿದ್ದ ಕೆಲ ಮಿತ್ರರ ಅಭಿಪ್ರಾಯ ಕೇಳಲು ಇಬ್ಬರು ನನಗೆ ಸುದೀರ್ಘವಾಗಿ ಬರೆದು ತಿಳಿಸಿದ್ದಾರೆ. ಇವರಲ್ಲಿ ವಿ. ಹೊರೇಸ ಅಲೆಗ್ಝಾಂಡರ ಎಂಬವರು ವಿ. ಕ್ಲೇ ಅವರ ದೃಷ್ಟಿಕೋನವನು ವಿಶದವಾಗಿ ತಿಳಿಸಲು ಹೆಣಗಿದ್ದಾರೆ. ಅವರ ಪತ್ರದ ಸುಸಂಗತ ಭಾಗವನ್ನು ಇಲ್ಲಿಕ್ಕಿದ್ದಂತೆ ಉದ್ಧರಿಸುವದೇ ಉತ್ತಮ. ಅವರೆನ್ನುತ್ತಾರೆ:–

"ಹರಿಜನದ ೧೯೪೮ ನವೆಂ ೭ ನೇ ಸಂಚಿಕೆಯಲ್ಲಿದ್ದ ನಿಮ್ಮ ಭಾಷ್ಯವನ್ನು ನಾನು ಓದಿದ್ದೇನೆ. ಹಾಗು ವಿ. ಕ್ಲೇ ಅವರು ಏಕೆ ಅಸಂತುಷ್ಟರಾಗಿದ್ದಾರೆಂಬುದನ್ನು ಊಹಿಸಬಲ್ಲೆ.

"ನಿಮ್ಮ ಭಾಷ್ಯವು ನನಗೇನೋ ಅನಾಕ್ಷೇಪಣೀಯವೆಂದು ತೋರಿದರೂ ಪಾಶ್ಚಾತ್ಯರಾದ ನಮಗೆ ಅತ್ಯಂತ ಪ್ರಮುಖವಾದ ಒಂದು ಅಂಶವು ಅದರಲ್ಲಿ ಬಾರದೆ ಹೋಗಿದೆ.

"ದೇಶದ ಬಹುಸಂಖ್ಯಾಕರು ಒತ್ತಾಯದ ಸೈನ್ಯ ಭರತಿಯನ್ನು ಎತ್ತಿಹಿಡಿವ ವರೆಗೆ ಈ ಒತ್ತಾಯದ ಸಮರ ಶಿಕ್ಷಣ ಸಾಗತಕ್ಕದ್ದೇ ಎಂಬುದನ್ನು ನಾವೆಲ್ಲ ಒಪ್ಪಲೇಬೇಕು. ಆದರೆ ಅಹಿಂಸೆಯಲ್ಲಿ ಶ್ರದ್ಧೆ ಇದ್ದವರು ಇಬ್ಬಗೆಯ ಹೊಣೆ ಹೊರಬೇಕಾಗುವದು. ಒಂದು, ಅವರು ಒತ್ತಾಯದ ಸೈನ್ಯ ಭರತಿಯನ್ನೂ ಸಮರ ಶಿಕ್ಷಣವನ್ನೂ ವಿರೋಧಿಸಬೇಕು. ಎರಡನೆಯದಾಗಿ ಇಂತಹ ಶಾಸನವನ್ನು ತೊಡೆದುಹಾಕುವಂತೆ ಹೆಣಗಬೇಕು.

"ಇನ್ನು ನೀವು ನಿಮ್ಮ ಲೇಖನದಲ್ಲಿ ಪ್ರಾಮುಖ್ಯವಾಗಿ, ನಿಜವಾದ ಅಹಿಂಸಾವಾದಿಯು ಸುಲಭ ಮತ್ತು ನಿರಾಯಾಸವಾದುದಾವುದನ್ನೂ ವೈಕಲ್ಪಿಕ ಸೇವೆಯಾಗಿ ಬಯಸಕೂಡದೆಂಬುದನ್ನೇ ಬಿಂಬಿಸಲು ಯತ್ನಿಸಿದ್ದೀರಿ. ಅವನು ಎಲ್ಲರಿಗಿಂತ ಹೆಚ್ಚಿನ ಕಷ್ಟ ನಿಷ್ಠುರಗಳನ್ನು ಸಹಿಸಲು ಸಿದ್ಧನಿರಬೇಕೆಂದೂ ಆದರೆ ಅದು ಮಾನವ ಜನಾಂಗದ ಸೇವೆಗಾಗಿ ಅಲ್ಲದೆ ಸಮರ ಸೇವೆಗಾಗಿ ಇರಕೂಡದೆಂದೂ ಪ್ರತಿಪಾದಿಸಿರುವಿರಿ.

"ಪಾಶ್ಚಾತ್ಯ ದೇಶಗಳಲ್ಲಿ ಒತ್ತಾಯದ ಸಮರ ಶಿಕ್ಷಣದ ವಿರೋಧಿಗಳು ಈ ತೀರ್ಮಾನಕ್ಕೆ ಬಂದಿದ್ದಾರೆ. ಸರಕಾರದ ಒತ್ತಾಯದಂತೆ ಇನ್ನಾವುದೋ ಒಂದು ಕಠಿಣವಾದ ಶಿಸ್ತಿನ ಶಿಕ್ಷಣಕ್ಕೆ ಒಳಪಡುವದೆಂದರೆ ಒಂದು ವಿಧವಾಗಿ ಒತ್ತಾಯದ ಸಮರ ಶಿಕ್ಷಣಕ್ಕೆ ಶಾಶ್ವತವಾಗಿ ಒಪ್ಪಿಕೊಂಡಂತೆಯೇ ಸರಿ. ಅಂದರೆ ಕ್ಲೇ ಅವರ ಶಬ್ದದಲ್ಲಿ ಹೇಳುವದಾದರೆ ಹಿಂಸೆಗೆ ಹಸಿರು ದೀಪ ತೋರಿಸಿ ಮುಕ್ತ ದ್ವಾರ ಮಾಡಿಕೊಟ್ಟಂತೆಯೇ. ಅದ್ದರಿಂದ ಪಾಶ್ಚಾತ್ಯ ಶಾಂತತಾವಾದಿಗಳು ಯಾವದೇ ಬಗೆಯ ವೈಕಲ್ಪಿಕ ಸೇವೆಯನ್ನು ಸರ್ವಥಾ ನಿರಾಕರಿಸುತ್ತಾರೆ. ಇದನ್ನೇ ಇನ್ನೊಂದು ವಿಧವಾಗಿ ಹೇಳುವದಾದರೆ ಕಾನೂನನ್ನು ಪಾಶ್ಚಾತ್ಯರು ಎಳ್ಳಷ್ಟೂ ಮನ್ನಿಸಲು ಸಿದ್ಧರಿಲ್ಲ. ಅವರಿಗೆ ಇದಕ್ಕಿಂತ ಕಾರಾವಾಸವೇ ಲೇಸೆಂದು ತೋರುತ್ತದೆ. ಒತ್ತಾಯದ ಸೈನ್ಯಭರತಿಯ ಪದ್ಧತಿಯೇ ಅನೈತಿಕವೆಂದು ಅವರ ನಂಬಿಗೆಯಿದ್ದು ಈ ಬಗ್ಗೆ ನಡುಮಟ್ಟದ ಯಾವದೇ ಬಗೆಯ ಒಪ್ಪಂದಕ್ಕೆ ಅವರು ಸಿದ್ಧರಿಲ್ಲ. ಇಂತಹ ಉಗ್ರ ಉಪಾಯಗಳಿಂದಲೇ ಇದನ್ನು ಬೇಗ ನಿರ್ನಾಮಗೊಳಿಸಬಹುದೆಂಬ ಆಶೆ ಅವರಿಗೆ.

"ಶಾಂತಿಪ್ರಿಯರು ಅಥವಾ ಅಹಿಂಸಾ ಭಕ್ತರು ತಮ್ಮ ಬಿಗಿಯಾದ ಸಂಯಮ ನಿಯಮಗಳ ಶಿಕ್ಷಣವನ್ನು ಸಂಘಟಿಸಿದರೆ ಸಂಘಟಿಸಲಿ; ಅಂತಾರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಶಾಂತಿಗಾಗಿ ಹೀಗೆ ಪಿರ್‍ರೆ ಸಿಯರ್ ಸೋಲನೂ ಸಂಘಟಿಸಿದ್ದ. ಆದರೆ ಆ ಹೆಸರಿನಲ್ಲಿರುವ "ಸ್ವಯಂ" ಶಬ್ದವನ್ನು ಗಮನಿಸಿರಿ (ಮತ್ತು "ಅಂತಾರಾಷ್ಟ್ರೀಯ" ಎಂಬುದನ್ನೂ) ಸಿಯರ್ ಸೋಲನೂ ಅವನ ಗೆಳೆಯರೂ "ಸೈನ್ಯಕ್ಕೆ ಒತ್ತಾಯದಿಂದ ಜನರನ್ನು ಸೇರಿಸಿಕೊಳ್ಳುವುದನ್ನು ನಾವು ಒಪ್ಪುವುದಿಲ್ಲ; ಮತ್ತೆ ಕೇಳಿದರೆ, ಅದಕ್ಕೆ ಬದಲಾಗಿ ಮುಲ್ಕಿ ನೌಕರಿಗಾಗಿ ಸರಕಾರ ಒತ್ತಾಯಿಸುವುದನ್ನೂ ವಿರೋಧಿಸದಿರೆವು. ಆದರೆ ಕೇವಲ ನಮ್ಮ ರಾಷ್ಟ್ರಕ್ಕಾಗಿ ಅಲ್ಲದೆ, ನಮ್ಮ ನಿಜವಾದ ತಂದೆ ನಾಡೆನಿಸುವ ಇಡಿ ಜಗತ್ತಿಗಾಗಿ ಬಿಗಿಯಾದ ಸುನಿಯಮ ಘಟಿತವಾದ 'ನಮ್ಮ ಸ್ವಯಂಸೇವಕ ದಳ'ವನ್ನು ಸಂಘಟಿಸಿ ಮಾನವರ ಸೇವೆ ಮಾಡುವುದೇ ನಮ್ಮ ಮನೋನಿರ್ಧಾರದ ಬಗೆ" ಎಂಬು ಹೇಳಿದರಂತೆ.

"ಕಾಯದೆಗೆ ಒಳಗಾಗಿ ಸೈನಿಕ ನೌಕರಿಗೆ ಬದಲು ಮುಲ್ಕಿ ನೌಕರಿಗೆ ಕೂಡ ಜನರನ್ನು ಸರಕಾರ ಒತ್ತಾಯಿಸುವ ಶಾಸನ ಮಾಡಬಾರದು ಎಂಬವರು ಭಾರತದಲ್ಲಿದ್ದಾರೆಂಬುದು ಸ್ವತಃ ನನಗೆ ಗೊತ್ತಿದೆ. ತೋರಿಕೆಗೆ ಎಷ್ಟೇ ಅಹಿಂಸಕವೆನಿಸಿದರೂ ಸೈನ್ಯದ ಬಲಾತ್ಕಾರ ಶಾಸನ ವಿಧಿಸುವ ನೌಕರಿಯನ್ನು ಸ್ವೀಕರಿಸುವದಕ್ಕಿಂದ ಸೆರೆಮನೆಗೆ ಶರಣಾಗುವುದೇ ಲೇಸೆನಿಸುವಷ್ಟು ನಮಗದು ದುಷ್ಟವಾಗಿ ಕಾಣುತ್ತದೆ.

"ನಾನು ಸೈನ್ಯದ ಬಲಾತ್ಕಾರದ ಕಾಯದೆಯನ್ನು ಎದುರಿಸಬೇಕಾಗಿ ಬಂದಲ್ಲಿ ಅದೇ ನನ್ನ ಗತಿ ಎಂದು ನಾನು ಹೇಳುತ್ತಿಲ್ಲ. ಆದರೆ ಅಹಿಂಸಾ ಭಕ್ತರೆಲ್ಲರೂ ಅಂಥ ಸ್ಥಾನವನ್ನು ವಹಿಸುವುದು ಅನಿವಾರ್ಯವೆಂದು ಭಾವಿಸುವವರನ್ನು ಮೆಚ್ಚಿ ಅವರಿಗೆ ಮರ್ಯಾದೆ ತೋರಬೇಕು."

ಹೊರೇಸ್ ಅಲೆಕ್ಝಾಂಡರ್ ಹೇಳಿದ ಶಾಂತಿಪ್ರಿಯರ ನಿರ್ಧಾರದ ವಿರುದ್ಧವಾಗಿ ಏನನ್ನೂ ಹೇಳಲಾರೆ. ಆಗ ನನ್ನ ಮನಸ್ಸಿನೆದುರು ಭಾರತ ಮಾತ್ರವಿತ್ತು, ಯುದ್ಧದಲ್ಲಿ ದುಡಿಯಲು ಸೈನಿಕ ಸೇವೆ ಸಲ್ಲಿಸುವುದಕ್ಕಾಗಿ ಬಲಾತ್ಕಾರದ ಸೇರ್ಪಡೆಯ ವಿಷಯವನ್ನು ನಾನು ಹೇಳಿದ್ದಲ್ಲ, ಒತ್ತಾಯದ ಸೈನಿಕ ಶಿಕ್ಷಣವನ್ನು ಮಾತ್ರ ಲಕ್ಷಿಸಿ ನಾನು ಹಾಗೆಂದಿದ್ದೆ. ಭಾರತದಲ್ಲಿ ಬಲಾತ್ಕಾರದ ಪಡೆವಳತನದ ಅವಶ್ಯಕತೆ ಇಲ್ಲವೇ ಇಲ್ಲ. ಕೆಲವು ವರ್ಗಗಳಲ್ಲಿ ಸೈನಿಕೋದ್ಯೋಗ ಒಂದು ಪರಂಪರಾಗತ ವೃತ್ತಿಯೇ ಆಗಿದೆ. ಮತ್ತು ನೌಕರಿಯ ಕರಾರುಗಳು ತಕ್ಕವೆನಿಸಿದರೆ ಸೇರಲು ಹೋಗುವ ಜನರಿಗೇನೂ ಕಡಿಮೆಯಿಲ್ಲ. ಕ್ಷಾತ್ರ ವೃತ್ತಿಯವರಲ್ಲದ ಜನರಿಗೆ ಸೈನಿಕ ಶಿಕ್ಷಣದ ಸ್ಥಾನದಲ್ಲಿ ಅವರನ್ನು ಆರೋಗ ದೃಢಕಾಯರಾದ ಸ್ವಾವಲಂಬಿಗಳನ್ನಾಗಿ ಮಾಡುವ ಮತ್ತಾವ ಸಾಧನವೂ ಇಲ್ಲದ ಕಾರಣ ಅರ್ಧಮಟ್ಟಿಗೆ ಒತ್ತಾಯದ ಸೈನಿಕ ಶಿಕ್ಷಣದ ಬೇಡಿಕೆಯೆದ್ದಿತು; ಅಲ್ಲದೆ ಇನ್ನರ್ಧ ಆ ಬೇಡಿಕೆ ಹೊರಡಲು ಶಾಂತಿ ಸ್ಥಾಪನೆಯ ಯಾವ ಉದ್ದೇಶವೂ ಇಲ್ಲದೆ ಕೇವಲ ತಮ್ಮ ಸುರಕ್ಷಿತತೆಗಾಗಿ ಬ್ರಿಟಿಶರು ಜನರನ್ನು ನಿಃಶಸ್ತ್ರರನ್ನಾಗಿ ಮಾಡಿದ್ದರ ವಿರುದ್ಧ ಪ್ರತಿಕ್ರಿಯೆಯುಂಟಾದದ್ದೂ ಕಾರಣ. ಆ ಬ್ರಿಟಿಶ್ ಧೋರಣೆ ಕೆಲವನ್ನು ಸ್ವೀಕರಿಸುವ ಮತ್ತೆ ಕೆಲವನ್ನು ತ್ಯಜಿಸುವ ಪ್ರವೃತ್ತಿಯಿಂದ ಅಲ್ಲದಸಲ್ಲದ ಭೇದವನ್ನು ವಿವಿಧ ಕ್ಷಾತ್ರಕುಲಗಳಲ್ಲಿ ಮಾಡಿತು. ವೈಕಲ್ಪಿಕ ಕಠಿನ ಸೇವೆಯನ್ನು ಸೈನ್ಯಕ್ಕೆ ಸೇರಲೊಲ್ಲದವರ ಮೇಲೆ ಹೊರಿಸುವುದು ಅನ್ಯಾಯ್ಯವಲ್ಲವೆಂದು ತಿಳಿಯುವುದಾಗಿ ನಾನು ಹೇಳಿದಾಗ, ಅಂಥ ವೈಕಲ್ಪಿಕ ಸೇವೆಯನ್ನು ಅಧಿಕೃತವಾಗಿಯೇ ಸಂಘಟಿಸಬೇಕೆಂದು ನನ್ನ ಅಭಿಪ್ರಾಯವಿದ್ದಿಲ್ಲ. ನಮ್ಮ ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿ, ಸದಾ ಯುದ್ಧಕ್ಕೆ ಸಿದ್ಧವಾಗಿರುವ ಅನಿವಾರ್ಯ ಅವಶ್ಯಕತೆಯಲ್ಲಿ ಅಚಲ ಶ್ರದ್ಧೆಯಿಟ್ಟಿರುವ ಸರಕಾರಗಳು ನಮ್ಮ ನಾಡಿನಲ್ಲಿರುವಾಗ ನಾವೇ ಯೋಚಿಸಿ ವೈಕಲ್ಪಿಕ ಸೇವೆಯನ್ನು ಸಂಘಟಿಸುವ ತೊಂದರೆಯನ್ನು ನಾವು ತೆಗೆದುಕೊಳ್ಳಲಾರೆವು. ಸೈನಿಕ ಶಿಕ್ಷಣಕ್ಕೆ ವಿಕಲ್ಪವಾಗಿ ಏನಾದರೊಂದು ಬೇರೆ ತರಬೇತನ್ನು ತೆಗೆದುಕೊಳ್ಳುವ ಮನಸ್ಸು ಒಮ್ಮೆ ಬಂದರೆ ನಮ್ಮ ಜನರು ಅದಕ್ಕಾಗಿ ಒಂದು ಸಮರ್ಥ ಅನಧಿಕೃತ ಸಂಘಟನೆಯನ್ನು ಸಿದ್ಧಮಾಡುವದರಲ್ಲೇ ತೃಪ್ತರಾಗಿ ಉಳಿದಾರು. ಒಂದು ವೇಳೆ ಅವರು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಅಧಿಕೃತವಾಗಿ ಒಂದು ಅಹಿಂಸಾತ್ಮಕವೆನಿಸುವ ವೈಕಲ್ಪಿಕ ಸೇವಾದಳವನ್ನು ಸಂಘಟಿಸಿದರೆಂದರೆ ಶಾಂತಿ ಪ್ರಿಯನಾದ ನಾನೇಕೆ ಅದಕ್ಕೆ ವ್ಯಥೆಪಡಬೇಕೆಂಬುದು ನನಗರಿಯದು. ಅಂಥ ಯಾವುದಾದರೂ ಮಧ್ಯಮಾರ್ಗೀಣ ಸಂಘಟನೆಯಿಲ್ಲವೆ ಜಗತ್ತಿನ ಜನರೂ ಸರಕಾರಗಳೂ ಶಾಂತಿವಾದದತ್ತ ಸಾಗಲಾರರೆಂದು ತೋರುತ್ತದೆ. ಸ್ವಯಂಪ್ರವೃತ್ತ (ಅನಧಿಕೃತ) ಸಂಘಟನೆಗಳು ಅತ್ತದಾರಿ ಮಾಡಿಕೊಡುವವು, ಆದರೆ ಅವಕ್ಕೆ ತಮ್ಮವೇ ಆದ ಸಂಖ್ಯೆ ಮತ್ತು ಖರ್ಚಿನ ಹಣದ ಮಿತಿಗಳಿವೆ. ಅಧಿಕೃತ ಸಂಘಟನೆಗಳಿಗೆ ಸಂಧಾನಬದ್ಧ ನಿಯಮಗಳ ಮತ್ತು ವಿಧಿಸಲಾದ ನಿಯಮಗಳು ಹಳೆಯವಾವುವೆಂದರೆ ಅವುಗಳಿಂದ ತಪ್ಪಿಸಿಕೊಳ್ಳಲಾರದಿರುವ ದೌರ್ಬಲ್ಯದ ಮಿತಿಗಳಿವೆ. ಈ ಕಾರಣದಿಂದ ನಿಯಮಗಳಲ್ಲಿ ಮಧ್ಯಸ್ಥಿಕೆಗೆ ಬರುವದನ್ನು ವಿರೋಧಿಸುವ ಮತ್ತು ಹೊಸ ನೀತಿಮಟ್ಟಗಳನ್ನೂ ನಿರ್ಣಯಗಳನ್ನೂ ನಿರ್ಮಿಸುವ ಅವಕಾಶ ಅನಧಿಕೃತ ಸಂಘಟನೆಗಳಲ್ಲಿ ಇದೆಯಾದರೆ, ಎಷ್ಟೇ ಸಣ್ಣ ಸ್ವರೂಪದಲ್ಲೇ ಆಗಲಿ, ಅವುಗಳ ತತ್ವಗಳಿಗೆ ಅಧಿಕೃತ ಮಾನ್ಯತೆ ಸಿಗಬೇಕಾದ ಅವಸ್ಥೆ ಅವುಗಳ ಉದ್ದೇಶ ಸಾಫಲ್ಯಕ್ಕೆ ಅಡಕೊಂಡಿದೆ.

ಚಿಕ್ಕದಾಗಿರುವ ಶ್ರೀ ಕ್ಲೇಯ ಬರಹ ಶಾಂತಿಪ್ರಿಯರ ವಿವೇಚನೆಗೆ ಕೆಲವು ಬಹು ಮುಖ್ಯ ಪ್ರಕರಣಗಳನ್ನು ತಂದೊಡ್ಡುತ್ತವೆ. ಆದರೆ ನಾನು ನನ್ನೆದುರಿರುವ ಉಕ್ತ ಪ್ರಶ್ನೆಯ ಮೇಲೆ ನಾನು ಹೇಳಿದ್ದು ಅಹಿಂಸೆಯೊಡನೆ ಮಾಡಿಕೊಂಡ ಸಂಧಾನವೆಂದು ಯಾರೂ ಭಾವಿಸಲಾರರೆಂದು ನನ್ನ ಭರವಸೆ ಭಾರತದಲ್ಲಿ ನೂರಾರು ವರ್ಷಗಳಿಂದ ಕ್ಷಾತ್ರೇತರವಾಗಿ ಬದುಕಿದ್ದರ ಫಲವಾಗಿ ಸಮರ್ಥ ಅಹಿಂಸಾತ್ಮಕ ವಿಕಲ್ಪವಿಲ್ಲದ್ದರಿಂದ ಮಾತ್ರ ಈ ಸೈನಿಕ ಶಿಕ್ಷಣದಿಂದ ಆಕೃಷ್ಟರಾಗಿರುವ ಬಹು ಸಂಖ್ಯ ಜನರಿಗೂ ತಮ್ಮ ಜಡಾಭ್ಯಾಸ ವ್ಯಸನಗಳನ್ನು ಉಳಿಸಿಕೊಳ್ಳಲು ಅಹಿಂಸೆಯನ್ನೊಂದು ಗುರಾಣಿಯನ್ನಾಗಿ ಬಳಸಿಕೊಂಬವರಿಗೂ ಬೇರಾವ ಕಾರ್ಯಕಾರಿಯಾದ ಮಾರ್ಗವನ್ನು ನಾನು ಕಾಣಲಾರೆ.

ಕಿ. ಘ. ಮಶ್ರುವಾಲಾ

ಮುಂಬಯಿ, ೧-೧೧-೪೮

## ಗುಜರಾಥ ಕುಂಬಾರರ ಮನವಿ

ಗುಜರಾಥ ಪ್ರಾಂತೀಯ ಕುಂಬಾರ ಸಂಘದವರು ಮುಂಬಯಿ ಸರಕಾರಕ್ಕೆ ಈ ಕೆಳಗಿನ ಬೇಡಿಕೆಗಳ ಮನವಿಯನ್ನು ಕಳಿಸಿದ್ದಾರೆ. ಸರಕಾರದವರು ಸಹಾನುಭೂತಿಯಿಂದ ಈ ಬೇಡಿಕೆಗಳ ಬಗ್ಗೆ ವಿಚಾರ ಮಾಡುವರೆಂದೂ ಹತ್ತಿಕ್ಕಲ್ಪಟ್ಟ ಮತ್ತು ಬಹಳ ಪರಿಶ್ರಮ ಪಡುತಿರುವ ಈ ವರ್ಗದವರನ್ನು ಉನ್ನತ ಸ್ಥಿತಿಗೆ ಮುಟ್ಟಿಸುವಂತೆ ಎಲ್ಲ ರೀತಿಯಿಂದ ಸಹಾಯ ಸಲ್ಲಿಸುವರೆಂಬಲ್ಲಿ ನನಗೆ ಸಂಶಯವಿಲ್ಲ.

ಅವರ ಬೇಡಿಕೆಗಳಿಂತಿವೆ–

೧) ಕುಂಬಾರರಿಂದ ಒತ್ತಾಯದಿಂದ ಕೆಲಸ ತೆಗೆದುಕೊಳ್ಳತಕ್ಕದ್ದು ಎಂಬದಾಗಿ ಹಳ್ಳಿ ನೋಕರರ ನಿಯಮಗಳಲ್ಲಿಯ ೧೪೫ ನೇ ನಿಯಮವನ್ನು ರದ್ದುಪಡಿಸತಕ್ಕದ್ದು.

೨) ಬಲಿಷ್ಠ ಬಹುಸಂಖ್ಯಾಕರ ದಬ್ಬಾಳಿಕೆಯಿಂದ ಸಂರಕ್ಷಣೆ ಕೊಡತಕ್ಕದ್ದು.

೩) ಹಳ್ಳಿ ಕುಂಬಾರಿಕೆಗೆ ಪ್ರೋತ್ಸಾಹನೆ ಕೊಡತಕ್ಕದ್ದು.

೪) ಹಳ್ಳಿಗಳಲ್ಲಿಯ ಕಲಾಕುಶಲರು ಮತ್ತು ಕೆಲಸಗಾರ ವರ್ಗದ ಅಭಿಪ್ರಾಯವನ್ನು ಹತ್ತಿಕ್ಕುವ ಇಲ್ಲವೆ ಅವರನ್ನು ಶೋಷಿಸುವ ಬಹುಸಂಖ್ಯ ವರ್ಗದವರ ಮತ್ತು ಪ್ರಾಜ್ಞರ ಗತ್ತುಗಾರಿಕೆಯಿಂದ ಸಂರಕ್ಷಣೆ ದೊರೆಯಬೇಕು.

೫) ಹಿಂದುಸ್ತಾನದ ಸ್ವತಂತ್ರ ಪ್ರಜೆಗಳೆಂದು ಸ್ವಾಭಿಮಾನದ ಜೀವನವನ್ನು ಸಾಗಿಸಲು ಎಲ್ಲ ಬಗೆಯ ಹಕ್ಕುಬಾಧ್ಯತೆಗಳನ್ನು ಕೊಡತಕ್ಕದ್ದು.

ನಾಲ್ಕನೆಯ ಬೇಡಿಕೆಯು ಸೂಚನಾತ್ಮಕವಾಗಿದ್ದರೂ ಅಸ್ಪಷ್ಟವಿದೆ ಮತ್ತು ಈ ವಿಷಯದಲ್ಲಿ ಸರಕಾರದವರು ಇಂಥದನ್ನು ಮಾಡತಕ್ಕದ್ದು ಎಂದು ತಿಳಿಯುವದು ಕಠಿನವಾಗಿದೆ.

ಮುಂಬಯಿ — ಕಿ. ಘ. ಮಶ್ರುವಾಲಾ

೫-೧೧-೪೮

(ಗುಜರಾಥಿಯಿಂದ ಅನುವಾದಿತ)

## ಶ್ರೀ ಕೆಂಭಾವಿ ಮಧ್ವರಾಯರ ನಿಧನ

ವಿಜಾಪುರದ ಪ್ರಸಿದ್ಧ ಕಾರ್ಯಕರ್ತರೂ ನಗರ ಸಭೆಯ ಇಂದಿನ ಉಪಾಧ್ಯಕ್ಷರೂ ಹಿಂದಿನ ಅಧ್ಯಕ್ಷರೂ ಆಗಿದ್ದ ಶ್ರೀ ಕೆಂಭಾವಿ ಮಧ್ವರಾಯರು ತಾ. ೧೦ ಕ್ಕೆ ವಿಜಾಪೂರದಲ್ಲಿ ಹೃದಯ ವಿಕಾರದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ೧೯೨೧ ರಿಂದ ೩೦ ರ ವರೆಗೆ ಪ್ರಾಂತೀಯ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿಗಳು ಆಗಿದ್ದರು. ಬೆಳಗಾವಿ ಕಾಂಗ್ರೆಸ ಅಧಿವೇಶನದ ಕಾಲಕ್ಕೆ ಸ್ವಾಗತ ಸಮಿತಿಯ ಜನರಲ್ ಸೆಕ್ರೆಟರಿಗಳಾಗಿದ್ದರು ಇವರ ಮರಣದಿಂದ ನುರಿತ ಕಾರ್ಯಕರ್ತರೊಬ್ಬರು ಇಲ್ಲದಂತಾಯಿತು. ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

## ವಿಜಾಪುರ ಮುನಿಸಿಪಾಲಿಟಿ ರದ್ದಾಯಿತು

ವಿಜಾಪುರ ನಗರ ಸಭೆಯು ಮೊನ್ನೆ ೧೯ನೇ ತಾರೀಖಿನಿಂದ ಎರಡು ವರುಷ ರದ್ದುಪಡಿಸಲಾಗಿದೆ.

# ಮಹಿಳಾ-ಲೋಕ

## ಒಡವೆ ವಸ್ತುಗಳು

ಉಡಿಗೆತೊಡಿಗೆ, ಒಡವೆ ವಸ್ತುಗಳಿಗೆ ನಾವು ದಾಸರಾಗಿರುವುದು ಇತಿಹಾಸ ಸಾಹಿತ್ಯಗಳ ಸಾಕ್ಷಿಯಿಂದ ಮತ್ತು ಇಂದು ಪ್ರತಿನಿತ್ಯ ಎಲ್ಲೆಡೆ ಕಾಣಸಿಗುವ ಬೆಡಗುಗಾರ್ತಿಯರಿಂದ ನಾವು ಅರಿತುಕೊಳ್ಳಬಹುದು. ಈ ದಾಸ್ಯ ತಮಗೆ ಲಾಭಕರವೆಂದು ತಿಳಿವ ಹೆಂಗಸರೇ ಬಹಳ. ಗಂಡಸರು ಅದರಿಂದ ಆಕರ್ಷಿಸಲ್ಪಡುತ್ತಾರೆ. ಅದರಿಂದ ಅವರನ್ನು ತಾವು ಹೇಳಿದ ಹಾಗೆ ಕೇಳುವಂತೆ ಮಾಡಬಹುದು ಎಂಬ ಭಾವನೆ ನಮ್ಮ ಹಲವು ಪಟ್ಟಣಿಗ ತರುಣಿಯರಲ್ಲಿರುವುದು ಸುಳ್ಳಲ್ಲ. ಅಜ್ಞಾನಿಗಳಾದ ಗಂಡಸರು ಹಾಗೆ ಆಕರ್ಷಿತರಾಗುವುದೂ ಸತ್ಯದ ಸಂಗತಿ. ಹಾಗೆ ಆಕರ್ಷಿಸಿ ಗೆದ್ದ ಆಭಾಸಿಕ ಸಂತೋಷವನ್ನು ಹಾಗೆ ಆಕೃಷ್ಟರಾದವರ ನೀಚತನವನ್ನೂ ಅನುಭವಿಸಿ ಹೆಮ್ಮೆ ಪಡುವ ನಾಗರಿಕ ಮನ್ಯ ಹುಡುಗಿಯರ ಸಂಖ್ಯೆಗೇನೂ ಕಡಿಮೆಯಿಲ್ಲ. ಆದರೆ ಪಾಶ್ಚಾತ್ಯ ಸ್ತ್ರೀಯರು ಈ ವಿದ್ಯೆಯಿಂದ ಕಂಡುಕೊಂಡ ದುರನುಭವವೇ ನಮಗೂ ಆಗುವುದೆಂಬುದು ಅನಂತರ ತಿಳಿಯುತ್ತದೆ. ಒಡವೆ ವಸ್ತುಗಳಿಂದ ಅತ್ಯಲಂಕೃತಳಾದ ತರುಣಿಯತ್ತ ತರುಣ ನೋಡುವುದು ಅದೊಂದು ಕ್ರೀಡಾ ವಸ್ತುವೆಂದೇ. ನಾವಾದರೂ ನಮ್ಮ ಮಕ್ಕಳನ್ನು ಹಾಗೇ ಕಾಣುತ್ತೇವೆ. ಅವುಗಳ ಮುದ್ದು ನಗೆಯಿಂದ, ತುಂಟ ನಗೆಯಿಂದ ಆಕರ್ಷಿತರಾಗುತ್ತೇವೆ. ಎಷ್ಟೋ ಸಲ ಅವು ಹೇಳಿದಂತೆಯೂ ಕೇಳುತ್ತೇವೆ. ಆಗ ನಾವು ಸೋತಂತೆಯೇ ಸರಿ. ಮಗುವಿಗೆ ಗೆದ್ದೆನೆನಿಸಬಹುದು. ಆದರೆ ಆ ಮಗುವಿನ ಗೆಲುವಿನ ಬೆಲೆ ನಮಗೆ ಗೊತ್ತಿದೆ. ತಾನು ಗೆದ್ದೆನೆಂದುಕೊಂಡರೆ ಅಂದುಕೊಳ್ಳಲಿ, ಆ ಸಂತೋಷ ಅದಕ್ಕೆ ಸಿಗಲಿ ಎಂಬ ಉದಾರ ಭಾವದಿಂದ ನಾವು ನಕ್ಕು ಆನಂದಿಸುತ್ತೇವೆ. ಇದೇ ಪ್ರಕಾರ ಕೇವಲ ದೇಹವನ್ನೇ ಬಂಡವಾಳವನ್ನಾಗಿ ಮಾಡಿಕೊಂಡಾಕೆಯನ್ನು ಆದಕ್ಕಾಗಿ ಗಂಡು ನೋಡಿದರೆ ತಪ್ಪಾಗದು. ಅವಳಿಂದ ಅವನು ಮತ್ತೇನನ್ನೂ ಪಡೆಯಲಾರನು. ಅವರಿಂದ ದೇಹಸುಖ ಪಡೆದ ನಂತರ ಅಂಥವಳನ್ನು— ಅವಳು ತನ್ನನ್ನು ದೇಹ ಕಾರ್ಯಗಳಿಂದ ಸಂತೋಷ ಪಡಿಸಲು ಸ್ವಲ್ಪ ಅಶಕ್ತಳಾದರೆ - ತಿರಸ್ಕರಿಸಲು ಪ್ರಾರಂಭಿಸುತ್ತಾನೆ. ಇದೇ ದಾಂಪತ್ಯದಲ್ಲಿ ವಿರಸದ ಬೀಜ. ಅವನು ಇಷ್ಟಕ್ಕಾಗಿ ಅವಳ ಅಂದ ಚೆಂದ, ಸೇವೆ ತ್ಯಾಗಾದಿಗಳನ್ನು ಹೊಗಳಿದರೆ ಅದೆಲ್ಲಕ್ಕೂ ತಾನು ಅರ್ಹಳೆಂದೂ ಅದೆಲ್ಲ ಸತ್ಯವೆಂದೂ ನಂಬಿ ಅನಂತರ ಅವನು ತಿರಸ್ಕರಿಸಿದರೆ ಅವನು ಅನ್ಯಾಯ ಮಾಡಿದನೆಂದೂ ದೂರಿಕೊಳ್ಳುವವರು ನಮ್ಮಲ್ಲಿ ಬಹಳ ಜನ ಸಿಗುತ್ತಾರೆ. ಧನಬಲ, ದೇಹಬಲ, ಬುದ್ಧಿಬಲ ಈ ಮೂರರಲ್ಲೂ ಹೆಚ್ಚೆನಿಸುವ ಗಂಡನೊಬ್ಬನನ್ನು ಈ ಮೂರೂ ಇಲ್ಲದೆ ತಾರುಣ್ಯದ ಅಭಿನಯ ಸೌಂದರ್ಯದಿಂದ ಎಷ್ಟು ಕಾಲ ಒಬ್ಬಾಕೆ ತನ್ನಲ್ಲಿ ಅನುರಕ್ತನನ್ನಾಗಿ ಮಾಡಿಕೊಳ್ಳಬಲ್ಲಳು? ಅಲ್ಲದೆ ಅವನ ಅಸಂತೋಷಕ್ಕೆ ಕಾರಣಳಾದರೆ ಎಷ್ಟು ಕಾಲ ಅವನು ಸಹಿಷ್ಣುವಾಗಿರುವಂತೆ ನೋಡಿಕೊಳ್ಳಬಲ್ಲಳು? ಕುಯುಕ್ತಿಗೆ ಶರಣಾದರೆ ವಿವಾಹ ವಿಚ್ಛೇದ ಸಿದ್ಧ. ಹಾಗಲ್ಲದೆ ಪ್ರೇಮವಿದ್ದೂ ಸೇವಾ ಭಾವವಿದ್ದೂ ಅದನ್ನು ವಾಕ್ಕಾರ್ಯಗಳಲ್ಲಿ ತೋರುವ ಬುದ್ಧಿ ಚಮತ್ಕಾರವಿಲ್ಲದಾಗ ಆಜೀವ ದಾಸ್ಯ ಅವಳಿಗೆ ನಿಶ್ಚಿತ.

ಆರೋಗ್ಯ ನೈರ್ಮಲ್ಯಗಳೇ ಸೌಂದರ್ಯ, ತುಚಿಯಾದುದು ಮಾತ್ರ ರುಚಿಯಾಗುವುದು, ಬುದ್ಧಿಬಲವೇ ಮಹಾಬಲ, ಮಮತೆಯಲ್ಲೇ ಗೆಲುವಿನ ಗುಟ್ಟಿದೆ—ಎಂಬುದನ್ನು ಅರಿತರೆ ಮಾತ್ರ ನಮಗೆ ಕರ್ತವ್ಯ ದೃಷ್ಟಿ ಉದಯಿಸುವುದೆ, ಕರ್ತೃತ್ವ ಲಭಿಸುತ್ತದೆ, ಸ್ವಾತಂತ್ರ್ಯ ...ಾಗಿ ಸಿಗುತ್ತದೆ ಎಂಬುದನ್ನು ಎಷ್ಟು ಜನ ...ವತಿಯರು ಅರಿತಿದ್ದಾರೆ? ನಿರ್ವಿಕಾರದು ... ಬಗೆಯ ಅಜ್ಞಾನವಾದರೆ ಸವಿಕಾರದು ...ಂಡು ಬಗೆಯದು. ಅಂತೂ ಜ್ಞಾನ ... ಅದಕ್ಕೇ ಅಂಥವರಿಗೆ ಗಂಡಿನ ಕಾಮವಲ್ಲದೆ ಪ್ರೇಮ ಲಭ್ಯವಿಲ್ಲ. ಪ್ರೇಮವಿಲ್ಲದಲ್ಲಿ ಸ್ವಾತಂತ್ರ್ಯವೆಲ್ಲಿ, ಸುಖವೆಲ್ಲಿ ಸಾಮ್ಯವೆಲ್ಲಿ? ನಾವು ಕಾಮಪ್ರಚೋದಕ ನಡತೆಯನ್ನು ಬಿಟ್ಟು ಪ್ರೇಮಪ್ರಚೋದಕ ನಡತೆಯನ್ನು ಅಳವಡಿಸಿಕೊಂಡ ದಿನ ಜಗತ್ತಿನಲ್ಲಿ ಅಹಿಂಸಾ ರಾಜ್ಯ ಸ್ಥಾಪಿತವಾಗುವುದು. ಅಲಂಕಾರದ ಮೋಹವನ್ನು ಬಿಟ್ಟುಕೊಟ್ಟು ಸುಜ್ಞಾನಕ್ಕೆ ಶರಣಾದ ದಿನ ನಮ್ಮನ್ನಲ್ಲದೆ ನಮ್ಮ ನಲ್ಲರನ್ನೂ ಅಣ್ಣತಮ್ಮಂದಿರನ್ನೂ ಜೊತೆಗೇ ಉದಾತ್ತತೆಗೊಯ್ಯುತ್ತೇವೆ. ಸರಳತೆಯಿಲ್ಲದಲ್ಲಿ ಸೌಂದರ್ಯವೆಲ್ಲಿ ಬಂತು? ಕಲಾಮಾರ್ಗದ ಈ ಕಂಗಳನ್ನರಿತುದರಿಂದಲೇ ಗಂಡಸರು ವಿದ್ಯೆ, ಬುದ್ಧಿ, ರಸಿಕತೆ, ಸುಜ್ಞಾನಗಳಲ್ಲಿ ಹೆಂಗಸರನ್ನು ಅನಾದಿಯಿಂದ ಮೀರಿಸಿದ್ದಾರೆ. ಸಮಾನತೆಗೆ ಅಗತ್ಯವಾದ ಸರಳ ಸೌಂದರ್ಯ, ನಿರ್ವಿಕಾರ ಮತಿ, ಸದ್ವಿದ್ಯೆಗಳಿಲ್ಲದೆ ಗಂಡಂದಿರ ಜೀವನದಲ್ಲಿ ಪಾಲುಬೇಡುವ ಹೆಣ್ಣು ಜಗಳಗಂಟಿಯೆನಿಸಿಯಾಳಲ್ಲದೆ ಸಾಧ್ವಿಯೆನಿಸಲಾರಳು. ಗಂಡಸರ ಅಜ್ಞಾನವೆಂದರೂ ಸಲ್ಲುವುದು — ಹಿಂದಿನಿಂದ ನಮ್ಮನ್ನು ಅಲಂಕಾರ ಕರಂಡಕಗಳಾಗಿ ಉಳಿಯುವಂತೆ ಪ್ರೋತ್ಸಾಹಿಸಿದುದು; ಅದರಿಂದ ನಮಗಲ್ಲದೆ ಅವರಿಗಾದರೂ ಪ್ರಗತಿಪರ ದೃಷ್ಟಿಯಿಂದ ವಿಘ್ನಗಳೇ ಹೆಚ್ಚಾದವು; ಅವರೇ ಈಗ ನಮ್ಮ ಪರವಾಗಿ ಉದ್ಧಾರದ ಕೂಗನ್ನು ಎಬ್ಬಿಸುವಂತಾಗಿದೆ. ಆದರೆ ಅದಕ್ಕಿಂತಲೂ ಹೆಚ್ಚಿನದು ನಮ್ಮ ಅಜ್ಞಾನ. ಯುಗ ಯುಗಗಳು ಕಳೆದರೂ ಅರಿವೈತೋರುವ ಹೀನ ನಿದ್ರೆಯಿಂದ ಎಚ್ಚತ್ತರಾಗದ ಪಟ್ಟಣತಿಯರಿಗೆ ನಿಜಸ್ವಾತಂತ್ರ್ಯ ಹೇಗೆ ಲಭ್ಯ? ಒಡವೆ ವಸ್ತುಗಳ ಆದರ್ಶದಿಂದ ನಾವೇ ಒಡವೆ ವಸ್ತುಗಳಾಗಿ ಹೋಗಿರುವದು ಎಂಥ ಪಾಪದ ಫಲ!

ಕಿ. ರಿ. ಯಕ್ಕ

---

ರೈತರಲೋಕ

# ಕರ್ನಾಟಕದಲ್ಲಿ ದನಗಳ ಸುಧಾರಣೆ

## ಅಮೃತ ಮಹಾಲ ದನಗಳ ಅಭಿವೃದ್ಧಿಗೆ ಸರಕಾರದ ಸಹಾಯ

ನಮ್ಮಲ್ಲಿ ಒಕ್ಕಲುತನವೇ ನಾಡಿನ ಮುಖ್ಯ ಉದ್ಯೋಗವಾದರೆ, ಒಕ್ಕಲುತನಕ್ಕೆ ದನಗಳೇ ಬೆನ್ನೆಲುವುಗಳು, ಇಂದು ದನಗಳಿಂದಲೇ ಒಕ್ಕಲುತನದ ಎಲ್ಲ ಕೆಲಸಗಳು ನಡೆಯಬೇಕಾಗಿದೆ. ಯಾಂತ್ರೀಕರಣಕ್ಕೆ ನಮ್ಮ ದೇಶವು ಇನ್ನೂ ತಕ್ಕ ಸ್ಥಿತಿಗೆ ಬರಲಿಲ್ಲ. ಕೆಲವೆಡೆ ಬಿಟ್ಟರೆ ಎಲ್ಲ ಕಡೆಗೂ ಎತ್ತುಗಳೇ ಒಕ್ಕಲತನದ ಕೆಲಸ ಮಾಡುತ್ತಿವೆ. ನಮ್ಮಲ್ಲಿ ಅಸಂಖ್ಯಾತ ದನಗಳಿದ್ದರೂ ಅವುಗಳ ಪ್ರಮಾಣದಂತೆ ಹಾಲಿನ ಪೂರೈಕೆಯಾಗುತ್ತಿಲ್ಲ. ನಮ್ಮಲ್ಲಿಯ ದನಗಳ ಸ್ಥಿತಿಯು ಶೋಚನೀಯವಾಗಿದೆ. ದನಗಳಿಗೆ ಸಾಕಷ್ಟು ಹೊಟ್ಟೆಗೆ ಸಿಗುತ್ತಿಲ್ಲ. ದನಗಳ ಮೈಯಲ್ಲಿ ಎಲವು ಚರ್ಮಗಳು ಮಾತ್ರ ಉಳಿದಿವೆ. ಕೆಲವೆಡೆಯಲ್ಲಿ ಸಾಕಷ್ಟು ಮೇವು ಕಣ್ಣಿಗೆ ಬೀಳುತ್ತಿದ್ದರೂ ಅದು ಪಾಚಕವಾಗಿಲ್ಲ. ದನಗಳು ದೇಹದ ಬೆಳವಣಿಗೆಗೆ ಅಗತ್ಯವಾಗಿರುವ ವಸ್ತುಗಳು ಸಾಕಷ್ಟು ಆ ಮೇವುಗಳಲ್ಲಿರುವದಿಲ್ಲ. ನಮ್ಮವರು ದನಗಳನ್ನು ಶಾಸ್ತ್ರೀಯ ರೀತಿಯಲ್ಲಿ ಜೋಪಾನ ಮಾಡಬೇಕಾಗಿದೆ; ದನಗಳು ಗಟ್ಟಿಯಾಗಿದ್ದರೆ, ಒಕ್ಕಲುತನ ವ್ಯವಸ್ಥಿತವಾಗಿ ಅಡೆತಡೆಗಳಿಲ್ಲದೇ ಸಾಗುತ್ತದೆ. ದನಗಳ ಸುಧಾರಣೆ ಬಯಸುವವರು ಮುಖ್ಯವಾಗಿ ಎರಡು ಸಂಗತಿಗಳ ಕಡೆಗೆ ವಿಶೇಷ ಲಕ್ಷ್ಯ ಹಾಕಬೇಕು.

(೧) ಸತ್ವಶಾಲಿಯಾದ ಆಹಾರವನ್ನು ಕೊಡುವದು.

(೨) ಶಾಸ್ತ್ರೀಯ ರೀತಿಯಿಂದ ಸಂತಾನಾಭಿವೃದ್ಧಿ ಮಾಡುವದು.

ಸತ್ವಭರಿತವಾದ ಆಹಾರ ಕೊಡಲಿಕ್ಕೆ ಒಕ್ಕಲಿಗರು ಕೆಲವೊಂದು ಏರ್ಪಾಡು ಮಾಡಬೇಕಾಗುತ್ತದೆ. ಬರಿಯ ದುಡ್ಡಿನ ಆಶೆಗೆ ಒಳಗಾಗಿ ರೊಕ್ಕದ ಪೈರುಗಳನ್ನೇ ಬೆಳೆಯದೇ ತಮ್ಮ ಭೂಮಿಯಲ್ಲಿ ಕೆಲವೊಂದು ಭಾಗವನ್ನು ಮೇವುಗಳ ಬೆಳೆಗೆಗೇನೇ ಮೀಸಲಾಗಿರಿಸಬೇಕು. ನೀರಿನ ಪೂರೈಕೆ ಇರುವಲ್ಲಿ ಹಿಂಡುವ ದುಡಿಯುವ ಮತ್ತು ಬೆಳೆಯುವ ದನಗಳಿಗೆ ವರ್ಷದ ಹನ್ನೆರಡು ತಿಂಗಳೂ ಹಸಿರು ಮೇವು ಸಿಗುವಂತೆ ವ್ಯವಸ್ಥೆ ಮಾಡಬೇಕು. ಹೊಲದಲ್ಲಿ ಅವನು ಬೇಳೆಕಾಳು ತೃಣ ಧಾನ್ಯ ಎಣ್ಣೆಯ ಕಾಳು ಬೆಳೆಯುತ್ತಾನೆ. ಅವುಗಳನ್ನು ಇದ್ದಕ್ಕಿದ್ದಂತೆ ಮಾರುವ ಬದಲು ಒಂದಿನಿತು ಶ್ರಮಬಟ್ಟರೆ ಹೆಚ್ಚು ಧನ ದೊರೆಯುವದಲ್ಲವೇ? ಕಾಳು, ಹಿಂಡಿಗಳು, ಮತ್ತು ದನಕ್ಕೆ ಆಹಾರವೂ ಸಿಕ್ಕುತ್ತದೆ. ಮಿಕ್ಕ ಹಿಂಡಿಯನ್ನು ತನ್ನ ಹೊಲಕ್ಕೆ ಗೊಬ್ಬರದಂತೆ ಉಪಯೋಗಿಸಬಹುದು.

ಇನ್ನು ಶಾಸ್ತ್ರೀಯ ರೀತಿಯಲ್ಲಿ ಸಂತಾನಾಭಿವೃದ್ಧಿಯಾಗಬೇಕು. ಜಾತಿಯ ಆಕಳುಗಳನ್ನು ಜಾತಿಯ ಹೋರಿಗಳಿಗೇನೆ ಕಟ್ಟಿಸುವದರಿಂದ ಪೀಳಿಗೆ ಜಾತಿಯದೇ ಆಗುತ್ತದೆ. ಅವುಗಳಲ್ಲಿ ಹೆಚ್ಚು ಕಡಿಮೆಯಾದರೆ ಸುಧಾರಣೆಗೆ ಬಹಳ ದಿನಗಳು ಹಿಡಿಯುತ್ತವೆ. ಜಾತಿಯ ದನಗಳನ್ನು ಕಗ್ಗ ಹೋರಿಗಳಿಂದ ಕಟ್ಟಿಸುವದರಿಂದ ಕೆಲವುದಿನಗಳಲ್ಲಿ ಸಮ್ಮಿಶ್ರ ಜಾತಿಯು ನಿರ್ಮಾಣವಾಗಿ, ಸುವ್ಯವಸ್ಥಿತವಾದ ಜಾತಿ ನಾಶವಾಗಿ ಹೋಗಿ ಬಿಡುತ್ತದೆ. ಇಂದು ನಮ್ಮಲ್ಲಿ ಅಷ್ಟು ಸುಧಾರಿಸಿದ ಜಾತಿಗಳಿವೆ ಅವುಗಳನ್ನು ಮಿಶ್ರಣವಾಗದಂತೆ ಕಾಯ್ದುಕೊಂಡು ಹೋಗುವದು ನಮ್ಮ ಕರ್ತವ್ಯ. ಇನ್ನು ಇಂದು ಹಳ್ಳಿಗಳಲ್ಲಿ ಅಸಂಖ್ಯಾತ ಕಗ್ಗದನಗಳನ್ನು ಕಾಣುತ್ತೇವೆ ಅವೆಲ್ಲಾ ಗಿಡ್ಡವಾಗಿವೆ, ಅಶಕ್ಯವಾಗಿವೆ. ಸರಿಯಾಗಿ ಹಿಂಡುತ್ತಿಲ್ಲ. ಒಕ್ಕಲತನಕ್ಕೂ ಅಷ್ಟು ಉಪಯೋಗವಿಲ್ಲ. ಅವುಗಳನ್ನು ಏನುಮಾಡುವದೆಂಬುದೊಂದು ಪ್ರಶ್ನೆ ನಮ್ಮೆಲ್ಲರ ಎದುರು ನಿಂತಿದೆ. ಅವುಗಳನ್ನು ಇದ್ದಕ್ಕಿದ್ದಂತೆ ತೀರಿಸಿಬಿಟ್ಟು ಜಾತೀಯ ದನಗಳನ್ನೇ ಅಭಿವೃದ್ಧಿಗೊಳಿಸಿದರೆ ಆಗದೇ ಎಂದು ಕೆಲವರು ಕೇಳುತ್ತಾರೆ. ಇದು ಆರ್ಥಿಕ ದೃಷ್ಟಿಯಿಂದ ನೋಡಿದಾಗ ಅಸಾಧ್ಯವಾದ ಮಾತೆಂದು ಅನಿಸುತ್ತದೆ. ಮತ್ತೆ ದನಗಳ ವಿಷಯವಾಗಿ ಹಳ್ಳಿಗರಲ್ಲಿ ಮೂಡಿದ ಭಾವನೆಯೂ ಈ ಕಾರ್ಯಕ್ಕೆ ಪುಟಗೊಡುತ್ತಿಲ್ಲ. ಆದುದರಿಂದ ಅವುಗಳಲ್ಲಿಯೇ ಸುಧಾರಣೆ ಮಾಡಬೇಕಾಗಿದೆ. ತಮ್ಮ ದನಗಳನ್ನು ಯಾವಾಗಲೂ ಸರಕಾರದವರು ಶಿಫಾರಸು ಮಾಡಿದ ಹೋರಿಗಳಿಂದಲೇ ಕಟ್ಟಿಸಬೇಕು. ಹೋರಿಗಳಿಲ್ಲದವರು ಸರಕಾರದವರ ಲಕ್ಷ್ಯಕ್ಕೆ ಆ ವಿಷಯ ಹಾಕಿ ಹೋರಿಗಳನ್ನು ಪಡೆಯಬೇಕು. ಸರಕಾರದವರಾದರೂ ಅಂಥ ಹೋರಿಗಳನ್ನು ಸಾಕುವ ಯಜಮಾನರಿಗೆ ನೆರವು ಕೊಡುತ್ತಾರೆ. ಕಗ್ಗ ದನಗಳು ಜಾತಿಯ ಹೋರಿಗಳಿಂದ ಕಟ್ಟಲ್ಪಟ್ಟವುಗಳಾದರೆ ನೂರಕ್ಕೆ ಐವತ್ತು ಜಾತಿಯ ಕರಗಳನ್ನಾದರೂ ಈಯುತ್ತವೆ. ಕೆಲವು ದಿನಗಳಲ್ಲಿ ಪೂರ್ತಿಯಾಗಿ ಕಗ್ಗ ದನಗಳು ಮಾಯವಾಗುವವರಲ್ಲಿ ಸಂದೇಹವಿಲ್ಲ. ಕಾರಣ ಎಲ್ಲ ರೈತ ಬಾಂಧವರು ಜಾತಿಯ ಬೀಜದ ಹೋರಿಗಳಿಂದಲೇ ತಮ್ಮ ದನಗಳನ್ನು ಕಟ್ಟಿಸುತ್ತೇವೆಂದು ಒಮ್ಮೆ ನಿಶ್ಚಯಿಸಬೇಕು. ಅದರಂತೇ ನಡೆಯಬೇಕು. ತಮ್ಮ ಹಿಂಡಿನಲ್ಲಿರುವ ಕಗ್ಗ ಹೋರಿಗಳನ್ನು ಅವು ಪ್ರಾಯಕ್ಕೆ ಬರುವ ಮೊದಲೇ ಕಸಿ ಮಾಡಿಸಬೇಕು.—

ನಮ್ಮ ಕರ್ನಾಟಕದಲ್ಲಿ ದನಗಳ ಸ್ಥಿತಿಯು ಅಷ್ಟೊಂದು ಸುಧಾರಿಸಿಲ್ಲವೆಂದು ತೀರ ವಿಷಾದದಿಂದ ಹೇಳಬೇಕಾಗಿದೆ. ಆದರೂ ನಿರಾಶೆಗೆ ಅವಕಾಶವಿಲ್ಲ. ನಮ್ಮಲ್ಲಿ ಈಗಾಗಲೇ ಎಷ್ಟೋ ಒಂದು ಮಟ್ಟಕ್ಕೆ ಮುಟ್ಟಿದ ಜಾತಿಯ ದನಗಳಿವೆ. ದಕ್ಷಿಣ ಭಾಗದಲ್ಲಿ ಅಮೃತ ಮಹಾಲ ಜಾತಿಯ ದನಗಳಿವೆ. ಉತ್ತರದಲ್ಲಿ ಖಿಲಾರ ಜಾತಿಯ ದನಗಳಿವೆ. ಕೃಷ್ಣಾನದಿಯ ಸುತ್ತುಮುತ್ತಲಿನ ಭಾಗಗಳಲ್ಲಿ ಕೃಷ್ಣಾ ಜಾತಿಯ ದನಗಳಿವೆ, ಮತ್ತು ಎಮ್ಮೆಯ ಜಾತಿಯಲ್ಲಿ ಪಂಡರ ಜಾತಿಯಿರುವದು. ಇವೆಲ್ಲವುಗಳ ಸಹಾಯದಿಂದ ಈಗ ಕಂಡುಬರುವ ಕಗ್ಗ ದನಗಳೆಲ್ಲವನ್ನು ಕೆಲವು ಕಾಲದಲ್ಲಿ ಸುಧಾರಿಸಬಹುದಾಗಿದೆ. ಮೇಲಿನ ಮೂರು ಜಾತಿಯ ಆಕಳುಗಳಲ್ಲಿ ಹೆಚ್ಚಾಗಿ ಅಮೃತ ಮಹಾಲ ದನಗಳಿರುವದು ಕಂಡುಬರುತ್ತದೆ. ಅಮೃತ ಮಹಾಲ ದನಗಳು ಮೈಸೂರಿನವು. ಅಲ್ಲಿಂದ ಮುಂದೆ ನಮ್ಮ ಕಡೆಯಲ್ಲಿಯೂ ಹರಡಿಕೊಂಡಿವೆ. ಮೇಲಿನ ಎರಡು ಜಾತಿಗಳಿಂತಲೂ ಅಮೃತ ಮಹಾಲ ಜಾತಿಯ ದನಗಳು ಶ್ರೇಷ್ಠತಂಗತಿಯವಾಗಿರುತ್ತವೆ. ಅಮೃತ ಮಹಾಲ ಹೋರಿಗಳು ಚುರುಕಾಗಿರುತ್ತವೆ. ದೇಹ ಬಂಧುರವಾಗಿರುತ್ತದೆ. ನಿಡಿದಾದ ಮುಖ, ಸುಂದರವಾಗಿ ಬೆಳೆದ ಸ್ವಲ್ಪೇ ಬಾಗಿದ ಕೋಡುಗಳು. ಅಷ್ಟು ದಿಳಿ ಇಲ್ಲವೆ ಕರಿಯ ಮಿಶ್ರಿತ ಬಿಳಿಯ ಹೊಳೆಯುವ ಕೂದಲುಗಳು ಉದ್ದವಾದ ಬಾಯಿ, ಉದ್ದವಾದ ಬಾಲ ನೆಟ್ಟಗಿನ ಕಾಲುಗಳು. ಅಮೃತ ಮಹಾಲ ನೋಡಲಿಕ್ಕೆ ಮುದ್ದು ಮುದ್ದಾಗಿರುತ್ತವೆ. ಒಕ್ಕಲತನಕ್ಕೂ ವಾಹನದ ಸೌಕರ್ಯಕ್ಕೂ ತುಂಬಾ ಒಳ್ಳೆಯವುಗಳಾಗಿವೆ.

ಅಮೃತ ಮಹಾಲ ದನಗಳ ಬಗೆಗೆ ಸುಂದರವಾದ ಚರಿತೆಯಿದೆ. ಕನ್ನಡ ಸಮ್ರಾಟರು ಈ ಜಾತಿಯ ದನಗಳನ್ನು ಸಾಕಿ ಸುಧಾರಣೆ ಮಾಡಿದ್ದಾರೆ. ವಿಜಯನಗರದ ಅರಸರ ಕಾಲದಲ್ಲಿ ಈ ದನಗಳಿದ್ದವು. ಮುಂದೆ ಮೈಸೂರ ಅರಸರು ಈ ಕಡೆಗೆ ಲಕ್ಷ್ಯ ಹಾಕಿದರು. ಈ ಜಾತಿಯ ಹೋರಿಗಳು ಒಳ್ಳೆಯ ವೇಗವಾಗಿ ನಡೆಯ...

— ವಿನಯ ಭಟ್ಟ

# ನಮ್ಮ ಪಟ್ಟಾಭಿಯವರು

ಲೇಖಕರು:—ಶ್ರೀ. ರಂಗನಾಥ ದಿವಾಕರ

ನಮ್ಮ ರಾಷ್ಟ್ರಪತಿಗಳು, ಎಂದು ನಾವು ಏನ ಬೇಕೆನ್ನು. ಆದರೆ ಅವರ್ಶ್ಯಂಕ ನಮ್ಮ ಪಟ್ಟಾಭಿಯವರು ಎಂದೆನ್ನುವದೇ ನಮಗೆ ಹೆಚ್ಚು ಸವಿಯೆನಿಸುವದು. ಅನೇಕ ದೃಷ್ಟಿಗಳಿಂದ ಪಟ್ಟಾಭಿಯವರು ನಮಗೆ ಸಮೀಪದವರು. ನಮ್ಮೊಡನೆ ಹೆಚ್ಚು ನಿಕಟ ಸಂಬಂಧವುಳ್ಳವರು. ಈಗ ಅವರು ರಾಷ್ಟ್ರೀಯ ಮಹಾಸಭೆಯ ಪೀಠ ವನ್ನಲಂಕರಿಸಿದ್ದರೂ ನಮ್ಮ ಅವರ ಸಮೀಪದ ಸಂಬಂಧದಲ್ಲಿ ಅಂತರ ಉಂಟಾಗಲು ಕಾರಣವಿಲ್ಲ.

ಮೊದಲನೆಯ ಮಾತೆಂದರೆ ಅವರು ನಮ್ಮ ನೆರೆ ಪ್ರಾಂತದವರು, ಆಂಧ್ರದವರು. ಅವರು ಹಲವು ಸಾರೆ ಕರ್ನಾಟಕವನ್ನು ಬೇರೆ ಬೇರೆ ಪ್ರಸಂಗಗಳಲ್ಲಿ ಸುತ್ತಿರುವರು. ವಿಶೇಷತಃ ಹೋದ ಚುನಾವಣೆ ಕಾಲದಲ್ಲಿ ಅವರು ಬಂದು ಹೋದುದನ್ನು ಯಾರೂ ಮರೆಯಲಾರರು. ಅವರ ಸಾದಾತನ, ಬೇಸರಿಲ್ಲದೆ ಮಾತಾಡುವ ಅವರ ಉತ್ಸಾಹ, ಪ್ರತಿಪಕ್ಷವನ್ನು ಖಂಡಿಸುವ ಅವರ ಅಪ್ರತಿಮ ಶೈಲಿ, ಜ್ಞಾನಕೋಶವನ್ನೇ ಮರೆಯಿಸಿ ಬಿಡುವ ಅವರ ವ್ಯಾಪಕ ಜ್ಞಾನ, ಪ್ರಸಂಗವಶಾತ್ ಅವರ ವಿನೋದಾವಳಿ ಇವುಗಳನ್ನೆಲ್ಲ ನಾವು ಅವರ ಕರ್ನಾಟಕ ಸಂಚಾರದ ಕಾಲಕ್ಕೆ ಚೆನ್ನಾಗಿ ಕಂಡುಂಡಿದ್ದೇವೆ.

ಇನ್ನೊಂದು ಮಾತಿನಲ್ಲಿ ಅವರು ನಮಗೆ ಬಹಳ ಸಮೀಪದವರು. ಅದಾವುದೆಂದರೆ ಭಾಷಾನುಗುಣ ಪ್ರಾಂತರಚನೆಯ ವಿಷಯ. ಅವರು ಸದ್ಯಕ್ಕೆ ಈ ವಿಷಯದ ಆಚಾರ್ಯರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ಬಗ್ಗೆ ಅವರು ಮಾತಾಡಿದುದು, ಬರೆದುದು ಇವುಗಳೆಲ್ಲವನ್ನು ಕಲೆಹಾಕಿದರೆ ಅದೊಂದು ದೊಡ್ಡ ಗ್ರಂಥವಾಗುವದು. ಇಷ್ಟೇ ಅಲ್ಲ, ಈ ಪ್ರಶ್ನೆಯ ಬಗ್ಗೆ ಆಧಾರಭೂತವಾದ ತತ್ವಜ್ಞಾನ ಹಾಗು ಸಂಪೂರ್ಣ ವಿವೇಚನೆ ಆ ಗ್ರಂಥದಲ್ಲಿ ಕಂಡು ಬರಬಹುದು. ಭಾಷಾನುಗುಣ ಪ್ರಾಂತಗಳನ್ನು ಮಾಡುವ ಪ್ರಯತ್ನ ನಡೆದಿರುವಾಗ ನಮ್ಮ ಪ್ರಾಂತ ಮೊದಲು ನಿಮ್ಮ ಪ್ರಾಂತ ಮೊದಲು ಎಂಬ ಮೇಲಾಟವೂ ಆಗುವದುಂಟು. ಆ ಕಾಲಕ್ಕೆ ಸಹ ಆಂಧ್ರರು ಮೊದಲು ಎಂದು ಎನ್ನದೆ ಇದ್ದವರಲ್ಲಿ, ಎಲ್ಲ ಪ್ರಾಂತಗಳೂ ಒಮ್ಮೆಲೆ ಆಗಲಿ ಎಂದವರಲ್ಲಿ ಅವರೊಬ್ಬರು ಎಂದು ಹೇಳಬಹುದು. ಈ ವಿಷಯವು ಕರ್ನಾಟಕಕ್ಕೆ ಅತ್ಯಂತ ಜೀವಾಳದ್ದಿರುವದರಿಂದ ಹಾಗು ಪಟ್ಟಾಭಿಯವರು ಇದನ್ನು ತಮ್ಮ ಜೀವನದ ಒಂದು ಗುರಿಯನ್ನಾಗಿ ಇಟ್ಟುಕೊಂಡದ್ದರಿಂದ ಅವರು ನಮಗೆ ಬಹಳ ಸಮೀಪದವರು ಎಂದು ಹೇಳುವದು ಹಾಗು ಅನುಭವಿಸುವದು ಸ್ವಾಭಾವಿಕ.

ಭಾಷಾನುಗುಣ ಪ್ರಾಂತರಚನೆಯ ತರುವಾಯ ಸಂಸ್ಥಾನೀ ಪ್ರಜೆಗಳ ಮುಕ್ತಿಯು ಅವರ ಅತ್ಯಂತ ಪ್ರೀತಿಯ ವಿಷಯ. ಸುದೈವದಿಂದ ಆ ಪ್ರಶ್ನೆ ಈಗ ಎಷ್ಟೋ ಮಟ್ಟಿಗೆ ಬಿಡುಗಡೆ ಹೊಂದಿದೆ. ಇನ್ನೂ ಎಲ್ಲ ಸಂಸ್ಥಾನಗಳ ಮಟ್ಟು ಯೂನಿಯನ್ ಭಾಗದಲ್ಲಿಯ ಪ್ರಾಂತಗಳಷ್ಟೇ ಆಗಿಬಿಡುವ ವರೆಗೆ ಆ ಪ್ರಶ್ನೆ ಪೂರ್ಣವಾಗಿ ಬಿಡುಗಡೆ ಹೊಂದಿದೆ ಎಂದು ಎನ್ನಲು ಬರುವದಿಲ್ಲ ಎಂಬ ಮಾತು ನಿಜ. ಆದುದರಿಂದ ಆ ಪ್ರಶ್ನೆಗೆ ಪಟ್ಟಾಭಿಯವರು ಈಗಾಗಲೇ ಕೈಯಿಕ್ಕಿರಲಿಕ್ಕೆ ಸಾಕು. ಮೈಸೂರು ಹಾಗು ಯೂನಿಯನ್ ಕರ್ನಾಟಕ ಇವೆರಡೂ ಕೂಡಿ ಒಂದೇ ಪ್ರಾಂತವಾಗಬೇಕೆಂದು ಅವರು ಕನವರಿಸುತ್ತ ಬಂದಿರುವರು. ಕರ್ನಾಟಕ ಪ್ರಶ್ನೆ ಹೊರಟಾಗೆಲ್ಲ ಅವರು ಈ ಮಾತನ್ನು ಎತ್ತೇ ತೀರುವರು. ಈಗ ಕಾಂಗ್ರೆಸ ಪದದ ಅಧ್ಯಕ್ಷಸ್ಥಾನದಿಂದ ಈ ವಿಷಯದಲ್ಲಿ ಮಾಡತಕ್ಕ ಪ್ರಯತ್ನವನ್ನು ಮಾಡದೆ ಅವರು ಎಂದೆಂದೂ ಬಿಡಲಾರರು.

ಅವರು ಅತ್ಯಂತ ಖಾದಿ ಪ್ರಿಯರು. ಆದರೆ ಖಾದಿ ಪ್ರಿಯರಿದ್ದವರೆಲ್ಲರೂ ರಾಟೆ ಪ್ರಿಯರಿದ್ದೇ ತೀರುವರೆಂದು ಹೇಳಲಿಕ್ಕಾಗುವದಿಲ್ಲ. ಪಟ್ಟಾಭಿಯವರು ಅತ್ಯಂತ ರಾಟೆಪ್ರಿಯರು. ಅವರು ಪ್ರವಾಸದಲ್ಲಿ, ರೇಲು ಬಂಡಿಗಳಲ್ಲಿ ಸುತ್ತಾಡುತಿರುವಾಗ ಸಹ ರಾಟೆಯನ್ನು ಬಿಚ್ಚಿ ನೂಲುತ್ತ ಕೂತಿರುವದನ್ನು ನಾನು ಅನೇಕ ಸಾರೆ ಕಂಡಿದ್ದೇನೆ. ಅವರು ಸಂಧ್ಯಾವಂದನಾದಿಗಳನ್ನು ಮಾಡುತಿರುವರೋ ಇಲ್ಲವೋ ನಾನರಿಯೆ. ಆದರೆ ನೂಲುವದನ್ನು ಮಾತ್ರ ಅವರು ಎಂದೂ ತಪ್ಪಿಸುವದಿಲ್ಲ ಎಂಬುದನ್ನು ನಾನು ಹೇಳಬಲ್ಲೆ. ಹಲವು ಸಾರೆ ತಾವು ನೂತ ಸ್ವಂತ ನೂಲನ್ನು ನನಗೆ ಕೊಟ್ಟು, ಅವರು ಕರ್ನಾಟಕ ಚರಕ ಸಂಘದಿಂದ ತಮ್ಮ ಸಹಧರ್ಮಿಣಿಗೆ ಸೀರೆಗಳನ್ನು ತರಿಸಿಕೊಂಡದ್ದುಂಟು. ಕೈ ಬಾಯಿ ಸುಟ್ಟುಕೊಂಡು ನಮಗೆ ನಿತ್ಯ ಅನ್ನ ವನ್ನುಣಿಸುವ ಮನೆಯ ಮಹಿಳೆಗೆ ನಮ್ಮ ಕೈಯಿಂದ ನೂತು ನಾವು ಬಟ್ಟೆ ಪೂರೈಸುವದು ಅದೆಂತಹ ದೊಡ್ಡ ಮಾತು ಎಂದು ಅವರು ನುಡಿದದ್ದುಂಟು. ರಾಟೆಯ ಮೇಲೆ ನೂಲುವದು ಅವರ ವಿಷಯದಲ್ಲಿ ಒಂದು ಕೃತಕ ಇಲ್ಲವೆ ಯಾಂತ್ರಿಕ ಕ್ರಿಯೆಯಲ್ಲ. ಊಟ ಮಾಡುವದು, ಹರಟೆ ಕೊಚ್ಚುವದು ಇಲ್ಲವೆ ಬರೆಯುವದು ಇವೆಲ್ಲ ಅವರಿಗೆ ಎಷ್ಟು ಸ್ವಾಭಾವಿಕವೋ ಅಷ್ಟೇ ನೂಲುವದಾದರೂ ಸಹಜವು. ಹಲವಾರು ವರುಷ ಅವರು ತಮ್ಮ ಪ್ರಾಂತದ ಚರಖಾ ಸಂಘದ ಏಜಂಟರಾಗಿ ಖಾದಿಯ ಪ್ರಸಾರದ ಹಾಗು ಸಂಘಟನೆಯ ಕಾರ್ಯದಲ್ಲಿ ಕೆಲಸ ಮಾಡಿದ್ದಲ್ಲದೆ ನಿತ್ಯ ಹಾಗು ಸತತ ನೂಲುವ ತಮ್ಮ ಅಭ್ಯಾಸದಿಂದ ಅನೇಕರಲ್ಲಿ ಅವರು ನೂಲುವ ಪ್ರೀತಿಯನ್ನು ಹುಟ್ಟಿಸಿದರು.

ಪಟ್ಟಾಭಿಯವರು ಈ ವರೆಗೆ ಬರೆದು ಪ್ರಸಿದ್ಧಿಸಿದ ಪುಸ್ತಕ ಲೇಖ ಮುಂತಾದುವುಗಳನ್ನು ನೋಡಿದರೆ ನೂಲುವದು ಅವರಿಗೆ ಎಷ್ಟು ಪ್ರಿಯವೋ ಅಷ್ಟೇ ಬರೆಯುವದೂ ಪ್ರಿಯವಿದ್ದಂತೆ ತೋರುವದು. ಅವರ ಕಾಂಗ್ರೆಸ್ಸಿನ ಇತಿಹಾಸದ ಹೊತ್ತಿಗೆ ಕಾಂಗ್ರೆಸ್ಸಿನ ಸ್ಮಾರಕವಿದ್ದಷ್ಟೇ ಅವರ ಲೇಖನ ಶೈಲಿ ಸಾಮರ್ಥ್ಯಗಳ ಸ್ಮಾರಕವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವರು ತೆಲುಗಿನಲ್ಲಿ ಇಷ್ಟು ಬರೆದಿರುವರೋ ಇಲ್ಲವೋ ಎಂಬ ಬಗ್ಗೆ ನನಗೆ ಸಂಶಯ. ಈ ಮಾತು ಅವರ ಆಂಗ್ಲ ಭಾಷಾಪಟುತ್ವವನ್ನು ತೋರಿಸಿಕೊಡುವುದು. ಅವರಿಗೆ ಎಲ್ಲಿ ಕೂತಲ್ಲಿ ನಿಂತಲ್ಲಿ ಬರೆಯುವ ಚಟ. ಯಾವಾಗ ಬರೆಯಬೇಕು. ಏನು ಎಂಬ ಬಗ್ಗೆ ವಿಧಿ ನಿಷೇಧವೇ ಇಲ್ಲ. ಕೈಗೆ ಸಿಕ್ಕ ಇದ್ದ ಬಿದ್ದ ಕಾಗದದ ತುಂಡುಗಳನ್ನು ತೆಗೆದುಕೊಂಡು ಕಿಸೆಯಲ್ಲಿಯ ಲೆಕ್ಕಣಿಕೆಯನ್ನು ಸಾಗಿಸಿ ಹರಟೆ ಹೊಡೆಯುವಾಗ, ಘಟನಾ ಸಮಿತಿಯಲ್ಲಿ ಕುಳಿತಾಗ, ಸಂಸ್ಥಾನೀ ಪ್ರಜೆಗಳೊಡನೆ ಮಹತ್ವದ ವಿಷಯಗಳನ್ನು ಚರ್ಚಿಸುತಿರುವಾಗ ಹೀಗೆ ಬರೆಯುವದೇ ಬರೆಯುವದು. ಒಮ್ಮೆ ಬರೆದುದನ್ನು ಅವರು ಮತ್ತೆ ತಿದ್ದುವರೋ ಇಲ್ಲವೋ ನನಗೆ ಸಂಶಯ. ಯಾಕಂದರೆ ಬರೆ ಬರೆದಂತೆ ಹಾಗೆಯೇ ಅವರು ಮುದ್ರಣಕ್ಕೆ ಕಳಿಸಿದುದನ್ನು ನಾನು ನೋಡಿದ್ದೇನೆ.

ಪಟ್ಟಾಭಿಯವರು ದೊಡ್ಡ ವೃತ್ತಪತ್ರ ವ್ಯವಸಾಯಿಗಳು ಎಂಬುದು ಈಚಿಗಿನವರಿಗೆ ಗೊತ್ತಿರಲಿಕ್ಕಿಲ್ಲ. ಅವರು ಅನೇಕ ವರ್ಷ "ಜನ್ಮಭೂಮಿ" ಎಂಬ ಆಂಗ್ಲ ವಾರ ಪತ್ರಿಕೆಯನ್ನು ಮಚ್ಛಲೀಪಟ್ಟಣದಿಂದ ಹೊರಡಿಸುತ್ತಿದ್ದರು. ಈಚೆಗೆ ಆ ರೀತಿ ವೃತ್ತಪತ್ರವನ್ನು ಹೊರಡಿಸದಿದ್ದರೂ ಅವರು ಅನೇಕಾನೇಕ ವೃತ್ತಪತ್ರಗಳಲ್ಲಿ ವಿವಿಧ ವಿಷಯಗಳನ್ನು ಕುರಿತು ಲೇಖಗಳನ್ನು ಬರೆಯುತಿರುವರು. ಲೇಖಗಳನ್ನು ಕೊಡುವ ಬಗ್ಗೆ ಅನೇಕ ವೃತ್ತಪತ್ರಕಾರರು ಅವರ ಬೆನ್ನು ಬಿದ್ದೇ ಇರುತ್ತಾರೆ.

ಅಭ್ಯಾಸದ ದೃಷ್ಟಿಯಿಂದ ಅವರು ವಿವಿಧ ದೇಶಗಳ ಘಟನೆಗಳನ್ನು ಬಹಳ ಚೆನ್ನಾಗಿ ಪರಿಶೀಲಿಸಿರುವರು. ಆ ಬಗ್ಗೆ ಒಂದು ಗ್ರಂಥವನ್ನು ಕೂಡ ಪ್ರಕಟಿಸಿರುವರು. ಘಟನಾಪಟುಗಳು ಎಂಬ ಅಭಿಧಾನವು ಅವರಿಗೆ ಚೆನ್ನಾಗಿ ಅನ್ವಯಿಸುವದು. ಕಾಂಗ್ರೆಸ ಘಟನೆಯ ವಿಷಯದಲ್ಲಿ ಸಹ ಅವರ ಜ್ಞಾನವು ಅಗಾಧವಿರುವದು. ಆ ವಿಷಯಕ್ಕೆ ಅವರು ಮಾತಾಡಲಾರಂಭಿಸಿದರೆಂದರೆ ಹಿಂದಿನ ಮುಂದಿನ ಎಲ್ಲ ಮಾತುಗಳನ್ನು ಕರತಲಾಮಲಕವಾಗಿಬಿಚ್ಚಿಡಬಲ್ಲರು. ಕಾಂಗ್ರೆಸ ಸಂಸ್ಥೆಯು ಘಟನಾ ಸಮಿತಿಯನ್ನು ನೇಮಿಸದಾಗೆಲ್ಲ ಅವರೊಬ್ಬರು ಅನಿವಾರ್ಯವಾಗಿ ಸದಸ್ಯರೆಂದು ನೇಮಿಸಲ್ಪಡುತ್ತ ಬಂದಿರುವರು. ಈಗ ನಡೆದ ಹಿಂದೀ ಘಟನಾ ಸಮಿತಿಯಲ್ಲಿ ಕೂಡ ಅವರ ಜ್ಞಾನ ಹಾಗು ಅನುಭವಗಳು ಎಲ್ಲರಿಗೂ ಬಹಳ ಉಪಯುಕ್ತವೆನಿಸುತಿರುವವು.

ಅವರ ಅಭ್ಯಾಸದ ಇನ್ನೊಂದು ವಿಷಯವೆಂದರೆ ಗಾಂಧೀ ತತ್ವ ವಿಚಾರವು. ಈ ಬಗ್ಗೆಯೂ ಅವರು ಬಹಳ ಆಳವಾಗಿ ವಿಚಾರ ಮಾಡಿರುವರಲ್ಲದೆ ವಿವೇಚನಾ ಪರವಾದ ಗ್ರಂಥವನ್ನು ಬರೆದಿರುವರು.

ಈ ರೀತಿ ಹಿಂದುಸ್ತಾನದ ರಾಜಕೀಯ ನಭೋಮಂಡಲದಲ್ಲಿ ಡಾ. ಪಟ್ಟಾಭಿಯವರೆಂದರೆ ಅನೇಕ ವಿವಿಧ ಶಕ್ತಿಸಾಮರ್ಥ್ಯಗಳಿಂದ ಒಡಗೂಡಿದ ಒಂದು ಮಹಾ ವ್ಯಕ್ತಿ. ಅವರು ಈಚೇಗೆ ಹೆಸರಿಗೆ ಮಾತ್ರ ಡಾಕ್ಟರರು ಆದರೆ ಅವರ ಕಾಲ, ಬುದ್ಧಿ, ಉತ್ಸಾಹ ಮುಂತಾದವುಗಳೆಲ್ಲ ಕೇವಲ ಸ್ವಾತಂತ್ರ್ಯದ ಹೋರಾಟಕ್ಕಾಗಿ ಹಾಗು ಭಾಷಾನುಗುಣ ಪ್ರಾಂತ ರಚನೆಗಾಗಿ ಮೀಸಲು. ಇಂತಹ ವ್ಯಕ್ತಿ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಯಲ್ಲಿ ವಿರಾಜಿಸುತಿರುವದು ಆಶ್ಚರ್ಯದ ಮಾತಲ್ಲ. ಸದ್ಯದ ಪ್ರಸಂಗದಲ್ಲಿ ಇಡೀ ಹಿಂದ ರಾಷ್ಟ್ರದ ಪುನರ್ಘಟನೆ ನಡೆದಿರುವಾಗ ಕಾಂಗ್ರೆಸ್ಸು ಮಾಡತಕ್ಕ ಕಾರ್ಯವಾದರೂ ಘನವಾದುದಾಗಿದೆ. ಇಂಥ ಸಂದರ್ಭದಲ್ಲಿ ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ತನ್ನ ಹೊಣೆಯನ್ನರಿತುಕೊಂಡು ಪುನರ್ಘಟನೆಯ ಕಾರ್ಯದಲ್ಲಿ ನೆರವಾಗುವದು ಅತ್ಯವಶ್ಯಕವು. ಜಯಪುರ ಅಧಿವೇಶನದಲ್ಲಿ ಕೈಕೊಳ್ಳಬಹುದಾದ ಕಾಂಗ್ರೆಸ್ ಯೋಜನೆಗಳನ್ನು ಕಾರ್ಯಕಾರಿ ಮಾಡುವಲ್ಲಿ ಕಾಂಗ್ರೆಸ್ಸಿಗರೆಲ್ಲ ಸರ್ವ ರೀತಿಯಿಂದ ಪ್ರಯತ್ನಿಸತಕ್ಕದ್ದು. ಈ ವರೆಗೆ ಈ ವಿಷಯದಲ್ಲಿ ಕರ್ನಾಟಕವು ಎಂದೂ ಹಿಂದೆ ಬಿದ್ದಿಲ್ಲ. ಈಗ ಕೂಡ ಡಾ. ಪಟ್ಟಾಭಿಯವರ ನೇತೃತ್ವದಲ್ಲಿ ನಮ್ಮ ಪ್ರಾಂತವು ತನ್ನ ಪಾಲಿಗೆ ಬಂದ ಹೊಣೆಯನ್ನು ಹೊತ್ತೇ ತೀರುವದು ಎಂಬ ಭರವಸೆ ನನಗೆ ಇದೆ. ಸುಸಂಸ್ಕೃತ, ಸುದೃಢ, ಸುಂದರ ರಾಷ್ಟ್ರ ನಿರ್ಮಾಣವೇ ನಮ್ಮ ಈಗಿನ ಗುರಿಯಾಗಿದೆ. ಈ ಗುರಿಯನ್ನು ಸಾಧಿಸುವದೇ ನಮ್ಮ ಆದ್ಯ ಕರ್ತವ್ಯವಾಗಿದೆ.

ದಿಲ್ಲಿಯಲ್ಲಿ ಡಾ. ಪಟ್ಟಾಭಿಯವರೊಡನೆ ಶ್ರೀ ದಿವಾಕರರು

## ರೈತರ ಲೋಕ

(೧೧ನೇ ಪುಟದಿಂದ)

ಬಲ್ಲವು. ಹೈದರ ಅಲ್ಲಿ, ಟೀಪು ಸುಲ್ತಾನರು ಸೈನಿಕ ಕೆಲಸಕ್ಕೆ ಅಮೃತ ಮಹಾಲ ದನಗಳನ್ನೇ ಉಪಯೋಗಿಸುತ್ತಿದ್ದರು. ಈಗ ಇಂಗ್ಲೀಷ ಮುಖ್ಯ ಅಧಿಕಾರಿಯಾದ ವಿಲಿಂಗ್ಟನ್ನನೂ ತನ್ನ ಸೈನಿಕ ಚಟುವಟಿಕೆಗಳಿಗೆ ಈ ಜಾತಿಯ ಎತ್ತುಗಳನ್ನು ಉಪಯೋಗಿಸಿದನು. ಪೇಶ್ವೆಯರೂ ಉಪಯೋಗಿಸಿದ ಉಲ್ಲೇಖಗಳಿವೆ. ಈಗೇನೋ ಈ ಜಾತಿಯ ದನಗಳು ಬರಿಯ ಒಕ್ಕಲತನದ ದನಗಳೆಂದು ಹೆಸರಾಗಿವೆ. ಮೊದಲು ಇವು ಒಳ್ಳೆ ಸೈನದ ದನಗಳಿರಲು ಸಾಕು. "ಅಮೃತ ಮಹಾಲ" ಹೆಸರೇ ಹಾಗೆ ಸೂಚಿಸುತ್ತಿಲ್ಲವೆ? ಇದು ಟೀಪು ಸುಲ್ತಾನ ಕೊಟ್ಟ ಹೆಸರಂತೆ. ಆದರೆ ಈಗ ಅಮೃತಮಹಾಲ ಜಾತಿಯ ಆಕಳುಗಳು ಹೆಚ್ಚು ಹಾಲು ಕೊಡುತ್ತಿಲ್ಲ. ತಮ್ಮ ಕರುಗಳಿಗಾಗುವಷ್ಟು ಹಾಲು ಕೊಡುತ್ತವೆ. ಕೆಲವು ದನಗಳು ಮೈಸೂರ ದೇಶದಲ್ಲಿ ದಿನಾಲು ೧೦-೧೨ ಪೌಂಡು ಹಾಲು ಕೊಟ್ಟಿವೆ. ಅಂಥವು ಬೊಟ್ಟಿನಿಂದ ಎಣಿಸುವಷ್ಟು ಹಾಲು ಕೊಡದಿದ್ದರೂ ಚಿಂತೆಯಿಲ್ಲ, ಆದರೆ ಒಕ್ಕಲತನದ ಕೆಲಸಕ್ಕೆ ಉಪಯೋಗ ಬೀಳುವ, ಸುಂದರ, ಸದೃಢ ಹೋರಿಗಳನ್ನು ಕೊಡುತ್ತವೆ. ಜಾತಿಯ ಆಕಳುಗಳನ್ನು ಜೋಪಾನ ಮಾಡುವದು ಒಂದು ಧನವೀಯುವ ವ್ಯವಸಾಯವಾಗಿದೆ. ಸುಮಾರು ಒಂದುವರ್ಷದ ಜಾತಿಯ ಕರುಗಳು ೩೦೦-೪೦೦ ರೂಪಾಯಿ ಬೆಲೆ ಬಾಳುತ್ತವೆ. ೨-೩ ವರ್ಷ ಮೇಯಿಸಿದರೆ ೬೦೦-೭೦೦ ರೂಪಾಯಿಗಳು ಬೆಲೆಬಾಳುವದರಲ್ಲಿ ಸಂದೇಹವಿಲ್ಲ.

ಕರ್ನಾಟಕದಲ್ಲಿಯ ಅಮೃತಮಹಾಲ ಜಾತಿಯ ದನಗಳನ್ನು ಸುಧಾರಿಸಲು ಸರಕಾರದವರು ಒಂದು ಯೋಜನೆಯನ್ನು ಕೈಕೊಂಡಿರುವರು. ಈ ಯೋಜನೆಯ ಪ್ರಕಾರ ಒಂದು ವರ್ಷಕ್ಕೆ ೨೦೦ ಹೋರಿಯಂತೆ ೫ ವರ್ಷದಲ್ಲಿ ಒಂದು ಸಾವಿರ ಬೀಜದ ಹೋರಿಯನ್ನು ಕೆಳಗಿನ ಪದ್ಧತಿಯ ಮೇಲೆ ಪೂರೈಸುತ್ತಾರೆ. ಈ ಪಂಚವಾರ್ಷಿಕ ಯೋಜನೆಯ ಪ್ರಕಾರ ಸರಕಾರ ಒಂದು ಹೋರಿಯ ಬೆಲೆಯ ಅರ್ಧ ರಕಮನ್ನು ಅಂದರೆ ೩೦೦ ರೂಪಾಯಿಗಳನ್ನು ಸಹಾಯಧನವೆಂದು ಕೊಡುತ್ತದೆ. ಧಾರವಾಡ ಜಿಲ್ಹೆಯಲ್ಲಿ ಇಡಲಿಕ್ಕೆ ಇಚ್ಛಿಸುವವರು "ಸೆಕ್ರೆಟರಿ ರೂರಲ್ ಡೆವಲಪ್‌ಮೆಂಟ್ ಬೋರ್ಡ ಧಾರವಾಡ" ಇವರ ಹೆಸರಲ್ಲಿ ವಿನಂತಿ ಅರ್ಜಿ ಬರೆದು ಕಳಿಸಬೇಕು. ಅಥವಾ ರೈತರು ತಮ್ಮ ರೊಕ್ಕದಿಂದ ಪೂರ್ಣ ಕಿಮ್ಮತ್ತು ಕೊಟ್ಟು ಕೆಳಗಿನ ಆಫೀಸರರು ಪಾಸುಮಾಡಿದ ಹೋರಿಯನ್ನು ಕೊಂಡರೆ ಅದಕ್ಕೆ ಮೇಯಿಸಲಿಕ್ಕೆ ತಿಂಗಳಾ ೧೨ ರೂಪಾಯಿಯಂತೆ ಪೋಟಗಿ ಕೊಡಲಾಗುತ್ತದೆ. ಈ ಪದ್ಧತಿಯ ಮೇಲೆ ಹೋರಿಯನ್ನು ಇಡಬೇಕಾದರೆ ಅರ್ಜಿಯನ್ನು "ಅಗ್ರಿಕಲ್ಚರಲ್ ಆಫೀಸರ ಇನ್‌ಚಾರ್ಜ ಕ್ಯಾಟಲ್ ಬ್ರೀಡಿಂಗ ಧಾರವಾಡ" ಇವರಕಡೆಗೆ ಕಳಿಸಬೇಕು.

ಸರಕಾರದವರು ದನಗಳ ಅಭಿವೃದ್ಧಿಯ ಸಲುವಾಗಿ ಇನ್ನೂ ಅನೇಕ ಯೋಜನೆಗಳನ್ನು ಕೈಕೊಂಡಿರುವರು. ಹೆಚ್ಚಿಗೆ ವಿವರ ಬೇಕಾದವರು ಮೇಲ್ಕಾಣಿಸಿದವರನ್ನಾಗಲೀ "ಕ್ಯಾಟಲ್ ಬ್ರೀಡಿಂಗ ಖಾತೆಯ ಅಧಿಕಾರಿಗಳನ್ನಾಗಲೀ ಭೆಟ್ಟಿಯಾಗಿ ಅವರಿಂದ ಪೂರ್ಣ ಸಲಹೆ ತೆಗೆದುಕೊಳ್ಳಬಹುದು.

# ಕರ್ನಾಟಕ

## ಧಾರವಾಡ

ಗದಗಿನ ಪ್ರಸಿದ್ಧ ನಾಗರಿಕರೂ ಸ್ತ್ರೀ ಶಿಕ್ಷಣ ಪ್ರೇಮಿಗಳೂ ಆಗಿರುವ ಡಾ. ಎಂ. ಎಸ್. ವಾಗಳೆ ಇವರು ಧಾರವಾಡ ವನಿತಾ ಸೇವಾ ಸಮಾಜಕ್ಕೆ ೧೦೦೦ ರೂಪಾಯಿ ಅಕ್ಕನ ತದಿಗಿ ಉಡುಗರೆಯೆಂದು ಕೊಟ್ಟಿದ್ದಾರೆ.

ಮುಂಬಯಿ ಸರಕಾರದ ಶಿಕ್ಷಣ ಶಾಖೆಯ ಉಪಮಂತ್ರಿಗಳಾದ ಶ್ರೀಮತಿ ಇಂದುಮತಿ ಶೇಟ ಇವರು ಇದೆ ತಾ. ೮-೯ ಕ್ಕೆ ಧಾರವಾಡ ಹುಬ್ಬಳ್ಳಿಗಳನ್ನು ಸಂದರ್ಶಿಸಿದರು. ಧಾರವಾಡದಲ್ಲಿ ಮೂಲ ಶಿಕ್ಷಣ ಟ್ರೇನಿಂಗ ಕಾಲೇಜನ್ನು ಸಂದರ್ಶಿಸಿದರು. ಅಮರಗೋಳದಲ್ಲಿಯ ಕಸ್ತೂರಬಾ ಕೇಂದ್ರವನ್ನು ನೋಡಿಕೊಂಡು ಹುಬ್ಬಳ್ಳಿಗೆ ಬಂದರು. ಹುಬ್ಬಳ್ಳಿಯಲ್ಲಿ ಭೋಜನ ತೀರಿಸಿಕೊಂಡು ಅವರು ಗರ್ಲ್ಸ ಇಂಗ್ಲಿಶ ಸ್ಕೂಲು ಶಿಶು ವಿಹಾರ ಕೇಂದ್ರ ಸಂದರ್ಶಿಸಿ ಪ್ರಾಂತೀಯ ಕಾಂಗ್ರೆಸ ಸಮಿತಿಯಲ್ಲಿ ಶಿಕ್ಷಣಾಭಿಮಾನಿಗಳ ಕೂಡ ಚರ್ಚಿಮಾಡಿ ಮೇಲಗಾಡಿಯಿಂದ ಮುಂಬಯಿಗೆ ಮರಳಿದರು.

ಡಿಸೆಂಬರ ಮೊದಲನೆಯ ವಾರದಲ್ಲಿ ಮುಂಬಯಿ ಕರ್ನಾಟಕ ವಾಚನಾಲಯಗಳ ಪರಿಷತ್ತು ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಧಾರವಾಡದಲ್ಲಿ ಸೇರುವದು. ಮುಂಬಯಿ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶ ಶ್ರೀ ಚಗಲಾ ಇವರು ಅದರ ಪ್ರಾರಂಭೋತ್ಸವ ಜರುಗಿಸುವರು. ಮೈಸೂರು ವಿಶ್ವವಿದ್ಯಾಲಯದ ಗ್ರಂಥಾಲಯದ ಭಂಡಾರಿಗಳಾದ ಶ್ರೀ ಜಿ ಹನುಮಂತರಾವ ಇವರು ಅದರ ಅಧ್ಯಕ್ಷತೆ ವಹಿಸುವರು. ಮುಂಬಯಿ ಕರ್ನಾಟಕದ ವಾಚನಾಲಯಗಳೆಲ್ಲ ಸ್ವಾಗತ ಸಮಿತಿಯ ಸದಸ್ಯ ಆಗಿ ಸಹಕರಿಸಬೇಕೆಂದೂ ಈ ಬಗ್ಗೆ ವಿವರಗಳನ್ನು ತಿಳಿಸಬೇಕೆಂದೂ ಸಂಘದ ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

೭ ನೇ ತಾರೀಕು ಸಾಯಂಕಾಲ ೫॥ ಗಂಟೆ ಸುಮಾರು ತುಂಗಭದ್ರಾ ನದಿಯ ದಂಡೆಯಲ್ಲಿ ಬ್ರಿಟಿಶ ಹದ್ದಿಯಾದ ಕೊಡಿಯಾಲದ ಪೋಲೀಸ ಚೌಕ ನಾಕಾದ ಮುಂದೆ ನದಿಯಲ್ಲಿ ಸ್ನಾನಕ್ಕೆ ಹೋದವನೊಬ್ಬನು ನೀರಲ್ಲಿ ಮುಳುಗಿದನು. ಅವನ ಕಿಸೆಯಲ್ಲಿ ೧೩೩೦ ರೂ. ಗಳು ಇದ್ದವು. ಇದನ್ನೆಲ್ಲ ಪೋಲೀಸರು ಪೋಲೀಸ ಪಾಟೀಲರ ಸಹಾಯದಿಂದ ಪತ್ತೆ ಹಚ್ಚಿ ತಾಲೂಕು ಕಚೇರಿಯಲ್ಲಿ ಜಮಾ ಮಾಡಿರುವರು. ಸಂಬಂಧಿಸಿದವರು ಪತ್ತೆ ಹಚ್ಚಿ ರೂ. ಒಯ್ಯಬಹುದು.

ನಿವೃತ್ತ ಸಬ್‌ಜಜ್ಜ ರಾ. ಬ. ಎಸ್. ಆರ್. ಕೊಪ್ಪೀಕರರು ಧಾರವಾಡದಲ್ಲಿ ಇದೇ ೧ ನೇ ತಾರೀಕು ಸ್ವರ್ಗಸ್ಥರಾದರು. ಇವರು ಮರಣ ಕಾಲಕ್ಕೆ ೮೩ ವರ್ಷದವರಾಗಿದ್ದರು. ನುರಿತ ವಕೀಲರೆಂದು ಪ್ರಸಿದ್ಧ ಹೊಂದಿದ ಬಳಿಕ ೧೮೯೩ ರಲ್ಲಿ ಇವರು ಸಬ್‌ಜಜ್ಜರಾಗಿ ನೇಮಿಸಲ್ಪಟ್ಟರು. ಇವರು ಒಳ್ಳೆ ಶಿಕ್ಷಣ ಪ್ರೇಮಿಗಳಾಗಿದ್ದರಲ್ಲದೆ ಉದ್ಯೋಗಪ್ರಿಯರೂ ಕರ್ತವ್ಯತತ್ಪರರೂ ಆಗಿದ್ದರು.

ಧಾರವಾಡದಲ್ಲಿ ಇತ್ತೀಚೆ ಕಳ್ಳರ ಹಾವಳಿ ಹೆಚ್ಚಿದೆ. ಕರ್ನಾಟಕ ಕಾಲೇಜಿನಲ್ಲಿಯ ಹಣದ ಪೆಟ್ಟಿಗೆಯನ್ನು ಎತ್ತಿಕೊಂಡು ಹೋಗಿರುವರು. ಅಮ್ಮಿನಭಾವಿ ದೇಸಾಯರ ಮನೆಯಲ್ಲಿ ಸಾವಿರ ರೂಪಾಯಿ ಬೆಲೆಬಾಳುವ ಆಭರಣ ಮೊದಲಾದವುಗಳನ್ನು ಕಳವು ಮಾಡಿಕೊಂಡು ಹೋಗಿರುವರು. ಶ್ರೀ ಕಿಕ್ಕೇರಿಯವರ ಮನೆಯಲ್ಲಿಯ ಬೆಳ್ಳಿ ಬಂಗಾರವನ್ನೂ ಒಯ್ದಿರುವರು. ಮಾಳಮಡ್ಡಿಯಲ್ಲಿಯೆ ಈ ತಿಂಗಳೆರಡು ತಿಂಗಳಲ್ಲಿ ೭-೮ ಕಡೆ ಕಳವುಗಳಾಗಿವೆ. ಹುಬ್ಬಳ್ಳಿಯಲ್ಲಿಯೂ ಇತ್ತೀಚೆ ಕಳವು ಹೆಚ್ಚಹತ್ತಿವೆ.

ಬರುವ ಫೆಬ್ರುಅರಿ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಒಕ್ಕಲತನ ಮತ್ತು ಔದ್ಯೋಗಿಕ ಪ್ರದರ್ಶನವನ್ನು ದೊಡ್ಡ ಪ್ರಮಾಣದಲ್ಲಿ ಮಾಡಲು ಗೊತ್ತಾಗಿದೆ. ಈ ಪ್ರದರ್ಶನದಲ್ಲಿ ಆರೋಗ್ಯ ವಿಭಾಗವನ್ನೂ ದೊಡ್ಡ ಪ್ರಮಾಣದಲ್ಲಿ ಇಡಲಾಗುವದಲ್ಲದೆ ದನಗಳ ಪ್ರದರ್ಶನವನ್ನೂ ಏರ್ಪಡಿಸಲಾಗುವದು. ಕರ್ನಾಟಕ ಔದ್ಯೋಗಿಕ ಪರಿಷತ್ತು, ಧಾರವಾಡ ಜಿಲ್ಲೆಯ ರೈತ ಪರಿಷತ್ತು ಮತ್ತು ಸಹಕಾರಿ ಪರಿಷತ್ತುಗಳೂ ಇದೇ ಕಾಲಕ್ಕೆ ಕೂಡಬೇಕೆಂದು ಗೊತ್ತಾಗಿದೆ.

---

ಸುಪ್ರಸಿದ್ಧ ಕೀರ್ತನಕಾರರಾದ ಶ್ರೀ ಬೇಲೂರು ಕೇಶವದಾಸರು ಕಳೆದ ೩೦ ನೇ ತಾರೀಕು ಮೈಸೂರಿನಲ್ಲಿ ತಮ್ಮ ಮನೆಯಲ್ಲಿ ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕಳೆದ ೮ ತಿಂಗಳಿಂದ ಅವರು ಹಾಸಿಗೆ ಹಿಡಿದಿದ್ದರು. ಮರಣ ಸಮಯಕ್ಕೆ ಅವರಿಗೆ ೭೩ ವರ್ಷಗಳಾಗಿದ್ದವು.

## ವಿಜಾಪುರ

ಬಾಗಲಕೋಟೆಯ ಬಸವೇಶ್ವರ ಕಾಲೇಜಿಗೆ ಕಲಾದಗಿ ಚರಪಟ್ಟಾಧ್ಯಕ್ಷರಾದ ಘನಲಿಂಗ ಚಕ್ರವರ್ತಿ ಶ್ರೀ ಗುರುಲಿಂಗಮಹಾಸ್ವಾಮಿಗಳವರು ವಿದ್ಯಾರ್ಥಿ ನಿಲಯ ಕಟ್ಟಿಸಲು ೨೫೦೦೦ ರೂಪಾಯಿಗಳನ್ನು ತಾವು ಸ್ವತ: ಮತ್ತು ಭಕ್ತರಿಂದ ಕೂಡಿಸಿ ಕೊಡುವದಾಗಿ ಆಶೀರ್ವದಿಸಿದರು. ಈಗಾಗಲೆ ಕೆಲ ಹಣವನ್ನೂ ಕೊಟ್ಟರುವರು.

ಬಾಸಬಾಗದಲ್ಲಿ ಕಳೆದ ತಿಂಗಳು ಕೊನೆಯಲ್ಲಿ ಶ್ರೀ ಜೀವಣರಾವ ಯಾಳಗಿ ಇವರ ಅಧ್ಯಕ್ಷತೆಯಲ್ಲಿ ಮಾರಾಟಕರದಿಂದ ನೇಕಾರರಿಗೆ ಆಗುವ ಹಾನಿಯನ್ನು ಕುರಿತು ವಿಚಾರ ಮಾಡಲು ಸಭೆ ಸೇರಿತ್ತು. ಕೈಮಗ್ಗದಿಂದ ಅರಿವೆ ಮಾಡುವವರಿಗೆ ಸರಕಾರದವರು ಪ್ರೋತ್ಸಾಹ ಕೊಡಬೇಕೆಂದೂ ಕೈಮಗ್ಗದ ಬಟ್ಟೆಗಳಿಗೆ ಬೇಕಾಗುವ ಕಚ್ಚಾಮಾಲಿನ ಮೇಲೆ ಕರ ಹೇರಬಾರದೆಂದೂ ಕೇಳಿಕೊಳ್ಳುವ ಭಾಷಣಗಳಾದವು.

## ದಕ್ಷಿಣ ಕನ್ನಡ

ಮದ್ರಾಸು ಸರಕಾರದ ವಿದ್ಯಾ ಮಂತ್ರಿಗಳಾದ ಮಾನ್ಯ ಟಿ. ಎಸ್. ಅವಿನಾಶಿಲಿಂಗಂ ಚೆಟ್ಟಿಯಾರರು ದಿನಾಂಕ ೨ ರಂದು ಸಂಜೆಗೆ ಮಂಗಳೂರಿಗೆ ಬಂದಿದ್ದು ಮುಂದಿನ ೨ ದಿನಗಳಲ್ಲಿ ಜಿಲ್ಲೆಯಲ್ಲಿ ಸಂಚರಿಸಿ ಮರಳಿ ಮದ್ರಾಸಿಗೆ ಹೋದರು.


ಮಂಗಳೂರಿನ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಹೊಸ ಕಟ್ಟಡದ ದಿನಾಂಕ ೨ ರಂದು ಶಂಕುಸ್ಥಾಪನೆಯನ್ನು ಮಾಡುತ್ತ "ನಮ್ಮ ಸಂಸ್ಕೃತಿಯನ್ನು ಕಾಪಾಡಿದವರೇ ಮಹಿಳೆಯರು. ಸ್ವರಾಜ್ಯವನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸಬಲ್ಲ. ಜನಾಂಗವನ್ನು ನಿರ್ಮಿಸುವ ಮಾತೆಯರಿಗೆ ತಕ್ಕ ಶಿಕ್ಷಣವೀಯಲು ಮದ್ರಾಸು ಸರಕಾರವು ಆಲೋಚಿಸುತ್ತಿದೆ"ಯೆಂದು ಹೇಳಿ ಜನರ ಸಹಕಾರವನ್ನು ಕೋರಿದರು.

ಉಡುಪಿಯಲ್ಲಿ ಕರ್ನಾಟಕ ವಿದ್ಯಾಲಯ ಹೈಸ್ಕೂಲಿನ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ದಿನಾಂಕ ೪ ರಂದು ಮಾಡಿದರು. ಆಗ ಆ ಸಂದರ್ಭದಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಭಾವಚಿತ್ರವೊಂದರ ಅನಾವರಣವನ್ನೂ ಮಂತ್ರಿಗಳ ಹಸ್ತದಿಂದ ಮಾಡಿಸಲಾಯಿತು.


ಮಂಗಳೂರಿನ ಕೇಂದ್ರ ಬಯಲಲ್ಲಿ ದಿನಾಂಕ ೪ ರಂದು ಸಂಜೆ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಾತಾಡುತ್ತ ಕಾಂಗ್ರೆಸ್ ಮಂತ್ರಿಗಳ ಆಡಳಿತ ಧೋರಣೆಯನ್ನು ವಿವರಿಸಿದರು. "ಪಾನನಿರೋಧದಿಂದ ಸರಕಾರಕ್ಕೆ ೧೮ ಕೋಟಿ ರೂ. ನಷ್ಟವಾದರೂ ಬಡವರಲ್ಲಿ ೭೨ ಕೋಟಿ ರೂಪಾಯಿಗಳ ಉಳಿತಾಯವಾದುದರಿಂದ ಸರಕಾರವು ಈ ಯೋಜನೆಯನ್ನು ಕೈಕೊಂಡಿದೆಂದು ಹೇಳಿದರು. ಉತ್ಪಾದನೆಗೆ ನೆರವಾಗುವುದೇ ಇಂದಿನ ದೇಶಭಕ್ತಿಯೆಂದು ಸಾರಿದರಲ್ಲದೆ ಮಂಗಳೂರಿನ ನಾಗರಿಕರ ಶಿಕ್ಷಣ ಮತ್ತು ಸಾಂಸ್ಕೃತಿಕ ಮುನ್ನಡೆಗಾಗಿ ಅವರನ್ನು ಶ್ಲಾಘಿಸಿದರು.

ಮಂಗಳೂರು ಪೌರ ಸಮಿತಿಯ ಸಾಮಾನ್ಯ ಸಭೆಯು ಕಳೆದ ವಾರ ಶ್ರೀ ಧಿ. ಗಂಗಾಧರ ದಾಸರ (ಉಪಾಧ್ಯಕ್ಷ) ಅಧ್ಯಕ್ಷತೆಯಲ್ಲಿ ಜರುಗಿದಾಗ ಮಂಗಳೂರಿನ ಭಗಿನಿ ಸಮಾಜದವರಿಗೆ ೧೦೦೦ ರೂಪಾಯಿಗಳನ್ನು ಜಿಲ್ಲಾ ಹರಿಜನ ಸೇವಕ ಸಂಘಕ್ಕೆ ೩೦೦ ರೂಪಾಯಿಗಳನ್ನು ಮಂಜೂರು ಮಾಡಲಾಯಿತು.

ಪಾದೆಬೆಟ್ಟಿನ ಗ್ರಾಮೋದ್ಧಾರ ಸಂಘದ ಆಶ್ರಯದಲ್ಲಿ ಮಂತ್ರಿವರ ಶ್ರೀ ವಲ್ಲಭಭಾಯಿಯವರ ೭೪ನೇ ಜನ್ಮದಿನವು ಅಲ್ಲಿನ ಶ್ರೀ ಶಾರದಾಭವನ ಎಲಿಮೆಂಟರೀ ಶಾಲೆಯಲ್ಲಿ ಶ್ರೀ. ಕೆ. ಶ್ರೀನಿವಾಸ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು.



ರಾ. ಸಾ. ಬಿ. ಪಿ. ತಂಬದ
(ಅಧ್ಯಕ್ಷರು)



ಶ್ರೀ. ಬಿ. ಆರ್. ಕುಲಕರ್ಣಿ
(ಉಪಾಧ್ಯಕ್ಷರು)

ಹೊಸದಾಗಿ ಆರಿಸಲ್ಪಟ್ಟ ಹುಬ್ಬಳ್ಳಿ ನಗರ ಸಭೆಯ ಪ್ರಥಮ ಸಭೆಯು ತಾ. ೫-೧೧-೪೮ ನೆಯ ದಿನ ಸಾಯಂಕಾಲ ೪ ಗಂಟೆಗೆ ಸೇರಿ ರಾವಸಾಹೇಬ ಬಿ. ಪಿ. ತಂಬದ ಇವರು ಅಧ್ಯಕ್ಷರಾಗಿಯೂ ಶ್ರೀ ಕುಲಕರ್ಣಿ ಇವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

---

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಬೆಳಗಾವಿ ಇದರ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನ ೨೬ಕ್ಕೆ ಶ್ರೀ ಕೆ. ಎಸ್. ಪಾಟೀಲರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ವಿದ್ಯಾಪೀಠದ ವಿದ್ಯಾರ್ಥಿ ಸಂಘವು ಸ್ಥಾಪಿತವಾಯಿತು. ವಿದ್ಯಾಪೀಠಕ್ಕೆ ಸರಕಾರವು ಬೇಗ ಮನ್ನಣೆ ಕೊಡಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಯಾಯಿತು.

ಶಹಾಪುರದಲ್ಲಿಯ ಆಚಾರ್ಯಗಲ್ಲಿಯಲ್ಲಿಯ ಶ್ರೀ ಮಂಜೇಶ ನಾರಾಯಣ ಕೇರಕರ ಇವರ ಮನೆಯಲ್ಲಿ ೩ ಪಿಸ್ತೂಲು ಮತ್ತು ಕಾಡತೂಸುಗಳು ದೊರೆತವು. ಇವರಲ್ಲಿ ದೊರೆತ ಕಾಗದ ಪತ್ರಗಳಿಂದ ಇವರು ರಾ. ಸ್ವ. ಸಂಘದ ಕಾರ್ಯಕರ್ತರಿರುವರೆಂದು ಗೊತ್ತಾಗುತ್ತದೆ. ಹಳೆ ಬೆಳಗಾವಿ ಬಾಂಬಿನ ಖಟ್ಲೆಯಲ್ಲಿಯ ಫರಾರಿ ಆರೋಪಿ ಇವರೆಂದೂ ತಿಳಿಯುತ್ತದೆ.

ಮಿರಜಿ, ಸಾಂಗಲಿ, ಜಮಖಂಡಿ ಮುಧೋಳ ಅಥಣಿ ವಿಭಾಗಗಳು ಕೂಡಿ ಹೊಸ ಪಿ.ಡಬ್ಲ್ಯು.ಡಿ. ವಿಭಾಗವನ್ನುಮಾಡಿದ್ದು ಅದಕ್ಕೆ ಶ್ರೀ ಎ. ಸಿ. ಅಡಕೆಯವರನ್ನು ಎಕ್ಸಿಕ್ಯೂಟಿವ್ ಎಂಜಿನಿಯರರನ್ನಾಗಿ ನೇಮಿಸಿದೆ.

## ಬೆಳಗಾಂವಿ

ಬೆಳಗಾವಿಯಲ್ಲಿ ಶ್ರೀ. ವೆಂಕರಡ್ಡಿ ಹೂಲಿ, ಡಾಕ್ಟರ ಜಯದೇವ ಕುಲಕರ್ಣಿ, ನಾನಾಸಾಹೇಬ ಜೋಶಿ ಮೊದಲಾದವರು ಕೂಡಿ ವೃತ್ತಪತ್ರ ಹೊರಡಿಸುವ ಉದ್ದೇಶದಿಂದ ಸರ್ವೋದಯ ಎಂಬ ಮುದ್ರಣಾಲಯವೊಂದನ್ನು ತೆರೆದಿದ್ದು ಅದರ ಪ್ರಾರಂಭೋತ್ಸವ ೨೫ಕ್ಕೆ ಜರುಗಿತು.

ಸಾತಾರೆಗೆ ನ್ಯಾಯಾಧೀಶರಾಗಿ ನೇಮಕ ಹೊಂದಿದ ಶ್ರೀ ವಿ. ಎ. ನಾಯಕ ಗಳತಗೇ ಇವರನ್ನು ಕರ್ನಾಟಕ ಲಾ ಸೊಸಾಯಿಟಿ ಪರವಾಗಿ ಬೀಳ್ಕೊಡುವ ಸಮಾರಂಭ ೫ ನೇ ತಾರೀಕಿಗೆ ಜರುಗಿತು. ಶ್ರೀ ಮುಜುಮುದಾರರು ಅಧ್ಯಕ್ಷಸ್ಥಾನದಿಂದ ಮಾತಾಡುತ್ತ ಶ್ರೀ ನಾಯಕರ ಗುಣವರ್ಣನ ಮಾಡಿದರು. ನಾಯಕರು ಸಮಯೋಚಿತ ಉತ್ತರ ಕೊಟ್ಟನಂತರ ಸಮಾರಂಭ ಕೊನೆಗಂಡಿತು.

## ಉತ್ತರ ಕನ್ನಡ

ಕುಮಟೆಯಲ್ಲಿ ಕಳೆದ ಕಸಾಪದವರು ನೀರಾ [illegible] ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಮೊದಲನೆ ದಿನ ಶ್ರೀ. ಹ. ಸಾಂಜಕರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ [illegible] ಸಂಘಟನೆಗಳ ವಿಷಯವಾಗಿ ಭಾಷಣಗಳಾದವು. ಮರುದಿನ ಡಾ. ಗೋ. ಸಾಂಜಕರರ ಅಧ್ಯಕ್ಷತೆಯಲ್ಲಿ ಸೇರಿ ಖಾದಿಯ ಮಹತ್ವದ ಬಗ್ಗೆ ಭಾಷಣಗಳಾದವು. ರಾತ್ರಿ ವಿವಿಧ ವಿನೋದಾವಳಿಗಳು ನಡೆದವು.

ಮುಂಬಯಿ ಸರಕಾರದವರು ಉತ್ತರ ಕನ್ನಡ ಜಿಲ್ಲೆಗಾಗಿ ೫೦೦ ಟನ್ನ ಅಕ್ಕಿಯನ್ನು ಮಂಜೂರು ಮಾಡಿದ್ದು ಇಷ್ಟರಲ್ಲಿಯೇ ಅದು ಬರಲಿದೆ. ಜಿಲ್ಲೆಯಲ್ಲಿ ಒಟ್ಟಿಗೆ ಈಗ ೧೬೬ ಅಗ್ಗದರದ ಅಂಗಡಿಗಳಿವೆ.

ಶಿರಸಿಯ ವೈದ್ಯರಾದ ಶ್ರೀ. [illegible] ನೀಲಕಂಠರಾವ ಪಟವರ್ಧನ ಇವರಿಗೆ ಬೆಳಗಾವಿಯಲ್ಲಿ ಕೂಡಿದ ಆಯುರ್ವೇದ ವೈದ್ಯ ಸಮ್ಮೇಲನದ ಅಂಗವಾಗಿ ಇಡಲ್ಪಟ್ಟ ವೈದ್ಯಕ ಪ್ರದರ್ಶನದಲ್ಲಿ ವಿವಿಧ ಔಷಧಿಗಳಿಗಾಗಿ ಮತ್ತು ಅವರು ಬರೆದ ಗ್ರಂಥಗಳಿಗಾಗಿ ಸುವರ್ಣ ಪದಕ ಹಾಗೂ ಪ್ರಮಾಣಪತ್ರ ಕೊಡಲಾಯಿತು.

ಮಾರ್ಮಗೋವಾ ಕೊಚಿನ ಮಧ್ಯದಲ್ಲಿ ಆಳವಾದ ಬಂದರವೊಂದನ್ನು ಕಟ್ಟಲು ಬಂದರ ಸಮಿತಿಯವರು ಕೊಟ್ಟ ಸೂಚನೆಗನುಗುಣವಾಗಿ ಮುಂಬಯಿ ಸರಕಾರದವರು ಕಾರವಾರ ಭಟಕಳ ಬಂದರಗಳ ಬಗ್ಗೆ ಸಂಶೋಧನ ಕಾರ್ಯವನ್ನು ಕೈಕೊಳ್ಳಲು ಹಿರ್ಯ ವಿಶೇಷ ಇಂಜನಿಯರರನ್ನು ನೇಮಿಸಲಿರುವರೆಂದು ತಿಳಿಯುತ್ತದೆ. ಮಂಗಳೂರು ಬಂದರ ಸಂಶೋಧನ ಕಾರ್ಯವನ್ನು ಈಗಾಗಲೆ ಮದ್ರಾಸ ಸರಕಾರ ಕೈಕೊಂಡಿದೆ.

ಕಾರವಾರ ತುರಂಗಕ್ಕೆ ಈ ಮೊದಲು ೧೦೦ ರಜಾಕಾರ ಕೈದಿಗಳನ್ನು ಮತ್ತೆ ತಂದಿದ್ದು ಈಗ ಎರಡು ನೂರು ರಜಾಕಾರ ಕೈದಿಗಳನ್ನು ತಂದಿರುವರೆಂದು ತಿಳಿಯುತ್ತದೆ. ಈ ಎಲ್ಲ ಕೈದಿಗಳು ಚಿಕ್ಕವಯಸ್ಸಿನ ತರುಣರಿರುವರು.

## ಕನ್ನಡ ಸಂಸ್ಥಾನ

ಕೊಲ್ಹಾಪುರ ಸಂಸ್ಥಾನದ ಆರ್ಥಿಕ ಪರಿಸ್ಥಿತಿಯನ್ನು ನಿರೀಕ್ಷಿಸಿ ವರದಿ ಮಾಡಲು ಕೇಂದ್ರ ಸರಕಾರದವರು ಶ್ರೀ. ಜೆ. ಮಯೂಳರನ್ನು ನಿಯಮಿಸಿರುವರು. ಸಂಸ್ಥಾನದ ಆಡಳಿತೆಯನ್ನು ಸಾಗಿಸುವದಕ್ಕಾಗಿ ಕೇಂದ್ರ ಸರಕಾರದವರು ೨ ಕೋಟಿ ರೂಪಾಯಿಗಳನ್ನು ಸಾಲ ಕೊಡಬೇಕೆಂದು ಕೇಳಿಕೊಳ್ಳಲಾಗಿದ್ದು ಆರ್ಥಿಕ ಪರಿಸ್ಥಿತಿಯ ನಿರೀಕ್ಷಣೆಯಾದನಂತರ ಸರಕಾರದವರು ಆ ಬಗ್ಗೆ ವಿಚಾರ ಮಾಡುವರಂತೆ.

ಮೈಸೂರು ಸರಕಾರದವರು ಶಿಕ್ಷಣ ಕೊಡುವ ಶಾಲೆಯನ್ನು ಇಲ್ಲಿಂದ ೯ ಮೈಲಿನ ಮೇಲೆ ಇರುವ ಜಕ್ಕೂರಲ್ಲಿ ಸ್ಥಾಪಿಸಲು ನಿಶ್ಚಯಿಸಿದ್ದು ಇದರ ಉದ್ಘಾಟನವನ್ನು ಹಿಂದುಸ್ಥಾನದ ಮುಖ್ಯಮಂತ್ರಿ ಪಂಡಿತ ಜವಾಹರಲಾಲರು ಡಿಸೆಂಬರ ತಿಂಗಳಲ್ಲಿ ನೆರವೇರಿಸಲಿರುವರು.

ಯಳಂದೂರ ತಾಲೂಕಿನ ಅಂಬಳೆಯಲ್ಲಿ ಕಳೆದ ವಾರ ಪರಿವಾರ ಪಂಗಡದವರು ಲಿಂಗಾಯತ ಪಂಗಡದವರ ಮೇಲೆ ಹಲ್ಲೆ ಮಾಡಿದ್ದರ ಸಂಬಂಧದಲ್ಲಿ ಪೋಲೀಸರು ೪೪ ಜನ ಪರಿವಾರದವರನ್ನು ಬಂಧಿಸಿ ವಿಚಾರಣೆಗೆ ಗುರಿ ಮಾಡಿದ್ದಾರೆ.

ಕವಲೂರಿನ ಕಾಂಗ್ರೆಸ ಕಾರ್ಯಕರ್ತರಾದ ಶ್ರೀ ಮರಿಯಪ್ಪಗೌಡಾ ಪಾಟೀಲ ಹಾಗು ನಾರಾಯಣಗೌಡಾ ಪಾಟೀಲ ಇವರು ಬಂಧಿಸಲ್ಪಟ್ಟು ಪೋಲೀಸ ಸ್ಟೇಶನದಲ್ಲಿ ಇಡಲ್ಪಟ್ಟಿದ್ದಾರೆ. ಆಯುಧಗಳನ್ನು ಇಟ್ಟುಕೊಂಡ ಬಗ್ಗೆ ಇವರನ್ನು ಬಂಧಿಸಲಾಗಿದೆಯೆಂದು ತಿಳಿಯುತ್ತದೆ.

ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳ ಸ್ಥಳಕ್ಕೆ ಮೈಸೂರಿನ ಹೊರಗಿನವರನ್ನು ನೇಮಿಸುವ ಸಂಭವವಿದೆಯೆಂದು ತಿಳಿಯುತ್ತದೆ.

ಹಿಂದುಸ್ಥಾನದ ಘಟನಾ ಸಮಿತಿಯಲ್ಲಿ ಈಗ ಚರ್ಚೆಗಿರುವ ಘಟನಾ ಕರಡಿನಲ್ಲಿ ಪ್ರಾಂತಗಳಿಗೆ ಸೂಚಿಸಲಾದ ಘಟನೆಯನ್ನೆ ಒಪ್ಪಿಕೊಂಡು ಮೈಸೂರು ಘಟನಾ ಸಮಿತಿಯನ್ನು ವಿಸರ್ಜಿಸಲಾಗುವದೆಂದು ತಿಳಿಯುತ್ತದೆ.

ಭದ್ರಾ ಮಂಡಳದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಹೋಗಿದ್ದ ಮೈಸೂರು ದಿವಾನ ಸರ್ ರಾಮಸ್ವಾಮಿ ಮುದಲಿಯಾರರು ಬೆಂಗಳೂರಿಗೆ ಹಿಂತಿರುಗಿದರು.

# ಹಿಂದುಸ್ತಾನ

## ಮುಂಬಯಿ

ಮುಂಬಯಿಯ ಮುಖ್ಯ ನ್ಯಾಯಾಧೀಶರಾದ ಶ್ರೀ. ಎಂ. ಸಿ. ಛಗಲಾ ಅವರು ದರ್ ಸಮಿತಿಯ ಎದುರು ವೈಯಕ್ತಿಕವಾಗಿ ಸಾಕ್ಷಿ ನುಡಿಯುತ್ತ ಭಾಷಾನುಗುಣ ಪ್ರಾಂತೀಕರಣವನ್ನು ವಿರೋಧಿಸಿದರೆಂದು ತಿಳಿಯುತ್ತದೆ.

ದಿಲ್ಲಿಗೆ ಹೊರಡುವ ಮೊದಲು ಕೆಲ ತಾಸು ಪಂ. ಜವಾಹರಲಾಲರು ಮುಂಜಾನೆ ಮುಂಬೈಯಲ್ಲಿ ತಂಗಿದ್ದರು. ಮುಂಬಯಿಯಲ್ಲಿಯೂ ಅವರನ್ನು ಸಂಭ್ರಮದಿಂದ ಸ್ವಾಗತಿಸಲಾಯ್ತು. ಮುಂಬಯಿ ಗವರ್ನರರು, ಗೃಹ ಮಂತ್ರಿ ಶ್ರೀ ಮುರಾರಜಿ ದೇಸಾಯಿಯವರು, ಮುಂಬಯಿ ಪ್ರಾಂತೀಯ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ. ಎಸ್. ಕೆ. ಪಾಟೀಲರೇ ಮೊದಲಾದವರು ವಿಮಾನ ನಿಲ್ದಾಣಕ್ಕೆ ಬಂದಿದ್ದರು.

ಭಾಷಾನುಗುಣ ಪ್ರಾಂತ ರಚನೆಗೆ ತಮ್ಮ ವಿರೋಧವಿದೆಯೆಂದು ಸರ್ ವಿಠ್ಠಲ ಚಂದಾವರಕರರು ದರ್ ಸಮಿತಿಯ ಎದುರು ಸಾಕ್ಷಿ ಕೊಡುತ್ತ ಹೇಳಿದರಾಗಿ ತಿಳಿಯುತ್ತದೆ. ಒಂದು ವೇಳೆ ಮಹಾರಾಷ್ಟ್ರ ಪ್ರಾಂತ ರಚಿಸುವದಾದರೆ ಮುಂಬಯಿ ನಗರವು ಮಹಾರಾಷ್ಟ್ರಕ್ಕೆ ಸೇರತಕ್ಕದೆಂದು ಹೇಳಿದಂತೆಯೂ ವರದಿಯಾಗಿದೆ.

ಮುಂಬಯಿ ಪ್ರಾಂತಿಕ ಸಮಿತಿಯ ಸದಸ್ಯರಾದ ಶ್ರೀ. ಪಿ. ಆರ್. ಲೇಲೆಯವರು ದರ್ ಸಮಿತಿಯ ಎದುದುರು ವೈಯಕ್ತಿಕವಾಗಿ ಸಾಕ್ಷಿ ನುಡಿಯುತ್ತ ಭಾಷಾವಾರ ಪ್ರಾಂತೀಕರಣದ ತತ್ವವನ್ನು ಕೂಡಲೇ ಒಪ್ಪಬೇಕೆಂದೂ ಇದರ ಪ್ರತೀಕವೆಂದು ಮೊದಲು ಕರ್ನಾಟಕ ಪ್ರಾಂತ ರಚನೆಯನ್ನು ಮಾಡಿ ಆಡಳಿತದ ಅನುಕೂಲತೆಗಾಗಿ ಬೇಕಾದರೆ ಉಳಿದ ಪ್ರಾಂತಗಳ ರಚನೆಯನ್ನು ೫ ವರ್ಷ ಮುಂದೂಡಬಹುದೆಂದೂ ಹೇಳಿದರು.

ಮುಂಬಯಿ ಪ್ರಾಂತಿಕ ಕಾಂಗ್ರೆಸ ಸಮಿತಿಯವರು ಇದೇ ತಾ.೧೪ಕ್ಕೆ ಬರುವ ಪಂಡಿತ ಜವಾಹರಲಾಲ ನೆಹರು ಅವರ ೬೦ನೆಯ ವರ್ಧಂತಿಯನ್ನು ಉತ್ಸವ ಪೂರ್ಣವಾಗಿ ಆಚರಿಸಬೇಕೆಂದು ನಿರ್ಧರಿಸಿ ಇದಕ್ಕಾಗಿ ಒಂದು ಉಪಸಮಿತಿಯನ್ನು ನೇಮಿಸಿದ್ದಾರೆ.

ಮುಂಬಯಿ ಸರಕಾರ ಮಂತ್ರಿಗಳಾದ ಶ್ರೀ. ಗುಲಝಾರಿಲಾಲ ನಂದಾರು ಒಂದು ಪತ್ರಿಕಾ ಪರಿಷತ್ತಿನಲ್ಲಿ ಮುಂಬಯಿ ನಗರದ ೬ ಲಕ್ಷ ೬೬ ಸಾವಿರ ನಿರಕ್ಷರರನ್ನು ಸಾಕ್ಷರರನ್ನಾಗಿ ಮಾಡುವ ಬಗ್ಗೆ ಸಿದ್ಧಪಡಿಸಿದ ೫೫ ಲಕ್ಷ ರೂ. ಗಳ ಯೋಜನೆಯನ್ನು ವಿವರಿಸಿದರು.

ಮುಂಬಯಿ ಪ್ರಾಂತದಲ್ಲಿ ಬಟ್ಟೆಯ ಹಂಚಿಕೆಯ ಯೋಜನೆಯು ಡಿಸೆಂಬರ ತಾ.೧ ರಿಂದ ಜಾರಿಯಲ್ಲಿ ಬರುವದೆಂದು ಪೂರೈಕೆ ಮಂತ್ರಿ ಶ್ರೀ ದಿನಕರರಾವ ದೇಸಾಯರು ಒಂದು ಸಂದರ್ಶನದಲ್ಲಿ ಹೇಳಿದರು. ಮುಂಬಯಿ, ಅಹಮದಾಬಾದ, ಪುಣೆ, ಸೊಲ್ಲಾಪುರಗಳಲ್ಲಿ ಒಬ್ಬನಿಗೆ ೩೦ ಗಜ, ಉಳಿದ ಪಟ್ಟಣಗಳಲ್ಲಿ ೧೮ ಗಜ, ಹಳ್ಳಿಗಳಲ್ಲಿ ೧೩ ಗಜ ಹೀಗೆ ಅರಿವೆ ದೊರೆಯುವದಾಗಿ ಅರುಹಿದರು.

## ಸಂಯುಕ್ತಪ್ರಾಂತ

ಭಾರತದ ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರ ೭೪ನೆಯ ವರ್ಧಂತಿಯ ನೆನಪಿಗಾಗಿ ಅಭಿನಂದನ ಗ್ರಂಥ ಎಂಬ ಪುಸ್ತಕ ಒಂದನ್ನು ಅವರಿಗೆ ಸಮರ್ಪಿಸಬೇಕೆಂದು ನಿರ್ಣಯಿಸಲಾಗಿದೆ. ಸಂಯುಕ್ತ ಪ್ರಾಂತದ ಮಂತ್ರಿ ಸಂಪೂರ್ಣಾನಂದರೇ ಮೊದಲಾದವರ ಸಂಪಾದಕತ್ವದಲ್ಲಿ ಅದು ಪ್ರಸಿದ್ಧವಾಗಿದೆ. ಬಾಬು ಪುರುಷೋತ್ತಮದಾಸ ಟಂಡನ್ನರು ಇದಕ್ಕೆ ಮುನ್ನುಡಿ ಬರೆದಿದ್ದಾರೆ. ಸಂ. ಪ್ರಾಂತದ ಮುಖ್ಯ ಮಂತ್ರಿ ಶ್ರೀ. ಗೋವಿಂದವಲ್ಲಭ ಪಂತರು ಸ್ವಾಗತ ಸಮಿತಿಯ ಅಧ್ಯಕ್ಷರಿರುವರು.

## ಮದ್ರಾಸ

ದಕ್ಷಿಣ ಭಾಗದ ಮುಖ್ಯ ಸೇನಾಪತಿಗಳಾದ ಲೆ. ಜ. ರಾಜೇಂದ್ರ ಸಿಂಗಜಿಯವರು ತಾ.೫ ರಂದು ವಿಶೇಷ ವಿಮಾನದಿಂದ ಮದ್ರಾಸಿಗೆ ಬಂದರು. ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತ ಹೈದರಾಬಾದದಲ್ಲಿ ಶಾಂತಿ ಸುವ್ಯವಸ್ಥೆ ನೆಲಸಿದ್ದು ಶುಚೋದ್ಯತನ ಮಾಡುವ ಎಲ್ಲರನ್ನು ನಿಃಶಸ್ತ್ರಗೊಳಿಸಲಾಗಿದೆಯೆಂದು ಹೇಳಿದರು.

## ಹೊಸದಿಲ್ಲಿ

ದಿಲ್ಲಿಯ ಸರಕಾರೀ ಭವನದಲ್ಲಿ ಏರ್ಪಡಿಸಿದ ಹಿಂದೀ ಕಲಾ ವಸ್ತು ಪ್ರದರ್ಶನದ ಉದ್ಘಾಟನ ಮಾಡುತ್ತ ತಾ. ೬ ರಂದು ಗ. ಜ. ಶ್ರೀರಾಜಗೋಪಾಲಾಚಾರ್ಯರು. "ಕಲೆಯ ಪುನರುಜ್ಜೀವನಕ್ಕೆ ನಾವು ಸದದಯಾಂತಃಕರಣಿಗಳಾಗಬೇಕು, ಭಕ್ತಿಭಾವವುಳ್ಳವರಾಗಿರಬೇಕು; ಸತ್ಯೋಪಾಸಕರಾಗಿರಬೇಕು. ಉದಾತ್ತವಾದ ಜೀವನವಿಲ್ಲದೆ ಉಚ್ಚಮಟ್ಟದ ಕಲೆಯು ಸಾಧಿಸದು" ಎಂದು ಮೊದಲಾಗಿ ಹೇಳಿದರು. ಆಗ ಮುಖ್ಯ ಮಂತ್ರಿ ಪಂ. ಜವಾಹರಲಾಲರೂ, ವಿದೇಶದ ರಾಯಭಾರಿಗಳೂ ಉಪಸ್ಥಿತರಿದ್ದರು. ಈ ಪ್ರದರ್ಶನದಲ್ಲಿ ೫೦೦೦ ವರ್ಷ ಕಾಲಾವಧಿಯ ಬಗೆ ಬಗೆಯ ಶ್ರೇಷ್ಠ ಕಲಾವಸ್ತುಗಳಿವೆ.

ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ತಾ. ೬ ಮಧ್ಯಾಹ್ನ ವಿದೇಶದಿಂದ ದಿಲ್ಲಿಗೆ ಬಂದರು. ಅವರನ್ನು ಸ್ವಾಗತಿಸಲು ಪಾಲಂ ವಿಮಾನ ಗೃಹದಲ್ಲಿ ಗ. ಜ. ಶ್ರೀ ರಾಜಗೋಪಾಲಾಚಾರ್ಯರು ಉಪ ಮುಖ್ಯ ಮಂತ್ರಿ ಸರದಾರ ಪಟೇಲರು, ಕಾಂಗ್ರೆಸಿನ ನಿಯೋಜಿತ ಅಧ್ಯಕ್ಷ ಡಾ. ಪಟ್ಟಾಭಿಯವರು, ಸೈನ್ಯಾಧಿಕಾರಿಗಳು ವಿದೇಶದ ರಾಯಭಾರಿಗಳು ಆಗಮಿಸಿ ಮುಖ್ಯ ಮಂತ್ರಿ ಪಂ. ಜವಾಹರಲಾಲರು ವಿಮಾನದಿಂದ ಕೆಳಗಿಳಿದ ಕೂಡಲೇ ಅವರ ಕೊರಳೊಳಗೆ ಹಾರವನ್ನು ಹಾಕಿದರು.

ಆರ್.ಎಸ್.ಎಸ್. ಸಂಘವು ಲೋಕಸತ್ತಾತ್ಮಕ ಘಟನೆ ರಚಿಸಿಕೊಂಡು ಒಂದು ರಾಜಕೀಯ ಪಕ್ಷವಾಗಿ ಪ್ರಚಾರ ನಡೆಸಲು ಸಿದ್ಧವಿದ್ದರೆ ಅದರ ಮೇಲಿನ ನಿರ್ಬಂಧ ತೆಗೆಯಬಹುದೆಂದು ಸರಕಾರದ ಪರವಾಗಿ ತಿಳಿಸಲಾಯಿತೆಂದೂ ಅದರೆ ಸಂಘದ ಪ್ರಮುಖರಾದ ಶ್ರೀ ಗೋಳವಲಕರರು ಅದಕ್ಕೆ ಒಪ್ಪದ್ದರಿಂದ ಮಾತುಕತೆಗಳು ಮುರಿದವೆಂದೂ ತಿಳಿಯುತ್ತದೆ.

ರಾ. ಸ್ವ. ಸೇ. ಸಂಘದ ಸರ ಸಂಘಚಾಲಕರಾದ ಶ್ರೀ ಗೋವಳಕರ ಗುರೀಜಿಯವರ ಮೇಲೆ ದಿಲ್ಲಿ ಮ್ಯಾಜಿಸ್ಟ್ರೇಟರು, ದಿಲ್ಲಿ ನಗರ ಸಭೆಯ ಹದ್ದು ಬಿಟ್ಟು ಹೋಗಕೂಡದೆಂದು ಅಪ್ಪಣೆ ವಿಧಿಸಿದ್ದಾರೆ.

ಘಟನಾ ಸಮಿತಿಯು ಕಾಂಗ್ರೆಸ ಪಕ್ಷದ ವಿಶೇಷ ಸಭೆಯು ತಾ. ೭ ರಂದು ಡಾ. ಪಟ್ಟಾಭಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಆಗ ಪಂ. ಜವಾಹರಲಾಲರು ತಮ್ಮ ಯುರೋಪ ಪ್ರವಾಸದ ವಿಷಯವನ್ನು ತಿಳಿಸಿದ್ದಲ್ಲದೆ ತಾವು ಕಾಮನ್‌ವೆಲ್ಥ ಪರಿಷತ್ತಿನಲ್ಲಿಯೂ ಪ್ಯಾರಿಸದಲ್ಲಿಯೂ ಮಾಡಿದ ಕಾರ್ಯವನ್ನು ವಿವರಿಸಿದರು.

ಪಾಕಿಸ್ತಾನದ ಹಾಯಕಮಿಶನರರಾದ ಶ್ರೀ ಪ್ರಕಾಶಂ ಅವರು ಕಲಕತ್ತಾದಿಂದ ಬನಾರಸಕ್ಕೆ ಹೋಗುವಾಗ ತಮ್ಮ ವಸ್ತುಗಳನ್ನು ಕಳೆದುಕೊಂಡಿದ್ದರು. ಆ ಬಗ್ಗೆ ಈಗ ಒಂದು ವಿಚಿತ್ರ ಬಂದಿದೆ. ಇಂತಹ ದೊಡ್ಡ ವ್ಯಕ್ತಿ ಕಳವಿಗೆ ಗುರಿಯಾದದ್ದಕ್ಕೆ ವಿಷಾದ ವ್ಯಕ್ತಪಡಿಸಿ ನಿರ್ದಿಷ್ಟ ಸ್ಥಾನದಿಂದ ಆ ವಸ್ತುಗಳನ್ನೆಲ್ಲ ಒಯ್ಯಬೇಕೆಂದು ಪತ್ರ ಬರೆದ ವ್ಯಕ್ತಿ ತಿಳಿಸಿದೆ. ಕಳೆದುಕೊಂಡ ವಸ್ತುಗಳಲ್ಲಿ ಕೆಲವು ಮಹತ್ವದ ಸರಕಾರೀ ಕಾಗದ ಪತ್ರಗಳಿದ್ದವು.

ರಜಪುತಾನದ ಪಶ್ಚಿಮದಲ್ಲಿರುವ ದಂತ ಎಂಬ ೩೧೦೦೦ ಜನಸಂಖ್ಯೆಯುಳ್ಳ ಸಂಸ್ಥಾನವು ತಾ. ೬ ರಂದು ಮುಂಬಯಿ ಪ್ರಾಂತದಲ್ಲಿ ಲೀನವಾಯಿತೆಂದೂ ಅದರ ನರೇಂದ್ರರು ವಿಲೀನೀಕರಣಕ್ಕೆ ಅಂಕಿತವಿಟ್ಟರೆಂದೂ ತಿಳಿಯುತ್ತದೆ.

ಅ. ಭಾ. ರೇಲ್ವೆ ಮಹಾ ಮಂಡಳದ ಬೇಡಿಕೆಗಳಿಗೆ ಸರಕಾರದಿಂದ ಬಂದ ಉತ್ತರವನ್ನು ಪರಿಶೀಲಿಸಲು ಮಹಾ ಮಂಡಳದ ಕಾರ್ಯ ಸಮಿತಿಯು ಮತ್ತು ಸಾಧಾರಣ ಮಂಡಳದ ಸಭೆಯು ನಾಗಪುರದಲ್ಲಿ ತಾ. ೨೩ ೨೪ಕ್ಕೆ ಕರೆಯಲಾಗಿದೆಯೆಂದು ಕಾಯದರ್ಶಿಗಳು ತಿಳಿಸುತ್ತಾರೆ.

---

ಪಾಟಣಾದಉಪನಗರವಾದ ಶಾಹಲಿಎಂಬಲ್ಲಿ ದೀಪಾವಳಿ ಪಗಡೆಯಾಟದ ಜಿದ್ದಿನಲ್ಲಿ ಸರ್ವಸ್ವವನ್ನೂ ಸೋತ ಒಬ್ಬ ಮುಸಲ್ಮಾನ ಗೃಹಸ್ಥನು ಕೊನೆಗೆ ತನ್ನ ಹೆಂಡತಿಯನ್ನೂ ಪಣಕ್ಕೆ ಹಚ್ಚಿ ಸೋತನೆಂದು ಸುದ್ದಿ ಬಂದಿದೆ. ಮುಂದ ಈ ಜೂಜುಗಾರನಿಗೆ ವಿನಾಯಿತೆಂಬುದು ಇನ್ನೂ ತಿಳಿದಿಲ್ಲ.

## ಹೈದರಾಬಾದ

ಹೈದರಾಬಾದದ ಒಬ್ಬ ಮೊಚ್ಚೆಗಾರನು ಮಿಲಿಟರಿ ಗವರ್ನರರ ಕಡೆಗೆ ದೂರಿಕೊಂಡು ಹಿಂದಿನ ಅರ್ಥ ಮತ್ತು ವಿದೇಶ ಮಂತ್ರಿಗಳಾದ ಮೊಯಿನ ನವಾಜ ಜಂಗರು ರಹಸ್ಯವಾಗಿ ಪ್ಯಾರಿಸಿಗೆ ಹೋಗುವ ಮೊದಲು ೯ ಜೋಡು ಬೂಟುಗಳನ್ನು ಮಾಡಿಸಿಕೊಂಡಿದ್ದು ೬ ನೂರು ರೂಪಾಯಿಗಳನ್ನು ಕೊಡಬೇಕಾಗಿದೆಯೆಂದು ಹೇಳಿಕೊಂಡಿದ್ದಾನೆಂದು ತಿಳಿಯುತ್ತದೆ. ಇದರಂತೆ ಹೈದರಾಬಾದದ ಮನೆ ಕೈಗಾರಿಕೆ ಶಾಖೆಯ ಅಧಿಕಾರಿಗಳೂ ದೂರಿ, ಮೊಯಿನ ನವಾಜ ಜಂಗರು ಪ್ಯಾರಿಸಿಗೆ ಹೋಗುವ ಮೊದಲು ೩ ಸಾವಿರ ರೂ. ಬೆಲೆಯ ಕೈಗಾರಿಕೆಯ ಸುಂದರ ಹಾಗು ಕೌತುಕದ ಒಡವೆಗಳನ್ನು ಒಯ್ದಿದ್ದಾಗಿ ಮಿಲಿಟರಿ ಗವರ್ನರರಿಗೆ ಅರಿಕೆ ಮಾಡಿಕೊಂಡಿದ್ದಾರೆ.

ಹೈದರಾಬಾದದಲ್ಲಿ ಸರಕಾರಿ ಕಚೇರಿ ಮತ್ತು ನಿಜಾಮರ ಅರಮನೆಗೆ ಈ ವರೆಗೆ ಕಾವಲುಗಾರರಾಗಿದ್ದ ಅರಬರನ್ನು ತೆಗೆದು ಅವರ ಸ್ಥಳದಲ್ಲಿ ಹಿಂದೀ ಸೈನಿಕರನ್ನು ನೇಮಿಸಲಾಗಿದೆಯೆಂದೂ ಅರಬರನ್ನು ಅರಬಸ್ತಾನಕ್ಕೆ ಕಳಿಸುವ ವ್ಯವಸ್ಥೆ ಮಾಡಲಾಗುವದೆಂದೂ ತಿಳಿಯುತ್ತದೆ.

ಹೈದರಾಬಾದ ಪೋಲಿಸ ಕ್ರಮ ಕೈಕೊಳ್ಳುವ ಮುನ್ನ ದಿನದ ಮಧ್ಯ ರಾತ್ರಿ ಸಪ್ಟೆಂಬರ ತಾ ೧೩ ಕ್ಕೆ ಸರದಾರ ವಲ್ಲಭಭಾಯಿ ಪಟೇಲರು ಗೌಪ್ಯವಾಗಿ ಸೊಲ್ಲಾಪುರಕ್ಕೆ ಹೋಗಿ ಹಿಂದೀ ಸೈನಿಕರನ್ನು ಹುರಿದುಂಬಿಸಿ ಆಶೀರ್ವದಿಸಿ ವಿಜಯಿಗಳಾಗಿ ಬನ್ನಿರೆಂದು ಹೇಳಿದರೆಂದು ತಿಳಿಯುತ್ತದೆ. ಆಗ ಅವರ ಪ್ರಕೃತಿ ಸರಿಯಾಗಿದ್ದಿಲ್ಲವಾದರೂ ತಮ್ಮ ಡಾಕ್ಟರರಿಗೂ ತಿಳಿಸದೆ ಸರದಾರರು ಬಂದು ಹೋದರೆಂದು ಗೊತ್ತಾಗುತ್ತದೆ.

ಮಿಲಿಟರಿ ಗವರ್ನರರಾದ ಮೇ. ಜ. ಚೌಧರಿಯವರು ಕಲಬುರ್ಗಿ, ಯಾದಗಿರಿ, ಝಹೀರಾಬಾದ, ಹುಮನಾಬಾದ, ರಾಯಚೂರ ಮೊದಲಾದಲ್ಲಿ ಸಂಚರಿಸಿ ಜಾತಿ ರಹಿತ ಸರಕಾರ ರಚಿಸುವದೇ ತಮ್ಮ ಉದ್ದೇಶವೆಂದೂ ಇದಕ್ಕೆ ಅಡ್ಡ ಬಂದವರನ್ನು ಯೋಗ್ಯ ಶಾಸನಕ್ಕೆ ಗುರಿಪಡಿಸಲಾಗುವದೆಂದೂ, ಈಗ ಶಾಂತಿ ಸುವ್ಯವಸ್ಥೆ ನೆಲಸಿದ್ದರಿಂದ ಜನರು ನಿರ್ಭೀತರಾಗಿ ಬಾಳುವೆ ಮಾಡಬೇಕೆಂದೂ ಹೋದಲ್ಲೆಲ್ಲ ಸಾರಿದರು.

ರಜಾಕಾರರ ಅತ್ಯಾಚಾರಕ್ಕೆ ಬೇಸತ್ತು ಓಡಿಹೋಗಿದ್ದ ಮತ್ತು ಈಗ ಮರಳಿ ತಮ್ಮ ಮನೆ ಮಾರೆಲ್ಲ ನಾಶವಾಗಿ ಹೋಗಿದ್ದರಿಂದ ನಿರಾಶ್ರಿತರಾದ ಜನರಿಗೆ ಮಿಲಿಟರಿ ಸರಕಾರವು ಪುನರ್ನಿವೇಶನದ ಏತ್ತುಗಡೆ ಮಾಡಿದೆಯೆಂದೂ ನೌಕರಿ ಕಳೆದುಕೊಂಡವರಿಗೆ ಮತ್ತೆ ನೌಕರಿ ಕೊಡುವ ವ್ಯವಸ್ಥೆಯನ್ನು ಮಾಡಿದೆಯೆಂದೂ ತಿಳಯುತ್ತದೆ.

ಹೈದರಾಬಾದದ ಹಿಂದಿನ ವಿದೇಶ ಮಂತ್ರಿ ಮೊಯಿನ ನವಾಜ ಜಂಗರು ತಾ. ೭ ರಂದು ಭದ್ರತಾ ಮಂಡಲದ ಅಧ್ಯಕ್ಷರಿಗೆ ಪತ್ರ ಬರೆದು ಹೈದರಾಬಾದದಲ್ಲಿ ಅಲ್ಪಸಂಖ್ಯಾಕರಾದ ಮುಸಲ್ಮಾನರ ಮೇಲೆ ದಬ್ಬಾಳಿಕೆ ನಡೆದಿದೆಯೆಂದೂ ಸರಕಾರಿ ನೌಕರಿಯಿಂದ ಮುಸಲ್ಮಾನರನ್ನು ಕಿತ್ತಿ ಪರಪ್ರಾಂತದಿಂದ ಹಿಂದು ಅಧಿಕಾರಿಗಳನ್ನು ತಂದು ನಿಯಮಿಸಲಾಗುತ್ತಿದ್ದೆಯೆಂದೂ ಬೇಗ ಹೈದರಾಬಾದದ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಂಡು ಮುಸಲ್ಮಾನರ ಮೇಲೆ ನಡೆದ ಅತ್ಯಾಚಾರವನ್ನು ತೊಲಗಿಸಬೇಕೆಂದೂ ಬೇಡಿಕೊಂಡಿದ್ದಾರೆಂದು ತಿಳಿಯುತ್ತದೆ.

## ಮಧ್ಯಪ್ರಾಂತ

ಮಧ್ಯಪ್ರಾಂತದ ಪೋಲೀಸರು ತಾ. ೪ ರಂದು ನಾಗಪುರದಲ್ಲಿ ಭಾರತದ ಉಪಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರಿಗೆ ಗಾಂಧೀಸ್ಮಾರಕ ನಿಧಿಗೆ ೧,೭೪,೪೫೬ ರೂ. ಗಳ ಹಮ್ಮಿಣಿಯನ್ನು ಅರ್ಪಿಸಿದರು. ಸರದಾರರು ಹಮ್ಮಿಣಿ ಸ್ವೀಕರಿಸುತ್ತ ಪೋಲೀಸರು ಮಾಡುತ್ತ ಬಂದ ಕಾರ್ಯವನ್ನು ಪ್ರಶಂಸಿಸಿ ಬಿಕ್ಕಟ್ಟಿನ ಪ್ರಸಂಗದಲ್ಲಿ ಮಧ್ಯಪ್ರಾಂತದ ಶಾಂತತೆ ಕಾಯ್ದ ಬಗ್ಗೆ ಅವರನ್ನು ಅಭಿನಂದಿಸಿದರು.

ತಾ. ೩ ರಂದು ನಾಗಪುರ ವಿಶ್ವವಿದ್ಯಾಲಯದವರು ಭಾರತದ ಉಪಮುಖ್ಯಮಂತ್ರಿ ಸರದಾರ ವಲ್ಲಭಭಾಯಿ ಪಟೇಲರಿಗೆ ಡಾಕ್ಟರ ಆಫ್ ಲಾ ಪದವಿಯನ್ನು ಕೊಟ್ಟು ಗೌರವಿಸಿದರು. ಈ ಬಗ್ಗೆ ಏರ್ಪಟ್ಟ ವಿಶೇಷ ಘಟಿಕೋತ್ಸವದಲ್ಲಿ ಮಾತನಾಡುತ್ತ, ಯುವಕರು ಹೊಣೆಯರಿತು ಹೆಜ್ಜೆ ಹಾಕಬೇಕೆಂದೂ ಗಳಿಸಿಕೊಟ್ಟ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬೇಕೆಂದೂ ನುಡಿದರು.

## ಸಂಸ್ಥಾನ ಸಮೀಕರಣದ ಕಲ್ಪನೆ

ಸರದಾರ ವಲ್ಲಭಭಾಯಿ ಪಟೇಲರು ನಾಗಪುರದಲ್ಲಿ ತಾ. ೪ ರಂದು ಪ್ರಾಂತಿಕ ಪರಿಸ್ಥಾ ಸಲಹೆ ಮಂಡಲವನ್ನು ಉದ್ಘಾಟಿಸುತ್ತ ಸಂಸ್ಥಾನಗಳ ಸಮೀಕರಣ ವಿಚಾರವು ತಮಗೆ ಹೇಗೆ ಹೊಳೆದಿತೆಂಬದನ್ನು ನಿರೂಪಿಸುತ್ತ ಹೀಗೆ ಹೇಳಿದರು.— "ನಾನು ಅಧಿಕಾರ ಸ್ವೀಕರಿಸಿದ ಕೆಲದಿನಗಳಲ್ಲಿ ವಿಪುಲ ನಿಸರ್ಗ ಸಂಪದದಿಂದ ಕೂಡಿದ ಬಸ್ತಾರ ಸಂಸ್ಥಾನವನ್ನು ಹೈದರಾಬಾದಕ್ಕೆ ದೀರ್ಘಾವಧಿ ಕರಾರಿನ ಮೇಲೆ ಕೌಲುಮಾಡಿಕೊಡುವ ಏತ್ತುಗಡೆ ನಡೆದಿದೆಯೆಂದೂ ಬಸ್ತಾರದ ನರೇಂದ್ರನು ಅಪ್ರಬುದ್ಧನೂ ಅಲ್ಪವಯಿಯೂ ಇದ್ದುದರಿಂದ ಆ ಸಂಸ್ಥಾನದ ಬ್ರಿಟಿಶ ಮುಖ್ಯ ಮಂತ್ರಿಯು ಒಳ್ಳೆ ಅವಸರದಿಂದ ಈ ಆಟ ಹೂಡಿದ್ದಾನೆಂದೂ ತಿಳಿದಿತು. ನಾನು ಅದು ಸರಿಯಲ್ಲವೆಂದೆ. ಅದಕ್ಕೆ ಪ್ರತಿರೋಧವುಂಟಾಗಲು ನಾನು ನಿಷ್ಠುರತೆಯಿಂದ, ನೀವು (ಬ್ರಿಟಿಶರು) ಹಿಂದುಸ್ತಾನದಿಂದ ಬೇಗ ಹೋಗತಕ್ಕವರಿರುವದರಿಂದ ಯಾವ ಕರಾರವನ್ನೂ ಮಾಡಿತೂಳ್ಳಬಾರದೆಂದು ತಿಳಿಸಿದೆ. ಆ ಮೇಲೆ ಆ ರಾಜಕುಮಾರನನ್ನು ಕರೆಯಿಸಿಕೊಂಡು ತಿಳಿಹೇಳಿದೆ. ಹಿಂದುಸ್ತಾನವನ್ನು ಪ್ರಬಲ ರಾಷ್ಟ್ರವಾಗಿ ಮಾಡಲು ಒಂದೇ ಒಂದು ಉಪಾಯವೆಂದರೆ ಸಂಸ್ಥಾನಗಳನ್ನು ಒಂದುಗೂಡಿಸುವದು ಎಂದು ಆಗ ನನಗೆ ಹೊಳೆದಿತು. ಇದರಂತೆ ಮುಂದೆ ಕಾರ್ಯಪ್ರವರ್ತನಾಗಲು ಸಂಸ್ಥಾನಿಕರಿಗೂ ಇದು ಸರಿದೋರಿ ಸಮೀಕರಣಕ್ಕೂ ಒಕ್ಕೂಟದ ರಚನೆಗೂ ತಾವಾಗಿ ಒಪ್ಪಿದರು. ಈ ಬಗ್ಗೆ ಯಾವ ಒತ್ತಾಯವನ್ನೂ ತಂದಿಲ್ಲ" ಎಂದು ಮೊದಲಾಗಿ ಅರುಹಿದರು.

---

## ಮುಂಬಯಿ ಸಮುದ್ರದ ದಡದಲ್ಲಿ ನಾಲ್ಕು ಮೂರ್ತಿಗಳು

ಹನುಮಂತ ಮತ್ತು ಗಣಪತಿ ದೇವರ ಎರಡು ಕಲ್ಲಿನ ಮೂರ್ತಿಗಳು, ಸಂಗಮರವರಿ ಕಲ್ಲಿನ ಒಂದು ನಂದಿಯ ಮೂರ್ತಿ, ಇನ್ನೊಂದು ಯಾವದೊ ಒಂದು ದೇವರ ಕರಿಯ ಕಲ್ಲಿನ ಮೂರ್ತಿ ಇವುಗಳು ತಾ ೫ ರಂದು ಮುಂಬಯಿಯ ಬಲಾಂರ್ಡಪಿಯರದ ಹತ್ತರ ಸಮುದ್ರದ ದಡದಲ್ಲಿ ಬಂದು ಬಿದ್ದಿದ್ದವು. ಅವುಗಳನ್ನು ಕಂಡಕೂಡಲೆ ಭಕ್ತಜನರು ಆ ಮೂರ್ತಿಗಳನ್ನು ಗಂಧಾಕ್ಷತೆ ಎಂಜ್ಞ ಕುಂಕುಮಗಳಿಂದ ಚರ್ಚಿಸಿ ಅಲ್ಲಿಯೇ ಇದ್ದ ಅಶ್ವತ್ಥ ವೃಕ್ಷದ ಅಡಿಗೆ ಅವನ್ನು ಸ್ಥಾಪಿಸಿದರು. ಈ ಮೂರ್ತಿಗಳ ದರ್ಶನಕ್ಕೆ ಅನೇಕ ಜನ ನೆರೆಯುತ್ತಿದ್ದಾರೆ.

೧೯೪೬ ರ ಜಾತೀಯ ದಂಗೆಗಳಲ್ಲಿ ಇವುಗಳನ್ನು ಸಮುದ್ರದಲ್ಲಿ ಎಸೆಯಲಾಗಿತ್ತೆಂದು ಒಂದು ಸುದ್ದಿ ಹಬ್ಬಿದ್ದು ಅದಕ್ಕೆ ಯಾವ ಆಧಾರಗಳೂ ದೊರತಿಲ್ಲವೆಂದು ತಿಳಿಯುತ್ತದೆ.

---

## ಪಶ್ಚಿಮ ಬಂಗಾಲ

ಹೌರಾದಿಂದ ಹೊರಟ ಒಂದು ಪ್ಯಾಸೆಂಜರ ಗಾಡಿಯು ಭಾಗಲಪುರ ರೇಲ್ವೆ ನಿಲ್ದಾಣವನ್ನು ಪ್ರವೇಶಿಸುವಾಗ ಒಂದು ಗೂಡ್ಸ ಗಾಡಿಗೆ ಡಿಕ್ಕಿ ಹೊಡೆದದ್ದರಿಂದ ೩೭ ಜನರು ಗಾಯಗೊಂಡರೆಂದೂ ಕೆಲವರಿಗೆ ತೀವ್ರ ಗಾಯಗಳಾಗಿದ್ದು ಓರ್ವನು ಕೂಡಲೇ ಮೃತಪಟ್ಟನೆಂದೂ ಸರಕಾರಿ ಸಂಪರ್ಕಾಧಿಕಾರಿಯ ಪ್ರಕಟನೆ ಹೊರಟಿದೆ.

ಕಲಕತ್ತಾ ಟಲಿಫೋನ ಕೇಂದ್ರ ಕಚೇರಿಯು ಅಗ್ನಿಗಾಹುತಿಯಾಗಿ ಹತ್ತು ದಿನಗಳಾದ ಮೇಲೆ ಇನ್ನೊಂದು ಟೆಲಿಫೋನ ಬಿಕ್ಕಟ್ಟು ಸಂಭವಿಸಿತು. ತಾ. ೪ ರಂದು ಬೆಳಗಾಗುವದರೊಳಗೆ ಬಜ್.ಬಜ್ ಕೇಂದ್ರವು ಕಲಕತ್ತೆಯಿಂದ ಕತ್ತರಿಸಲ್ಪಟ್ಟಿತ್ತು. ಭೂಗರ್ಭ ಉದ್ಯೋಗಿಕ ಕೇಂದ್ರಗಳು ಬಜ್‌ಬಜ್‌ಕ್ಕೆ ಜೋಡಿಸಲ್ಪಟ್ಟಿದ್ದು ಅಲಿಪುರ ವಿಮಾನ ನಿಲ್ದಾಣದ ಹತ್ತರ ಟೆಲಿಫೋನ ತಂತಿಗಳನ್ನು ಕತ್ತರಿಸಿದ್ದರು.

---

ಸಂಘದ ಕಾರ್ಯಸಮಿತಿಯ ಸಭೆಯೊಂದು ಕಳೆದ ವಾರ ಮಂಗಳೂರಲ್ಲಿ ಜರುಗಿತು, ಆಗ ಸರಕಾರದ ಅವಾರ್ಡನ್ನು ಸಂಧಿಮೂಲಕ ದೊರಕಿಸಿಕೊಳ್ಳಲು ಒಂದು ಸಮಿತಿಯ ರಚನೆಯಾಯಿತಲ್ಲದೆ, ಸಂಘದ ಕೆಲವು ನಿಯಮಗಳ ತಿದ್ದುಪಡಿಯನ್ನು ತಯಾರು ಮಾಡಲು ಶ್ರೀ ಬಿ ಎಂ. ವೆಂಕಟರಾಯರಿಗೆ ಅಧಿಕಾರ ವೀಯಲಾಯಿತು. ಮತ್ತು ಮದ್ರಾಸ ಪ್ರಾಂತೀಯ ಸಂಘದ ಅಧ್ಯಕ್ಷ ಶ್ರೀ. ಸೀತಾರಾಮರೆಡ್ಡಿಯವರನ್ನು ಜಿಲ್ಲೆಗೆ ಆಮಂತ್ರಿಸಬೇಕೆಂದೂ ನಿರ್ಣಯಗಳಾದವು.

# ವಾರದ ಭವಿಷ್ಯ

ಜ್ಯೋತಿಷಿ:- ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯಕಥನ ಆಫೀಸ ಖಡೇಬಝಾರ, ಬೆಳಗಾವಿ

## ನವಂಬರ ೧೫ ರಿಂದ ೨೧ ರ ವರೆಗೆ

### ಮೇಷ

ನಿಮ್ಮ ಸಹಿತ ಮನೆಯಲ್ಲಿಯ ಬಹುಶಃ ಎಲ್ಲ ಜನರ ಪ್ರಕೃತಿ ಹೆಚ್ಚುಕಡಮೆ ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಮೆಯೇ. ಅಪ್ತರಲ್ಲಿಯ ಕೆಲ ಸ್ತ್ರೀಯರಿಂದ ಸ್ವತಃ ನಿಮಗೆ ಸ್ಮರಣೀಯ ಇಲ್ಲವೆ ಗರ್ಹ್ಯ ವರ್ತನ. ಆದರೆ ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಉತ್ತಮ ಮತ್ತು ಭವಿಷ್ಯತ್ತಿನಲ್ಲಿ ಪ್ರತಿಷ್ಠೆ ಹೆಚ್ಚುವಂಥ ಅನೇಕ ಘಟನೆಗಳು. ಅಸ್ತಿಯಲ್ಲಿ ಸ್ವಲ್ಪ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಆದರೆ ಅದಕ್ಕಾಗಿ ವೆಚ್ಚ ಮತ್ತು ಯಾತಾಯಾತ ಬಹಳ. ಮಿತ್ರರಲ್ಲಿ ಸ್ವಲ್ಪ ವಿರೋಧ. ಆದರೆ ಅದು ಬರುವದರಿಂದಲೆ ಕೆಲ ಕೆಲಸ ಯಶಸ್ವಿಯಾಗುವ ಸಂಭವ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲಿನ ೩ ಚರಣಗಳಿಗೆ ತೊಂದರೆ ಹೆಚ್ಚು ತಾ. ೧೬, ೧೭, ೧೮, ೧೯ ಅನುಕೂಲ.

### ವೃಷಭ

ಪ್ರಕೃತಿ ಮತ್ತು ಸ್ತ್ರೀ ಉಪಭೋಗ ಉತ್ತಮ. ಆದರೆ ಪ್ರತಿಯೊಂದು ಕೆಲಸದಲ್ಲಿ ಅವೆಲು ಸ್ವಚ್ಛಂದ ವರ್ತಿಸುವದರಿಂದ ಇತರರ ಕೂಡ ವಿರೋಧ ಉಂಟಾಗುವ ಸಂಭವ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಕಡಮೆ. ಬಂಧು ವರ್ಗದವರು ಮತ್ತು ಮಕ್ಕಳು ನಿಮ್ಮ ವಿರುದ್ಧ ವರ್ತಿಸುವದರಲ್ಲಿ ನಿರತರಾಗುವರು. ಆಪ್ತರೊಡನೆ ವಾದ ವಿವಾದದ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಸಾಮಾನ್ಯ ಆದರೆ ಲಾಭ ಉತ್ತಮ. ಅವಚಿತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಮಿತ್ರ ಸುಖ ಅನುಕೂಲ. ಕೆಲವೊಂದು ಚಾಡಿಯನ್ನು ಹೇಳಿದ ಆರೋಪ ನಿಮ್ಮ ಮೇಲೆ ಬರುವದು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಸ್ವಲ್ಪಮಟ್ಟಿಗೆ ಅನುಕೂಲ. ಕೃತ್ತಿಕೆಯ ೪ ಮತ್ತು ರೋಹಿಣಿಯ ಮೊದಲನೇ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೭, ೧೮, ೧೯, ೨೦ ಅನುಕೂಲ.

### ಮಿಥುನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಪ್ರಾಪಂಚಿಕ ವಿಷಯಗಳಲ್ಲಿ ಸುಖದುಃಖ ಸಮಾನವಾಗಿ ದೊರೆಯುವವು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭದಲ್ಲಿ ಅಯುತ್ತ ವೇಳೆಗೆ ಗೊಂದಲ. ಮಿತ್ರರಿಂದ ನಿಮ್ಮ ನಿಂದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಆದರೆ ಅದರಲ್ಲಿಯ ಕೆಲ ಸಂಗತಿಯಲ್ಲಿ ನಿಮ್ಮಿಂದಲೆ ತಪ್ಪಾಗುವದರಿಂದ ಮನಸ್ಸಿನಲ್ಲಿ ಹುರುಹುರಿ. ಪ್ರವಾಸಾದಿ ಕೆಲಸ ಹಿತದ್ದು. ಮೃಗಾದ ೪ ನೇ ಆರಿದ್ರದ ಮೊದಲನೆ ೩ ಚರಣಗಳಿಗೆ ಬಹಳ ತೊಂದರೆ. ತಾ. ೧೫, ೧೬, ೧೯, ೨೦ ಅನುಕೂಲ.

### ಕರ್ಕ

ನಿಮ್ಮ ಮತ್ತು ಹೆಂಡತಿಯ ಆರೋಗ್ಯಕ್ಕೆ ಸ್ವಲ್ಪ ಕ್ಲೇಶ. ಮಕ್ಕಳಲ್ಲಿ ಸ್ವಲ್ಪ ಉನ್ನತಿ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಬಹಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಆದರೆ ಪ್ರತಿಯೊಂದು ಮಾತು ಸಾಧಿಸಬೇಕಾದರೆ ಬಹಳ ತೊಂದರೆಪಡಬೇಕಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಿಗಳ ಜೋರು ಹೆಚ್ಚು. ಮಿತ್ರರು ಉಪೇಕ್ಷಣೀಯ ಮಾತಾಡುವರು. ಪ್ರವಾಸಾದಿ ಕೆಲಸ ಅಲ್ಪಸ್ವಲ್ಪ ತೊಂದರೆಯವು. ಪುಷ್ಯದ ೪ ನೇ ಮತ್ತು ಅಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೬, ೧೭, ೧೮ ಅನುಕೂಲ.

### ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಬಹಳ ಕೆಡುವದು. ಪ್ರಾಪಂಚಿಕ ಸುಖ ಸಾಮಾನ್ಯ. ಆದರೆ ಮಕ್ಕಳಿಂದ ಹೆಚ್ಚಿನ ಸಮಾಧಾನ. ನೀವು ಮಾಡುವ ಉಪಕಾರದ ಕೃತಿಗಳೆಲ್ಲ ಉಪದ್ರವದ ಕೃತ್ಯಗಳೆಂದು ಪ್ರತ್ಯಯಕ್ಕೆ ಬರುವದು. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಅಷ್ಟಕಷ್ಟೆ. ಆದರೆ ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಮೇಲೆ ಧಾಪುಕೂಡಿಸುವದಕ್ಕಾಗಿ ನೀವು ಎರಡನೆಯವರ ತಂತ್ರದಲ್ಲಿ ಸಿಕ್ಕುಬೀಳುವ ಸಂಭವ. ಪ್ರವಾಸದಲ್ಲಿ ಧಕ್ಕೆ. ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಮಘಾದ ೪ ನೆ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೮, ೧೯, ೨೦ ಅನುಕೂಲ.

### ಕನ್ಯಾ

ಪ್ರಕೃತಿಗೆ ಕಿರುಕಳ ಉಪದ್ರವ. ಸ್ತ್ರೀಸುಖ ಅನುಕೂಲ. ಆದರೆ ಮಿತ್ರರು ಮತ್ತು ಮಕ್ಕಳಿಂದ ಚಿಂತೆ ಹೆಚ್ಚುವಂತಹ ಕೆಲ ಕೃತ್ಯಗಳು ಸಂಭವಿಸುವ ಯೋಗ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಮ್ಮಿಶ್ರ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ. ನೋಕರದಾರರಿಗಿಂತ ಧಂದೆ ಮಾಡುವವರಿಗೆ ಕೆಲ ಮಟ್ಟಿಗೆ ಅನುಕೂಲ. ವೆಚ್ಚ ಮಾತ್ರ ಎಲ್ಲರಿಗೂ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಕೂಲತೆ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಉತ್ತರಾದ ೪ ನೆ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೭, ೧೮, ೨೧ ಅನುಕೂಲ.

### ತುಲಾ

ಪ್ರಕೃತಿಗೆ ಸ್ವಲ್ಪ ಕ್ಲೇಶ. ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಬಂಧುವರ್ಗದವರಲ್ಲಿ ಉನ್ನತಿ. ಮಿತ್ರರಲ್ಲಿ ಒಬ್ಬರ ಉತ್ಕರ್ಷ ಮತ್ತೊಬ್ಬರಿಗೆ ಅಪಕರ್ಷ ಪ್ರತ್ಯಕ್ಷವಾಗಿ ಸಂಭವಿಸುವ ಯೋಗ. ಮಕ್ಕಳು ಲೋಕಾಪವಾದ ಬರುವ ರೀತಿಯಲ್ಲಿ ವರ್ತಿಸುವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಕುಗ್ಗುವದು ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಚಿತ್ರಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೬, ೧೯, ೨೦, ೨೧ ಅನುಕೂಲ.

### ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಅನುಕೂಲ. ಸ್ಥಾವರದಲ್ಲಿ ಅನುಕೂಲ ಘಟನೆಗಳು ಅದರಿಂದ ಬಂಧುವರ್ಗದವರಲ್ಲಿ ಮತಭೇದ ಇಲ್ಲವೆ ವೈಮನಸ್ಸು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಮಾನ್ಯ. ಆದರೆ ಪ್ರತಿಷ್ಠೆ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಕೆಲಮಟ್ಟಿಗೆ ಅನುಕೂಲ. ಆದರೆ ಅನುರಾಧಯ ೪ ನೆ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೭, ೧೮, ೨೧ ಅನುಕೂಲ.

### ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳ ತಕರಾರು ಇದ್ದುದೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭವೂ ಅನುಕೂಲ. ಬಗೆಬಗೆಯ ವೆಚ್ಚ ಒಮ್ಮೆಲೇ ಬರುವದರಿಂದ ಮನಸ್ಸು ಗೊಂದಲದಲ್ಲಿ ಬೀಳುವದು. ಅನೇಕರೊಡನೆ ತಿಕ್ಕಾಟ ಬರುವಂಥ ಸಂಗತಿಗಳು ಒಮ್ಮೆಲೆ ಸಂಭವಿಸುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರವು ಅನುಕೂಲ. ಮೂಲಾದ ೪ ನೆ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೫, ೧೬, ೧೯, ೨೦ ಅನುಕೂಲ.

### ಮಕರ

ಸ್ವತಃ ನಿಮಗೆ ಮತ್ತು ಹೆಂಡತಿಗೆ ಅನುಕೂಲ. ಮಕ್ಕಳಲ್ಲಿ ಬಹಳ ಉನ್ನತಿ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ತೊಂದರೆಯದು. ಅಪ್ತರು ಮತ್ತು ನೆರೆಹೊರೆಯವರು ಮತ್ತು ನೋಕರರಿಂದ ಪ್ರತಿಬಂಧವೂ ಅಡಚಣೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅಷ್ಟಕ್ಕಷ್ಟು ಬಹಳ ಧಾರ್ಮಿಕ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಮಿತ್ರಸುಖ ಅನುಕೂಲ. ಪ್ರವಾಸಾದಿ ಕೆಲಸ ಸಾಧಾರಣ ಅನುಕೂಲ. ಉತ್ತರಾಷಾಢದ ೪ ನೇ ಮತ್ತು ಶ್ರವಣದ ಮೊದಲನೇ ೩ ಚರಣಕ್ಕೆ ತೊಂದರೆ ಕಡಮೆ. ತಾ. ೧೬, ೧೮, ೨೧ ಅನುಕೂಲ.

### ಕುಂಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಉಭಯತರಲ್ಲಿ ಬಹಳ ಮತಭೇದ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿಗಾಗಿ ಕಷ್ಟಪಟ್ಟು [illegible] ಮೇಲಧಿಕಾರಿಗಳ ದೃಷ್ಟಿ [illegible] ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಧನಿಷ್ಠಾದ ೪ ನೆ ಮತ್ತು ಶತತಾರಕೆಯ ಮೊದಲನೇ ೩ ಚರಣಗಳಿಗೆ ತೊಂದರೆಯೊಂದಿಗೆ ಯಶಸ್ಸು. ತಾ. ೧೫-೧೯-೨೦ ಅನುಕೂಲ.

### ಮೀನ

ಪ್ರಕೃತಿ ಉತ್ತಮ. ಹೆಂಡತಿಯ ಮತ್ತು ಮಕ್ಕಳ ಮೇಲಿಂದ ಮೇಲೆ ಅನಾರೋಗ್ಯದಿಂದ ದರಿಂದ ಸಂಸಾರದ ಬಗ್ಗೆ ಚಿಂತೆ. ಉದ್ಯೋಗದಲ್ಲಿ ಮಂದ ಪ್ರಗತಿ. ಆದರೆ ಪ್ರತಿಷ್ಠೆ ಮತ್ತು ಸ್ವಲ್ಪ ಲಾಭ. [illegible] ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಅನಪೇಕ್ಷಿತ ಲಾಭದ ಸಂಭವ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಹೆಚ್ಚು ಅನುಕೂಲ. ಉತ್ತರಾಭಾದ್ರದ ೪ ನೆ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೬-೧೮-೨೦ ಅನುಕೂಲ.

# ರೂಪರಂಗ

## ನಾಟಕಗಳೂ ಚಲಚ್ಚಿತ್ರಗಳೂ

ನಾಟಕವನ್ನು ನೋಡುವವರು ಅನೇಕರಾದರೂ, ನಾಟಕದ ಉದ್ದೇಶವನ್ನು ಆಳವಾಗಿ ವಿಮರ್ಶಿಸಿದವರು ವಿರಳ. ದಯಾಳುಗಳಾದ ಕೆಲ ವಿಮರ್ಶಕರು ತಮಗೆ ತಿಳಿದ ಕೆಲವು ಲೋಪ ದೋಷಗಳನ್ನು ಎತ್ತಿ ತೋರಿಸಿದರೂ ಉನ್ಮತ್ತರಾದ ನಟನಟಿಯರು ಅದರ ಕಡೆ ಕಣ್ಣೆತ್ತಿ ಸಹ ನೋಡುವುದಿಲ್ಲ. ನಾಟಕವೆಂದರೆ ಚಲಚ್ಚಿತ್ರಗಳನ್ನೊಳಗೊಂಡ ಮಾತಿದು. ನಿರ್ಮಾಕ್ತೃಗಳ ಮುಖ್ಯವಾದ ಉದ್ದೇಶ ಹಣ ಗಳಿಸುವದು. ಇತ್ತೀಚೆಗೆ ನಟರಾಗಿದ್ದವರೇ ನಾಟಕಕರ್ತರೂ, ದಿಗ್ದರ್ಶಕರೂ ಆಗಿರುವದರಿಂದ ಯಾವ ವಿಷಯವನ್ನು ಹೆಚ್ಚು ಪ್ರಶಂಸಿಸಿದರೆ ತಮಗೆ ಹೆಚ್ಚು ಹಣ ಬರುತ್ತದೆಯೋ ಅದನ್ನೇ ನಾಟಕದ ಅಂತ್ಯದ ವರೆಗೂ ಚಾಚಿ ಬಿಡುತ್ತಾರೆ.

ಇನ್ನು ನಾಲ್ಕಕ್ಷರ ಬಂದರೆ ಸಾಕು, ನಾಟಕವನ್ನು ರಚಿಸಲು ಹವಣಿಸುವ ಮಹಾನುಭಾವರು ಇದ್ದಾರೆ. ನಿದರ್ಶನಕ್ಕಾಗಿ ನವ್ಯರಲ್ಲಿಯೇ ಇಂಥವರೊಬ್ಬರಿದ್ದಾರೆ. ತಾವು ಎಲ್ಲಿಯಾದರೂ ನಟಿಸುವ (ವೇಷಧರಿಸುವ) ಸಂದರ್ಭ ಬಿದ್ದರೆ ಪ್ರಸಿದ್ಧ ಪತ್ರಿಕೆಯಲ್ಲಿ "ಸಿನೆಮಾ ನಟ"ರೆಂದು ಛಾಪಿಸಬೇಕಾಗಿ ಅಗ್ರಹ ಮಾಡುತ್ತಾರೆ. ಎಂದೋ ಒಂದು ದಿನ ಸಿನೆಮಾರಂಗದ ಕೃತಕ ಅಡವಿಯಲ್ಲಿ ಒಬ್ಬ ಸೈನಿಕನಾಗಿ ಅಡ್ಡಾಡಿದವರೂ ಸಿನೆಮಾ ನಟರೇ? "ಚಲಚ್ಚಿತ್ರಗಳಲ್ಲಿ ವೇಷ ಹಾಕಿದವರೆಲ್ಲ ತಾರೆಗಳಲ್ಲ. ಈ ಬಿರುದನ್ನು ಉಪಯೋಗಿಸಿ ಪ್ರಸಿದ್ಧಿಸಬೇಕಾದರೆ ವಿಚಾರ ಮಾಡಬೇಕು." ಎಂದು ಸಿನೆಮಾ ಮಾಲಕರು ಪತ್ರಿಕಾ ಸಂಪಾದಕರ ಮೇಲೆ ಅಕ್ಷೇಪಣೆ ಹೊರಿಸಿದ್ದಾರೆ. ಒಂದು ನ್ಯಾಯಾಲಯದ ಮೊಕದ್ದಮೆಯೊಂದರಲ್ಲಿ ನ್ಯಾಯಾಧೀಶರು "ನಿನ್ನ ವೃತ್ತಿ ಏನು" ಎಂದು ಕೇಳಲು "ಸಿನೆಮಾ ಸ್ಟಾರ್" ಎಂದು ಒಬ್ಬಳು ಉತ್ತರ ಕೊಟ್ಟಳಂತೆ. ಇದನ್ನು ಪ್ರಕಟಿಸಿದ ಪತ್ರಿಕಾ ಸಂಪಾದಕರದು ತಪ್ಪೆ? ಅಥವಾ ಅವಳು ನಟಿಸಿದ ಸಿನೆಮಾದ ದಿಗ್ದರ್ಶಕರದು ತಪ್ಪೆ?

ನಿಜವಾದ ಯೋಗ್ಯತೆಯನ್ನು ಸಂಪಾದಿಸಲು ಪ್ರಯತ್ನಿಸದೆ ಕೇವಲ ಕುಹಕ ಬುದ್ಧಿಯ ಪರಿಶ್ರಮದಿಂದಲೇ ಕೀರ್ತಿಯನ್ನೂ ಬಿರುದನ್ನೂ ಸಂಪಾದಿಸಲು ಹವಣಿಸುವ ದುರ್ದೆಸೆಯು ನಮ್ಮೀ ಭರತಖಂಡಕ್ಕೆ ಬಾರದಿರಲಿ.

ಸಾಮಾಜಿಕ ಸಿನೆಮಾ ನಾಟಕಗಳು ವರ್ಣನಾತೀತವೆನಿಸಿವೆ. ಇವುಗಳನ್ನು ವಿಚಾರಿಸುವ ಅಧಿಕಾರಿಗಳಿಗೆ (Censor) ಲಂಚದಿಂದ ಉತ್ಪನ್ನವಾದ ಉನ್ಮಾದವೋ? ಸಿನೆಮಾ ಶಾಲೆಗಳ ಕಿರಿ ನೋಟದಿಂದುಂಟಾದ ದುರ್ಭಿಕ್ಷವೆಯೋ ಅಥವಾ ಇವರ ಯೋಗ್ಯತೆಯ ಮಟ್ಟವು ಅಷ್ಟಿಗೇ ಇದೆಯೊ? ಹಾನರಿಯೆ.

ಉದಾಹರಣೆಗಾಗಿ ಒಂದು ಕಥಾಭಾಗವನ್ನು ತೆಗೆದುಕೊಳ್ಳುವ. ಪರದೇಶದ ವಿದ್ಯಾಭ್ಯಾಸ ಮುಗಿಸಿ ಮನೆಗೆ ಬಂದಕೂಡಲೆ ಒಬ್ಬ ಮನೆಯದಾಸಿಯ ಮೇಲೆ ಅತ್ಯಾಚಾರ ಮಾಡಿ, ಅವಳ ಬಾಳುವೆಯನ್ನು ಹಾಳುಮಾಡಿ ತಾನು ಬೇರೆ ಮದುವೆಯಾಗಿ ಅವಳ ಸುಖಕ್ಕೂ ಮುಳ್ಳಿರಿದು ತಾನು ದಾಸಿಯನ್ನು ಮದುವೆಯಾಗಿ ಹೋಗಿ ಜೈಲು ಪಾಲಾಗುವನು. ಮೊದಲ ಸಲ ಗಂಡುಹೆಣ್ಣುಗಳು ಒಬ್ಬರನ್ನೊಬ್ಬರು ನೋಡಿದ ಕೂಡಲೇ ಪ್ರೇಮವು ಅಂಕುರಿಸಿ ಅದು ಮರವಾಗುತ್ತದಂತೆ! ಇದಕ್ಕಾಗಿ ಅವರೀರ್ವರೂ ಪಡಬಾರದ ಕಷ್ಟಗಳನ್ನು ಪಟ್ಟು ಕಲೆಯುತ್ತಾರಂತೆ. ನಂತರ ಇವನು ಬಡವನಾದರೆ ಅವಳು ಕ್ಷಮಿಸುವಳು. ಅವಳು ರೋಗಗ್ರಸ್ತಳಾದರೆ ಇವನು ಕ್ಷಮಿಸುವನು. ಈ ಎರಡು ಸಂದರ್ಭಗಳಲ್ಲಿಯೂ ಅವರೀರ್ವರಿಗೆ ಬಿಡುಗಡೆಯಾಗದಿದ್ದರೆ ಅಭಾವ ವೈರಾಗ್ಯದಿಂದಿರುವರೇ ವಿನಾ ಪ್ರೇಮವೆಲ್ಲಿಯದು? ಬಾಹ್ಯ ಲೈಂಗಿಕ ಪ್ರೇಮವೇ ಪ್ರೇಮವೆನಿಸಿದರೆ ಮೃಗಪಕ್ಷಿಗಳಿಗೂ ನಮಗೂ ಭೇದವೇನು?

ಪ್ರೇಮವು ಸ್ವಾಭಾವಿಕ, ಒಬ್ಬರೊಂದಿಗೊಬ್ಬರನ್ನು ಒಟ್ಟಾಗಿಸುವ ಸೃಷ್ಟಿಕರ್ತನ ಕಲಾನೈಪುಣ್ಯ. ಸ್ತ್ರೀಪುರುಷರು ಮಾತ್ರ ಪ್ರೇಮದ ಗುರಿಯನ್ನು ಸಾಧಿಸಬಲ್ಲರು. ಬಂಧುಪ್ರೇಮ, ರಾಷ್ಟ್ರಪ್ರೇಮ, ವಿಶ್ವಪ್ರೇಮ ತನ್ಮೂಲಕ ಭಗವಂತನಲ್ಲಿ ಪ್ರೇಮ (ಭಕ್ತಿ)ವನ್ನು ಇರಿಸಿ ಕೃತಕೃತ್ಯನಾಗುವುದೇ ಮಾನವನ ಗುರಿ.

ನೀತಿಯನ್ನು ಕೃತಿಯ ಮೂಲಕ ಬೋಧಿಸಿ ಜನಾಂಗವನ್ನು ಸನ್ಮಾರ್ಗಕ್ಕೆ ಎಳೆಯುವುದೇ ನಾಟಕದ ಮುಖ್ಯೋದ್ದೇಶ. ಈ ಗುರಿಯು ಲೋಪವಾಗಿದೆ. ಈಗಿನ ಜಾತಿಮತಗಳನ್ನು ಹೀಯಾಳಿಸುವ ನಾಟಕಗಳಲ್ಲಿ ಒಂದು ಜಾತಿಯ ಲೋಪದೋಷಗಳು ಆ ಜಾತಿಯವರಿಗೆ ತಿಳಿದು ಸುಧಾರಣೆಯಾಗಬೇಕಾದ್ದು ಹೋಗಿ ಇತರರಿಗೆ ತಿಳಿದರೆ ಪ್ರಯೋಜನಕ್ಕಿಂತ ಅನರ್ಥವೇ ಆಗುವುದು. ಜಾತ್ಯತೀತವಾದ ಈಗಿನ ಪ್ರಭುತ್ವದಲ್ಲಿ ಇಂತಹ ನಾಟಕಗಳಿಗೆ ಎಡೆ ಇರಬಾರದು.


ಸಿನೆಮಾ ಪ್ರೇಕ್ಷಕ ಗುಣಗಳೊಂದೆರಡನ್ನು ಇಲ್ಲಿ ತಿಳಿಸಬಯಸುತ್ತೇನೆ. ನಾಟಕದಲ್ಲಿ ಸ್ತ್ರೀಯರೇ ಸ್ತ್ರೀಪಾತ್ರವಹಿಸಬೇಕು. ಅಂದರೆ ನಾವು ಸುರಿಮಳೆ I Love Scene ಪ್ರಣಯ ದೃಶ್ಯ ಇಲ್ಲ, Dance ದೃಶ್ಯ ಇಲ್ಲ ಎನ್ನುವವರೂ ಇದ್ದಾರೆ. ಚಿತ್ರದಲ್ಲಿ ಹಾಡವನ್ನು ಹಾಕಿದರೆ ಚಪ್ಪಾಳೆ ತಟ್ಟುವದು, ಒಬ್ಬ ನಾಯಕನನ್ನು, ಸ್ತ್ರೀಪಾತ್ರದವರು ಪರಿಹಾಸ್ಯ ಮಾಡಿದರೆ ಶಿಳ್ಳೆಯೋ, ಸರೋವರಗಳಲ್ಲಿಯೋ [illegible] ದಿಂದಲೇ ಲಗ್ನ ನೋಡುವದು ಇವೆಲ್ಲವೂ ಇವರ ಪ್ರಧಾನ ಗುಣಗಳು.

ನಾಟಕ ಚಲಚ್ಚಿತ್ರಗಳನ್ನು ಸರಕಾರವು ಸ್ವಾಧೀನ ಮಾಡಿಕೊಂಡು, ದೇಶದ ಹಿತ, ಜನಜೀವನ ಸುಧಾರಣೆ, ವಿದ್ಯಾಪ್ರಸರಣ, ದೈವಭಕ್ತಿ ಇತ್ಯಾದಿಗಳು ಅಂತಸ್ಥವಿರುವ ಚಿತ್ರಗಳನ್ನು ತಯಾರಿಸಲು ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

—ಕೆ. ಯಮ್. [illegible]

Reg. No. B. 3148 | LICENCE No 3 Licensed to Post without Prepayment | KARMAVEER 15-11-48

# ಪುಸ್ತಕ ಪರಿಚಯ



## ಸಾರ್ಥ ಮಾಧವನಿದಾನ

ಅನುವಾದಕರು ಮತ್ತು ಪ್ರಕಾಶಕರು, ಡಾ. ಅ. ಹಲಸೀಕರ, ಆಯುರ್ವೇದ ಪ್ರಸಾರಕ ಮಂಡಳ, ಆತ್ರೇಯಸದನ, ೧೮೫೦, ಹುಬ್ಬಳ್ಳಿ. ಬೆಲೆ ೪ ರೂಪಾಯಿಗಳು. ಪುಟಗಳು ೫೪೦.

ರೋಗ ಪರೀಕ್ಷೆ ಸರ್ವಚಿಕಿತ್ಸೆಗಳ ಅಗ್ರ ಅವಶ್ಯಕತೆ. ಪೂರ್ವದಲ್ಲಿ ನಾಡಿ ಪರೀಕ್ಷೆಯಿಂದ ರೋಗಿಯ ಸರ್ವಲಕ್ಷಣಗಳನ್ನು ನಿಮಿಷಾರ್ಧದಲ್ಲಿ ಹೇಳಿಬಿಡುವ ವೈದ್ಯರಿದ್ದರು. ಅವರು ಸ್ವಯಂ ಔಷಧ ತಯಾರಿಸುವವರಾಗಿಯೂ ಇರುತ್ತಿದ್ದರು, ಈಗ ಆ ಕಲೆಯ ಅಭ್ಯಾಸ ಆಯುರ್ವೇದೋಪಾಸಕರಲ್ಲೂ ಬಹಳ ಜನಕ್ಕೆ ಗೊತ್ತಿಲ್ಲ. ವಿದೇಶೀಯ ಪದ್ಧತಿಯವರು ಪುಸ್ತಕ ನೋಡಿ ಔಷಧ ಕೊಡುವವರು - ಮಿಸೆಸ್ ಮಾಧುರಿ ಪಾಕಶಾಸ್ತ್ರದ ಪುಸ್ತಕ ಹಿಡಿದುಕೊಂಡು ಅಡಿಗೆ ಮಾಡಲು ಕುಳಿತಂತೆ ರೋಗಿಯ ಮೇಲೆ ಪ್ರಯೋಗ ಮಾಡುತ್ತ ಅಸಂಬದ್ಧ ಅನುಭವ ಪಡೆದವರೇ ಅವರಲ್ಲಿ ಹೆಚ್ಚು, ರೋಗ ಇಂಥದೆಂದು ಎಷ್ಟು ದಿನ ಚಿಕಿತ್ಸೆ ನಡೆಸಿದರೂ ತಿಳಿದುಕೊಳ್ಳಲಾರದ ಇವರನ್ನು ಕೆಂಡೇ ವೈದ್ಯರಾಜನು ಯಮುನ ಅಣ್ಣ, ಯಮಪ್ರಾಣ ಪೊಂದನ್ನೇ ಒಯ್ಯುರೆ ಇವನು ಪ್ರಾಣ-ಧನ ಎರಡನ್ನೂ ಒಯ್ಯುವವ ಎಂದು ಪ್ರತೀತಿಯಿದೆ. ಹೀಗಿರುವಾಗ ವೈದ್ಯರೆನಿಸಿಕೊಂಬವರು ರೋಗ ಪರೀಕ್ಷಣ ಗ್ರಂಥಗಳಲ್ಲೆಲ್ಲ ಅತ್ಯುತ್ತಮವೆನಿಸಿದ ಮಾಧವನಿದಾನವನ್ನು ಅಭ್ಯಸಿಸುವದು ಅತ್ಯವಶ್ಯಕ. ಅಲ್ಲದೆ ಸಾಮಾನ್ಯ ನರನಾರಿಯರಾದರೂ ತಂತಮ್ಮ ದೇಹ ಪ್ರಕೃತಿಯ ಬಗ್ಗೆ ಸಾಮಾನ್ಯ ಜ್ಞಾನವನ್ನು ಪಡೆದುಕೊಂಡಿರುವುದು ಅತ್ಯವಶ್ಯಕ. ರೋಗ ಬಂದ ಮೇಲೆ ಚಿಕಿತ್ಸೆ ಮಾಡುವುದಕ್ಕಿಂತ ಬರದಂತೆ ನೋಡಿಕೊಳ್ಳುವುದು, ಮುಂಜಾಗ್ರತೆ ತೆಗೆದುಕೊಳ್ಳುವುದು ಉತ್ತಮ; ಬಂದರೆ ಆ ಕೂಡಲೆ ಅದರ ಲಕ್ಷಣವನ್ನರಿತು ಉತ್ತಮ ಚಿಕಿತ್ಸೆ ಮಾಡುವುದು ಮಧ್ಯಮ. ಅಲಕ್ಷ್ಯದಿಂದ ಅಸಾಧ್ಯವೆನಿಸುವ ವರೆಗೆ ಸುಮ್ಮನಿದ್ದು ಅನಂತರ ವೈದ್ಯರಿಗೆ ಶರಣು ಹೋಗುವುದು ಅಧಮ. ಆದುದರಿಂದ ಶ್ರೀ ಡಾ. ಅ. ಹಲಸೀಕರರು ಎಲ್ಲರಿಗೂ ತಿಳಿವಂತೆ ಉಕ್ತ ಗ್ರಂಥವನ್ನು ಕನ್ನಡಕ್ಕೆ ಪರಿವರ್ತಿಸಿರುವುದನ್ನು ಸಾರ್ವಜನಿಕರು ಬಳಸಿಕೊಂಡು ಶಕ್ತಿ ಸೌಂದರ್ಯಗಳಿಗೆ ತಂದೆ ಎನಿಸುವ ಆರೋಗ್ಯವನ್ನು ಪಡೆಯಲು ಮತ್ತು ಕಾಪಾಡಿಕೊಳ್ಳಲು ಪ್ರಯತ್ನಿಸುವುದು ಅತ್ಯಂತ ಅವಶ್ಯಕವೆಂದು ಒತ್ತಿಹೇಳಬೇಕಾಗಿದೆ. ಈಗಿನ ಕಾಲದಲ್ಲಿ ಕುಶಲ್ಪನೆ, ಅಹಸಿದ್ಧಾಂತಗಳನ್ನು ದೊಡ್ಡಕ್ಷರದ ಚಿತ್ರಮಯವಾದ ಸುಂದರ ಪುಸ್ತಕಗಳಲ್ಲಿ ಪ್ರಕಟಿಸಿ ತನ್ಮೂಲಕ ಜನರನ್ನು ಅಜ್ಞಾನಾಂಧಕಾರದಲ್ಲಿ ನೂಕಿ ಲಾಭ ಪಡೆಯುವುದು ಹೆಚ್ಚಾಗಿರುವತ್ತ ಬುದ್ಧಿವಂತರು ಲಕ್ಷ್ಯವಿತ್ತು ಈಗಿನ ಕಾಲದ್ದೆಲ್ಲ ಸುಜ್ಞಾನ ವಿಜ್ಞಾನ ಎನ್ನುವ ಹುಚ್ಚನ್ನು ಬಿಟ್ಟು ಗ್ರಾಹ್ಯಾಗ್ರಾಹ್ಯ ವಿವೇಕವನ್ನು ಬೆಳೆಸಿಕೊಳ್ಳಲು ಪ್ರಸ್ತುತ ಗ್ರಂಥ ಬಹಳ ಉಪಕಾರಿಯಾಗಿದೆ. ಅಚ್ಚಿನ ತಪ್ಪುಗಳನ್ನು ತಿದ್ದರೆ ಭಾಷಾಂತರ ಸಾಮಾನ್ಯವಾಗಿ ಸರಳವಾಗಿದೆಯೆನ್ನಬಹುದು. ಸಾಹಿತಿ ಭಾಷಾಂತರಿಸಿದ್ದರೆ ಇನ್ನೂ ಸರಳವಾಗಿ ಬರೆಯುತ್ತಿದ್ದ. ಮೂಲಶ್ಲೋಕಗಳಲ್ಲೂ ತಪ್ಪು ಕಾಣುವ ಮುದ್ರಾದೋಷಗಳನ್ನು ಕ್ಷಮ್ಯವೆನ್ನಲಾಗದು. ಅವರೂ ಗ್ರಂಥ ಸರ್ವರಿಗೂ ಅತ್ಯುಪಯುಕ್ತವೆಂದು ಹೇಳ್ಳದಿರಲಾರೆವು.

## ಶರೀರ ವಿಜ್ಞಾನ ಮತ್ತು ಆರೋಗ್ಯ ವಿಜ್ಞಾನ

ಬರೆದವರು ಮತ್ತು ಪ್ರಕಾಶಕರು, ಶ್ರೀ ಬಿ. ಜಿ. ನಾಯಕ ಎಂ. ಎ. ಬಿ. ಟಿ., ೩೩೭, ಶಹಾಪುರ, ಬೆಳಗಾಂವಿ. ಪುಟ ೪೫೦ ಬೆಲೆ ರೂ. ೪.

ಮೇಲಿನ ಗ್ರಂಥದಲ್ಲಿ ಮಾನವ ಶರೀರದ ಅವಯವ, ಭಾಗ ವಿಭಾಗ, ಕಾರ್ಯಗಳನ್ನು ವಿವರಿಸಲಾಗಿದೆ; ಆರೋಗ್ಯಶಾಸ್ತ್ರ, ಉತ್ಕ್ರಾಂತಿ ಸಾಧನಗಳನ್ನು ಇದು ಒಳಗೊಂಡಿದೆ. ಗ್ರಂಥಕರ್ತರು ಅಗತ್ಯವೆನಿಸಿದ ಸಾಗರವನ್ನು ಅಂಗ್ಲೆಯಲ್ಲಿ ಹಾಕಿ ಹುಡುಗರಿಗೆ ಕುಡಿಸಲು ಪ್ರಯತ್ನಿಸಿದ್ದಾರೆ. ಊಟವನ್ನು ಒಂದೆರಡು ಗುಳಿಗೆಗಳ ಮೂಲಕ ಮಾಡುವ ಈ ಕಾಲವನ್ನು ನೋಡಿಯೇ ಇಷ್ಟು ಸಂಕ್ಷೇಪದಿಂದ ಸಮಸ್ತ ವಿಷಯಗಳನ್ನು ಸಂಗ್ರಹಿಸಿ ಹೀಗೆ ಶ್ರೀ ನಾಯಕರು ನಿರೀಕ್ಷಿಯದ ವಿದ್ಯಾರ್ಥಿಗಳ ಗಂಟಲಲ್ಲಿ ಔಷಧದ ಉಂಡೆಯನ್ನು ತುರುಕಲು ಪ್ರಯತ್ನಿಸಿರುವಂತಿದೆ. ಪುಸ್ತಕದಲ್ಲಿ ಹೊಸ ಪಾರಿಭಾಷಿಕ ಪದಗಳನ್ನು ಪ್ರಯೋಗಿಸಿದ್ದು ಸಾಮಾನ್ಯವಾಗಿ ಯೋಗ್ಯವಿದೆಯೆನ್ನಬಹುದು. ನಿದರ್ಶಕ ಚಿತ್ರಗಳಿರುವುದೂ ಅನುಕೂಲವೇ. ಒಟ್ಟಿನ ಮೇಲೆ ಕನ್ನಡದಲ್ಲಿ ಇಂಥ ಪುಸ್ತಕವೇ ಅಪೂರ್ವವಿರುವಾಗ ಇದು ಬಹಳ ಪ್ರಯೋಜನಕರವಾದೀತೆಂದು ಧಾರಾಳವಾಗಿ ಹೇಳಬಹುದು. ಅಚ್ಚಿನ ದೋಷಗಳು ಬಹಳವಿರುವುದು ಯೋಗ್ಯವಾಗಿ ಕಾಣುವುದಿಲ್ಲ. ಗ್ರಂಥಕರ್ತರ ಉದ್ದೇಶ ಸಾರ್ಥಕವಾಗಬೇಕಾದರೆ ಪ್ರತಿಯೊಬ್ಬ ಗೃಹಸ್ಥ ಮತ್ತು ಅವನಿಗಿಂತ ಹೆಚ್ಚಾಗಿ ಗೃಹಿಣಿ ಈ ವಿಷಯದ ಜ್ಞಾನವನ್ನು ಬೆಳೆಸಿಕೊಳ್ಳಲು ಪ್ರಥಮ ಪ್ರಯತ್ನವಾಗಿ ಇದನ್ನು ಓದಬೇಕು. ಏಕೆಂದರೆ, ಆರೋಗ್ಯವೇ ಸೌಂದರ್ಯವಲ್ಲವೇ?

## ಹೊಂಗನಸು

ಲೇ. ಬಿ. ಎಂ. ಶ್ರೀಕಂಠಯ್ಯ. ಸಂಗ್ರಾಹಕರು, ಕ. ವೆಂ. ರಾಘವಾಚಾರ್ಯರು. ಪ್ರಕಾಶಕರು, ವಿಶ್ವ ಸಾಹಿತ್ಯ ಮೈಸೂರು. ಪುಟಗಳು ೭೬. ಬೆಲೆ ೧೨ ಆಣೆ.

ದಿವಂಗತ ಬಿ. ಎಂ. ಶ್ರೀಕಂಠಯ್ಯನವರ ಕವಿತೆಗಳನ್ನು ಅವರ ಶಿಷ್ಯರು ಶ್ರೀ ಕಂಠಮಾಲೆಯಲ್ಲಿ ಅಚ್ಚು ಹಾಕಿಸಿದ್ದಾರೆ. ಶ್ರೀಕಂಠಯ್ಯನವರ ಕೈ ಪಳಗಿದ್ದಾಗಿದೆ. ಇವರ ಕೃತಿಗಳು ಭಾವಪೂರ್ಣವಾಗಿಯೂ ರಸವತ್ತಾಗಿಯೂ ಇವೆ. ಹೊಂಗನಸು ಹೆಸರಿಗೆ ತಕ್ಕಂತೆಯೇ ಇದೆ. ಇದರಲ್ಲಿರುವ ಹಲವು ಕವಿತೆಗಳು ಮೈಸೂರಿನ ಮತ್ತು ಮೈಸೂರು ದೊರೆಗಳ ವರ್ಣನೆಗಳಾಗಿವೆ. ಇದರಲ್ಲಿಯ ಪ್ರತಿಯೊಂದು ಕವಿತೆಯೂ ಕವಿಯ ದೇಶಾಭಿಮಾನವನ್ನು ಎತ್ತಿ ತೋರಿಸುತ್ತದೆ ಅದರಲ್ಲಿ ಭರತಮಾತೆಯ ನುಡಿ, ಮೈಸೂರು ಮಕ್ಕಳು, ಕನ್ನಡದ ಹೆಣ್ಣು, ಕೃಷ್ಣರಾಜ ಪ್ರಗಾಥ ಇವು ನಾಲ್ಕು ಹೆಚ್ಚು ಚೆನ್ನಾಗಿವೆ.

## ಶರಣರ ಶಿವಪ್ರಪಂಚ

(ವಚನ ರತ್ನಮಾಲೆ)

ಪುಟ ೩೬. ಬೆಲೆ ೩ ಆಣೆ. ಸಂಪಾದಕರು ಮತ್ತು ಪ್ರಕಾಶಕರು, ಶ್ರೀ ಕೊಪ್ಪಳ ವೀರಭದ್ರಪ್ಪ, ಎಂ. ಎ., ಬಿ. ಟಿ. ಧಾರವಾಡ. ಶ್ರೀ ನವಕಲ್ಯಾಣಮಠ, ಭೂಸಗಲ್ಲಿ ಧಾರವಾಡ.

## ಗಾಯತ್ರೀ ಮಹತ್ವ

ಮೂಲ ಲೇಖಕರು, ಶ್ರೀ ಸ್ವಾಮಿ ಪ್ರೇಮ ಭಿಕ್ಷು ಸರಸ್ವತಿ. ಅನುವಾದಕರು, ಶ್ರೀ ಪಂ. ಮಂಜುನಾಥ ಶಾಸ್ತ್ರಿ. ಸಿದ್ಧಾಂತ ಭೂಷಣ, ಸಾಹಿತ್ಯ ರತ್ನ, ಪ್ರಕಾಶಕರು, ಆರ್ಯಾವರ್ತ ಪ್ರಕಾಶನ, ೯೮೩ ಶ್ರೀ ರಾಮಪುರ, ಬೆಂಗಳೂರು ೩. ಪುಟ ೭೭. ಬೆಲೆ ೧೦ ಆಣೆ.

## ಸಂಧ್ಯಾರಹಸ್ಯ

ಲೇಖಕರು, ಪಂ. ಗೋಪಾಲಾಚಾರ್ಯ ಮಾಹುಲಿ. ಪ್ರಕಾಶಕರು, ಡಾ. ಬಿ. ಜಿ. ದೇಶಪಾಂಡೆ. ಕರ್ನಾಟಕ ಬ್ರಾಹ್ಮಣ ಶಿಕ್ಷಣ ಸಂಘ ವಾಡೀ ವಿಹಾರ ವಿದ್ಯಾಲಯ ಮಾಟುಂಗಾ. ಮುಂಬಯಿ.

## ಲಿಂಗ ಪೂಜೆ (ವಿಧಾನ ಮತ್ತು ತಾತ್ವಿಕ ವಿವೇಚನೆ)

ಪುಟ ೨೨. ಬೆಲೆ ೩ ಆಣೆ.

## ಲಿಂಗ ಪೂಜೆ ಮತ್ತು ಇತರ ವಿಧಾನಗಳು

ಪುಟ ೫೩, ಬೆಲೆ ೬ ಆಣೆ.

ಇಂದು ನಾವು ನಮ್ಮದೆಂಬುದನ್ನೆಲ್ಲ ಮರೆತು ಪರಂಪರಾಗತ ಆಚಾರ ವಿಚಾರಗಳಿಗೆ ಹೊಸಬರಾಗಿ ಸ್ವಸಂಸ್ಕೃತಿಯ ಜ್ಞಾನವಿಲ್ಲದೆ ಹೇಗೋ ಬಾಳು ಸಾಗಿಸುತ್ತಿದ್ದೇವೆ. ಸಂಸ್ಕೃತಿಯ ಮಾತುಗಳಾಡುತ್ತೇವೆ ನಿಜ. ಆದರೆ ಅದೆಂದರೇನು ಎಂಬುದರ ಸ್ಪಷ್ಟಕಲ್ಪನೆ ಯಾರಿಗೂ ಇಲ್ಲ. ಒಬ್ಬರನ್ನು ಅನುಕರಿಸ ಹೋಗಿ ನಮ್ಮದಕ್ಕೆ ಎರವಾದೆವು. ಇನ್ನೊಬ್ಬರದು ರಕ್ತಗತವಾಗಲಿಲ್ಲ. ಇಂದಿನ ಸಮಾಜದ ಸ್ಥಿತಿಯು ಅಧೋಗತಿಯಲ್ಲಿದೆಯೋ ಉನ್ನತಿಯಲ್ಲಿದೆಯೋ ಎಂಬುದು ಕೂಡ ತಿಳಿಯಲಾರದಷ್ಟು ದಿಗ್ಭ್ರಾಂತಿ ಎಲ್ಲೆಲ್ಲೆಯೂ ಕಂಡು ಬರುತ್ತದೆ. ಆಯಾ ಜಾತಿ ಮತ ಪಂಥದವರು ಅನುಸರಿಸಬೇಕಾದ ನಿತ್ಯನೈಮಿತ್ತಿಕ ಆಚರಣಗಳನ್ನೂ ಗಾಯತ್ರೀ ಮಹತ್ವವನ್ನೂ ಸಂಧ್ಯಾ ರಹಸ್ಯಗಳನ್ನೂ ಲಿಂಗ ಪೂಜಾ ವಿಧಾನಾದಿ ವಿವೇಚನಗಳನ್ನೂ ಬರೆದು ಅರುಹಬೇಕಾಗಿ ಬಂದಿದೆ. ಸಂಸ್ಕಾರ ವಿಹೀನರಾದ ಇಂದಿನವರಿಗೆ ಮೇಲ್ಕಾಣಿಸಿದ ಐದೂ ಪುಸ್ತಿಕೆಗಳು ದಾರಿ ತೋರುವವು.

## ಚಿಕ್ಕ ಕತೆ

(೩ನೇ ಪುಟದಿಂದ)

ಉಪಯೋಗವೇನಿದೆ? ನೀವೇ ಯೋಚಿಸಿ. ನಿಮಗೆ ಹೇಳುವಷ್ಟು ಪ್ರಾಜ್ಞ ಅಲ್ಲ ನಾನು. ಸರಿಯಾದ ಕಡೆ ಹೆಣ್ಣು ನೋಡಿ ವಿವಾಹವಾಗಿರಿ. ನಾವು ಬಂದು ನೋಡುತ್ತೇವೆ. ಎಂದೋ ಒಂದು ಕಾಲದಲ್ಲಿ ನಡೆದ ಯಾವುದೇ ಒಂದು ಪ್ರಸಂಗವನ್ನೇ ಮನಸ್ಸಿನಲ್ಲಿಟ್ಟುಕೊಂಡು ಇಂದಿನವರೆಗೂ ಈ ಜೀವನ ನಡೆಸುತ್ತಿದ್ದೀರಲ್ಲ. ನನ್ನ ಯೋಜನೆಯಲ್ಲಿ ನಿಮ್ಮ ಸುಖವನ್ನೇ ಸಂಪೂರ್ಣವಾಗಿ ಮರೆತಿದ್ದೀರಿ. ನಿಮ್ಮ ಪ್ರೇಮವನ್ನು ನಾನು ಯಾವ ಬಗೆಯಿಂದ ಸ್ವೀಕರಿಸಬೇಕೋ ನನಗೆ ತಿಳಿಯದು. ನನ್ನನ್ನು ನೀವಾಗಲೇ ಮರೆತಿದ್ದೀರಿ ಎಂದುಕೊಂಡಿದ್ದೆ. ನಿಮಗಂತೂ ಈ ಹುಚ್ಚು ಇನ್ನೂ ಬಿಟ್ಟಿಲ್ಲ. ನಾನು ಹೇಳಿದ ಮಾತೇನು.... ವಿವಾಹದ್ದು?'' ಎಂದಳು ಲೀಲ. ನನ್ನ ದೃಷ್ಟಿ ನೆಲಕ್ಕಂಟಿತ್ತು. ಪಾಪ ಆಕೆಗೆ ಹೇಗೆ ತಿಳಿಯಬೇಕು, ನನ್ನ ಹೃದಯ ಮತ್ತೊಬ್ಬಳನ್ನು ಒಲಿಯದೆಂದು. ತುಸು ಹೊತ್ತಿನ ಬಳಿಕ ನಾನೆಂದೆ. "ಆ ವಿಷಯ ಈಗೇಕೆ ಲೀಲ... ಆಗದ ವಿಷಯವನ್ನು ಕುರಿತು ಯೋಚಿಸಿ ಫಲವೇನು? ನನ್ನನ್ನು ನಾಳೆ ಬೀಳ್ಕೊಡಲು ಅಣಿಯಾಗು" ಎಂದೆ. ಸ್ವರದಲ್ಲಿ ಸಂಕಲ್ಪದ ಛಾಯೆ ಇತ್ತು. ಆಕೆಯ ಕಣ್ಣು ಹನಿಗೂಡಿದುವು. ಆಕೆಗೂ ತನ್ನ ಹಿಂದಿನ ನಿರಾಶಾಜೀವನ ಸ್ಮೃತಿಗೆ ಬಂದಿರಬೇಕು. ಲೀಲ ಸುಮ್ಮನೆ ಮೇಲೆದ್ದು ಹೋದಳು.

ಮರುದಿನ ಪ್ರಯಾಣಕ್ಕೆ ಸಿದ್ಧನಾಗಿ ಹೊರಟು ನಿಂತೆ. ಆಕೆಯ ಪತಿ ಆಗಾಗಲೇ ಕಚೇರಿಗೆ ನಡೆದಿದ್ದ. ನನ್ನನ್ನು ರೇಲ್ವೆ ನಿಲ್ದಾಣಕ್ಕೆ ಕೊಂಡೊಯ್ಯಲು ಆಕೆಯ ಕಾರು ನಿಂತಿತ್ತು. ಮಾಧು ತಾಯಿಯ ಬಳಿ ನಿಂತಿದ್ದ. ಆತ ತಾಯಿಯ ಜಡೆಯ ಜತೆಯಲ್ಲಿ ಆಟವಾಡುತ್ತಿದ್ದ. ಮೆಲ್ಲನೆ ನಾನೆಂದೆ "ಲೀಲ ಒಂದು ಮಾತು". ಆಕೆ ಮುಖವನ್ನು ಮಾತ್ರ ಮೇಲೆತ್ತಿದಳು, ಮಾತಾಡಲಿಲ್ಲ. "ಮನಮೋಹನ ಮುಖುಡಾ", ಒಮ್ಮೆ ಹಾಡು". ಆಗದೆಂದು ಆಕೆ ತಲೆಯಲ್ಲಾಡಿಸಿದಳು. "ಏಕೆ, ನನ್ನ ಮಾತೆಂದರೆ ಅಷ್ಟು ಕೀಳಾಯಿತೆ? " ನಾನೆಂದೆ. ಆಕೆ ನನ್ನನ್ನು ದಿಟ್ಟಿಸಿದಳು. ತುಸು ಹೊತ್ತು ತೆಪ್ಪಗಿದ್ದು ಅನಂತರ ಹಾಡತೊಡಗಿದಳು. ಹಾಡಿನಲ್ಲೇನೋ ಅದೇ ಚೆಲುವಿತ್ತು, ಮಾಧುರ್ಯವಿತ್ತು; ಆದರೆ ಅದೇ ಭಾವವಿರಲಿಲ್ಲ, ವ್ಯಥೆಯಿರಲಿಲ್ಲ. ಹಾಡೇನೋ ಮುಗಿಯಿತು. ಆದರೆ ಕೊನೆಯ ನೂರಾರು ಕಡೆಗಳಿಂದ ಅದೇ ಹಾಡು ನನಗೆ ಕೇಳಿ ಬರುತ್ತಿತ್ತು. ಕೊನೆಗೊಮ್ಮೆ ಮೇಲೆದ್ದು ನಿಂತೆ. ಮಾಧುವನ್ನು ಮೇಲೆತ್ತಿ ಮುತ್ತಿಟ್ಟೆ. ತನ್ನ ಮಗನಿಗೆ ನನ್ನ ಹೆಸರನ್ನು ಲೀಲ ಏಕಿಟ್ಟಳೋ ನನಗೆ ಮಾತ್ರ ತಿಳಿಯಲಿಲ್ಲ. ತಾಯಿಯ ತೋಳಲ್ಲಿದ್ದ ಶಶಿಯ ಗಲ್ಲವನ್ನೊಮ್ಮೆ ಹಿಡಿದು ಮೆಲ್ಲನೆ ಅಲುಗಿಸಿದೆ. ಬಳಿಕ ಕಾರಿನ ಬಳಿ ನಡೆದೆ. ನಾನು ಕಾರಿನಲ್ಲಿ ಕುಳಿತಾಗ ಲೀಲ ಹೊರಗೆ ಬಂದು ನಿಂತಳು. ಆಕೆಯ ಕಣ್ಣುಗಳು ಆಗಲೇ ಮಂಜಾಗಿದ್ದುವು. "ನಿನ್ನ ಅಕ್ಕರೆಗಿಂತ ಹೆಚ್ಚಾಗಿ ಈ ಹದಿನೈದು ದಿನಗಳು ನನ್ನನ್ನು ಉಪಚರಿಸಿದ್ದೀಯೆ, ಲೀಲ" ನಾನೆಂದೆ ತೊದಲುತ್ತ. ಆಕೆ ನನ್ನನ್ನೇ ದಿಟ್ಟಿಸುತ್ತಿದ್ದಳು. ಇನ್ನೊಮ್ಮೆ ನಗುವಿನ ಮೈದವಲು ಕೈಚಾಚಿದಾಗ ನನ್ನ ಬೆರಳುಗಳ ಮೇಲೆ ಬಿಸಿಹನಿಯೊಂದು ಉರುಳಿತು. ಲೀಲಳ ತುಟಿಗಳು ಅದುರುತ್ತಿದ್ದುವು. ಕೊನೆಗೆ ನಾನೆಂದೆ "ಲೀಲ, ಮಾರನೆಯದು. "ಕಮಲ", ಶ್ರೀಯತೆ. ಮರೆಯಬೇಡ. ಲೀಲ ತಲೆಯಾಡಿಸಿದಳು. ನಾನು ಡ್ರೈವರಿಗೆ ಮುಂದೆ ಹೋಗಲು ಹೇಳಿದೆ. ಏನೋ ಹೇಳಲು ನಾನು "ಲೀಲ" ಎಂದೆ, ಅಷ್ಟರಲ್ಲಿ ಮಾಧು ಓಡಿಬಂದ. ಲೀಲ ಮಾಧುವನ್ನು ತೋಳಿಗೆತ್ತಿಕೊಂಡಳು.

ಕಾರು ಮುಂದೆ ಹೋಯಿತು. ಕಿಟಕಿಯಲ್ಲಿ ತಲೆಯಿಟ್ಟು "ಲೀಲ ನಮಸ್ಕಾರ ಮರೆಯದಿರು. "ಕಮಲ" ಎಂದೆ ಗಟ್ಟಿಯಾಗಿ. "ನಮಸ್ಕಾರ ಮಾಧು" ಎಂದಳು ಲೀಲ ಗಟ್ಟಿಯಾಗಿ. ಬಿಳಿ ಸೀರೆಯ ಸೆರಗನ್ನು ಹಾರಾಡಿಸಿ ನನಗೆ ದೂರದಿಂದ ಮತ್ತೆ ನಿರೋಪ ಕೊಟ್ಟಳು. ನಾನು ಕಿಟಕಿಯಿಂದ ತಲೆ ಹಿಂದಕ್ಕೆ ತೆಗೆದು ನೇರವಾಗಿ ಕುಳಿತೆ.

ರೈಲು ಮತ್ತೆ ಬೆಂಗಳೂರಿನೆಡೆಗೆ ಧಾವಿಸುತ್ತಿತ್ತು. ರಭಸದಿಂದ ತೂರಿಬಂದ ಗಾಳಿ ತಲೆಗೂದಲನ್ನು ಅಲ್ಲಾಡಿಸುತ್ತಿತ್ತು. ಎವೆ ಮುಚ್ಚಿದೆ. ಎಲ್ಲಿಂದಲೋ ಕೇಳಬಂದಿತು, "ಮನಮೋಹನ ಮುಖುಡಾ ಮೂಡಗಯೇ."



ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರವರು ಮುದ್ರಿಸಿ ಪ್ರಕಟಿಸಿದರು.